ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 21 ಗುರುವಾರ 2026

47

ಸಂಪುಟ: 47 | ಸಂಚಿಕೆ: 35 | ಪುಟಗಳು: 12


ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4

ಹಸಿರು ನಮ್ಮ ಉಸಿರು





ಪ್ರೊಫೆಸರ್ ಶಿವರಾಮ್ ಮಳವಳ್ಳಿ

(ನವೆಂಬರ್ 21, 1949 – ಮೇ 19, 2026)

ಇಂಡಸ್ ಟ್ರಸ್ಟ್‌ನ ಟ್ರಸ್ಟಿ, ದಾರ್ಶನಿಕ ಶಿಕ್ಷಣ ತಜ್ಞ ಮತ್ತು ಮಾರ್ಗದರ್ಶಕರಾದ ಪ್ರೊಫೆಸರ್ ಶಿವರಾಮ್ ಮಳವಳ್ಳಿ ಅವರ ಅಗಲಿಕೆಯ ಸಂತಾಪ ಸೂಚಿಸುತ್ತೇವೆ.

ದುಃಖತಪ್ತ: ಇಂಡಸ್ ಟ್ರಸ್ಟ್



ಮೈಸೂರಿನ ಡಾ.ಅಗರ್ವಾಲ್ ಕಣ್ಣಿನ ಆಸ್ಪತ್ರೆಗೆ 10 ವರ್ಷದ ಸಂಭ್ರಮ



ಮೈಸೂರಿನ ಡಾ.ಅಗರ್‌ವಾಲ್ ಕಣ್ಣಿನ ಆಸ್ಪತ್ರೆಯು ತನ್ನ 10 ವರ್ಷಗಳ ಸೇವೆಯನ್ನು ಅರ್ಥಪೂರ್ಣವಾಗಿ ಆಚರಿಸಿಕೊಂಡಿತು.

ಮೈಸೂರು, ಮೇ 20–ಮೈಸೂರಿನ ಡಾ.ಅಗರ್‌ವಾಲ್ ಕಣ್ಣಿನ ಆಸ್ಪತ್ರೆಯು ತನ್ನ 10 ವರ್ಷಗಳ ಸೇವೆಯನ್ನು ವಿಶೇಷವಾಗಿ ರೋಗಿಗಳೊಂದಿಗೆ ಆಚರಿಸಿಕೊಂಡಿದೆ.

ಬುಧವಾರ ಬೆಳಗ್ಗೆ ಆಸ್ಪತ್ರೆ ಆವರಣದಲ್ಲಿ ನಡೆದ ಸಂಭ್ರಮಾಚರಣೆ ಕಾರ್ಯಕ್ರಮವು ಉನ್ನತ ಮಟ್ಟದ ಕಣ್ಣಿನ ಆರೈಕೆ, ಶಸ್ತ್ರಚಿಕಿತ್ಸಾ, ಪರಿಣಿತಿ ಹಾಗೂ ಉತ್ತಮ ಫಲಿತಾಂಶಗಳ ದಶಕದೊಂದಿಗೆ ಆಚರಿಸಿತು. ಕಾರ್ಯಕ್ರಮಕ್ಕೆ ಮಾಜಿ ಸಂಸದ ಪ್ರತಾಪ್ ಸಿಂಹ ಮುಖ್ಯ ಅತಿಥಿಯಾಗಿ ಆಗಮಿಸಿ, ಕುವೆಂಪುನಗರ ಶಾಖೆಯಲ್ಲಿ 'ದಶಕದ ಶ್ರೇಷ್ಠತೆ' ಸ್ಮಾರಕ ಫಲಕವನ್ನು ಇದೇ ಸಂದರ್ಭದಲ್ಲಿ ಅನಾವರಣ ಗೊಳಿಸಿದರು. ಮೈಸೂರು ನಗರ ಡಿಸಿಪಿ ಸಿದ್ದನಗೌಡ ಪಾಟೀಲ್ ಮಾತನಾಡಿ, ಡಾ.ಅಗರ್ವಾಲ್ಸ್ ಕಣ್ಣಿನ ಆಸ್ಪತ್ರೆ ಪ್ರಾರಂಭವಾದ ಮೊದಲ ದಿನದಿಂದಲೂ ಉತ್ತಮ ಹಾಗೂ ಗುಣಮಟ್ಟದ ಸೇವೆ ಒದಗಿಸುತ್ತಾ ಬಂದಿದೆ. ಗ್ರಾಹಕರೂ ಇಲ್ಲಿನ ಸೇವೆಗೆ ತೃಪ್ತರಾಗಿದ್ದಾರೆ. ಅಲ್ಲದೇ ಗುಣಮಟ್ಟದ ಯಂತ್ರೋಪಕರಣಗಳ ಮೂಲಕ ಅತ್ಯಾಧುನಿಕ ಚಿಕಿತ್ಸಾ ವಿಧಾನಗಳು ಈ ಆಸ್ಪತ್ರೆಯಲ್ಲಿ ಲಭ್ಯವಿದ್ದು, ಇದರ ಸದುಪಯೋಗ ಪಡಿಸಿಕೊಳ್ಳುವಂತೆ ಸಲಹೆ ನೀಡಿದರು.

ಮುಖ್ಯ ವೈದ್ಯಕೀಯ ಸೇವಾ ಮುಖ್ಯಸ್ಥರಾದ ಡಾ.ಕವಿತಾ ವಾಡಿ ಹಾಗೂ ಡಾ. ಪವನ ವಿ, ಜೋಶಿ, ಅವರು ಮೈಸೂರಿನ ಕೆಲವು ಪ್ರಮುಖ ರೋಗಿಗಳೊಂದಿಗೆ ಸಂಭ್ರಮವನ್ನು ಹಂಚಿಕೊಂಡರು.

ಮಳೆ ಕೊರತೆ ಸಾಧ್ಯತೆ ಹಿನ್ನೆಲೆ: ಕುಡಿಯುವ ನೀರಿಗೆ ಸಮಸ್ಯೆಯಾಗದಂತೆ ಯೋಜನೆ ರೂಪಿಸಿ

ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಸೂಚನೆ



ಮೈಸೂರು ಜಿಪಂ ಸಭಾಂಗಣದಲ್ಲಿ ಡಿಸಿ ಲಕ್ಷ್ಮೀಕಾಂತ್ ರೆಡ್ಡಿ, ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆ ನಡೆಸಿದರು.

ಮೈಸೂರು, ಮೇ 20(ಎಂಕೆ)–ಪೂರ್ವ ಮುಂಗಾರು (ಏಪ್ರಿಲ್ ಮತ್ತು ಮೇ ತಿಂಗಳು) ಮಳೆಯ ಕೊರತೆ ಉಂಟಾಗಿದ್ದು, ಮುಂದಿನ ದಿನಗಳಲ್ಲಿ ಮಳೆ ಸರಿಯಾಗಿ ಬಾರದಿದ್ದಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗುವ ಸಾಧ್ಯತೆ ಇರುವುದರಿಂದ ಕೂಡಲೇ ಯೋಜನೆ ರೂಪಿಸುವಂತೆ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ್ ರೆಡ್ಡಿ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಮೈಸೂರು ಜಿಪಂನ ಡಿ.ದೇವರಾಜ ಅರಸು ಸಭಾಂಗಣದಲ್ಲಿ ಬುಧವಾರ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆ ನಡೆಸಿದ ಅವರು, ಅಣೆಕಟ್ಟೆಯಲ್ಲಿ ಲಭ್ಯವಿರುವ ನೀರಿನ ಆಧಾರದ ಮೇಲೆ ಜುಲೈ ತಿಂಗಳವರೆಗೆ ಕುಡಿಯುವ ನೀರಿಗೆ ತೊಂದರೆಯಾಗುವುದಿಲ್ಲ. ಆದರೆ ಈಗಿನಿಂದಲೇ ಮಿತವಾಗಿ ನೀರನ್ನು ಬಳಸಿ, ಬಳಸಿದ ನೀರು ಪೋಲಾಗದಂತೆ ಎಚ್ಚರಿಕೆ ವಹಿಸುವಂತೆ ತಿಳಿಸಿದರು.

ಸ್ಥಳೀಯ ಸಂಸ್ಥೆಗಳು ತಮ್ಮ ವ್ಯಾಪ್ತಿಯಲ್ಲಿ ಕುಡಿಯುವ ನೀರಿಗೆ ತೊಂದರೆಯಾಗುವ ಸ್ಥಳಗಳನ್ನು ಗುರುತಿಸಿ ಸದರಿ ಸ್ಥಳಗಳಲ್ಲಿ ಇರುವ ಖಾಸಗಿ ಬೋರ್‌ವೆಲ್‌ಗಳ ಪಟ್ಟಿ ಮಾಡಿಕೊಂಡು ಅವಶ್ಯಕತೆ ಇದ್ದಂತಹ ಸಂದರ್ಭದಲ್ಲಿ ನೀರು ಪಡೆಯಲು ಸಿದ್ಧತೆ ಮಾಡಿಕೊಳ್ಳಬೇಕು. ಸಾರ್ವಜನಿಕರು ಕುಡಿಯುವ ನೀರಿನ ತೊಂದರೆಯ ಬಗ್ಗೆ ಕರೆ ಮಾಡಿದಾಗ ಸಕಾರಾತ್ಮಕವಾಗಿ ಸ್ಪಂದಿಸಿ, ಸ್ಥಳ ಪರಿಶೀಲಿಸಿ ತ್ವರಿತ ಪರಿಹಾರ ಕಲ್ಪಿಸಬೇಕು. ಬೋರ್‌ವೆಲ್‌ಗಳ ರೀಡ್ರಿಲ್, ಹೊಸ ಬೋರ್‌ವೆಲ್ ಕೊರೆಯುವಿಕೆ, ಟ್ಯಾಂಕರ್ ಮೂಲಕ ನೀರು ಸರಬರಾಜು, ಕುಡಿಯುವ ನೀರಿನ ಪೈಪ್‌ಲೈನ್ ಜೋಡಣೆ ಜೊತೆಗೆ ಕುಡಿಯುವ ನೀರಿನ ತೊಂದರೆ ಉಂಟಾಗಬಹುದಾದ ಸ್ಥಳಗಳಿಗೆ ನಿಗದಿತವಾಗಿ ಭೇಟಿ ನೀಡಿ ಸಮಸ್ಯೆ ಉಲ್ಬಣವಾಗುವ ಮೊದಲೇ ಪರಿಹರಿಸಿ ಎಂದು ಸೂಚಿಸಿದರು.

ಶಿಥಿಲವಾಗಿರುವ ಕಟ್ಟಡಗಳ ಪಟ್ಟಿ ಮಾಡಿ..

ವಿವಿಧ ಇಲಾಖೆಯ ವ್ಯಾಪ್ತಿಯಲ್ಲಿ ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳು ಗಾಳಿ–ಮಳೆಗೆ ಬೀಳುವ ಸಾಧ್ಯತೆ ಇದ್ದಲ್ಲಿ ತಕ್ಷಣವೇ ಅವುಗಳ ಪಟ್ಟಿ ಮಾಡಿ ಎರಡು ದಿನದೊಳಗಾಗಿ ಕಚೇರಿಗೆ ಸಲ್ಲಿಸುವಂತೆ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ತಿಳಿಸಿದರು. ಶಿಥಿಲಾವಸ್ಥೆಯಲ್ಲಿರುವ ಕಟ್ಟಡ ಮಳೆ ಗಾಳಿಯಿಂದ ಬಿದ್ದು ಪ್ರಾಣ ಹಾನಿಯಾದಲ್ಲಿ ಆಯಾ ಇಲಾಖೆ ಅಧಿಕಾರಿಗಳೇ ಜವಾಬ್ದಾರಿ ಹೊಂದಬೇಕಾಗುತ್ತದೆ. ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳನ್ನು ಆಯಾ ಇಲಾಖೆಯವರು ತಮ್ಮ ಇಲಾಖಾ ಅನುದಾನದಿಂದ ತೆರವುಗೊಳಿಸಬೇಕಿರುವುದರಿಂದ ಪಟ್ಟಿ ನೀಡಿದಲ್ಲಿ ಜಿಲ್ಲಾ ವಿಪತ್ತು ನಿರ್ವಹಣಾ ಸಮಿತಿ ಸಭೆಯ ನಡಾವಳಿಯಲ್ಲಿ ಸೇರಿಸಿ ತೆರವುಗೊಳಿಸುವಂತೆ ಸೂಚನೆ ನೀಡಲಾಗುವುದು. ಹಾಗೆಯೇ ಪಾರಂಪರಿಕ ಕಟ್ಟಡವಾಗಿದ್ದು, ಶಿಥಿಲಾವಸ್ಥೆಯಲ್ಲಿದ್ದರೆ ತಕ್ಷಣವೇ ಲೋಕೋಪಯೋಗಿ ಇಲಾಖೆಯಿಂದ ಸ್ಟ್ರಕ್ಚರ್ ಸ್ಟೆಬಿಲಿಟಿ ಕುರಿತ ವರದಿ ಪಡೆದು ವರದಿ ಸಲ್ಲಿಸುವಂತೆ ತಿಳಿಸಿದರು.

ಜಂಟಿ ಕೃಷಿ ನಿರ್ದೇಶಕ ರವಿ ಮಾತನಾಡಿ, ಜಿಲ್ಲೆಯಲ್ಲಿ ಏಪ್ರಿಲ್ ತಿಂಗಳಿನಲ್ಲಿ ಶೇ.85ರಷ್ಟು ಹಾಗೂ ಮೇ ತಿಂಗಳಿನಲ್ಲಿ(ಇಲ್ಲಿಯವರೆಗೆ) ಶೇ.24ರಷ್ಟು ಮಳೆಯ ಕೊರತೆ ಉಂಟಾಗಿದೆ. 38,000 ಹೆಕ್ಟೇರ್ ಪ್ರದೇಶದಲ್ಲಿ ತಂಬಾಕು ಬೆಳೆ ಬಿತ್ತನೆಯಾಗಿದ್ದು, ಹೆಚ್ಚು ಭಾಗ ಬೋರ್‌ವೆಲ್ ನೀರನ್ನು ಆಧರಿಸಿದೆ. ಜಿಲ್ಲೆಯಲ್ಲಿ ಬಿತ್ತನೆ ಬೀಜ ಹಾಗೂ ರಸಗೊಬ್ಬರದ ಕೊರತೆ ಇಲ್ಲ. ಆದರೆ, ಮಳೆ ಬಾರದೇ ಬಿತ್ತನೆಯನ್ನು ಮುಂದಕ್ಕೆ(ಸೆಪ್ಟೆಂಬರ್‌ಗೆ) ಹೋದರೆ ಅಂತಹ ಸಂದರ್ಭದಲ್ಲಿ ಬೆಳೆಯಲು ರಾಗಿಯನ್ನು ತಡವಾಗಿ ಇಳುವರಿ ನೀಡುವ ಬೀಜದ ಬಿತ್ತನೆಯನ್ನು ಪ್ರೋತ್ಸಾಹಿಸಲು ಯೋಜನೆ ಸಿದ್ಧಪಡಿಸಲಾಗಿದೆ ಎಂದರು. ಸಭೆಯಲ್ಲಿ ಜಿಪಂ ಸಿಇಓ ಎಸ್.ಯುಕೇಶ್ ಕುಮಾರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕುಮಾರಸ್ವಾಮಿ, ಅಗ್ನಿಶಾಮಕ ಅಧಿಕಾರಿ ಗುರುರಾಜ್, ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಮಂಜುನಾಥ್ ಅಂಗಡಿ ಮತ್ತಿತರರು ಉಪಸ್ಥಿತರಿದ್ದರು.

'ಆನಿಕಾ' ವಜ್ರ ಸಂಗ್ರಹ ಅನಾವರಣ



ಮೈಸೂರಿನ ಬಿಎನ್ ರಸ್ತೆಯ ಸಬ್–ಅರ್ಬನ್ ಬಸ್ ನಿಲ್ದಾಣದ ಬಳಿ ಇರುವ ಮಲಬಾರ್ ಗೋಲ್ಡ್ & ಡೈಮಂಡ್ಸ್‌ನಲ್ಲಿ ಅತಿಥಿಗಳಾದ ಶ್ರೀಮತಿ ಬೃಂದಾ, ಕುಮಾರಿ ದಾಮಿನಿ ಮತ್ತು ಕುಮಾರಿ ದಿವ್ಯಶ್ರೀ ಮತ್ತು ಉಪ ಅಂಗಡಿ ಮುಖ್ಯಸ್ಥ ದಯಾನಂದ್ ಮತ್ತು ಸಹಾಯಕ ಅಂಗಡಿ ಮುಖ್ಯಸ್ಥ ಮುಹಮ್ಮದ್ ಅನ್ಸಾಜ್ ಅವರ ಸಮ್ಮುಖದಲ್ಲಿ 'ಆನಿಕಾ' ಎಂಬ ಡಿವೈನ್ ನ್ಯಾಚುರಲ್ ಡೈಮಂಡ್ ಕಲೆಕ್ಷನ್ಸ್ ಅನ್ನು ಅನಾವರಣ ಗೊಳಿಸಲಾಯಿತು. ಈವೇಳೆ ನಿರ್ವಹಣಾ ತಂಡದ ಸದಸ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಯೋಗಾನರಸಿಂಹಸ್ವಾಮಿ ದೇವಸ್ಥಾನದಲ್ಲಿ ಮೇ 25ರಿಂದ ಕುಂಭಾಭಿಷೇಕ ಮಹೋತ್ಸವ

ಮೈಸೂರು, ಮೇ 20–ಮೈಸೂರಿನ ವಿಜಯನಗರದಲ್ಲಿರುವ ಶ್ರೀ ಯೋಗ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ಶ್ರೀ ಯೋಗನರಸಿಂಹಸ್ವಾಮಿ ಕುಂಭಾಭಿಷೇಕ ಮಹೋತ್ಸವವನ್ನು ಮೇ 25ರಿಂದ 27ರವರೆಗೆ ಏರ್ಪಡಿಸಲಾಗಿದೆ. ಮೇ 25ರಂದು ಬೆಳಗ್ಗೆ 9 ಗಂಟೆಗೆ ದೇವರಿಗೆ ಅಭಿಷೇಕ, ಲಕ್ಷಾರ್ಚನೆ ಜೊತೆಗೆ ಮಹಿಳಾ ಸಂಘದಿಂದ ಲಲಿತಾ ಸಹಸ್ರನಾಮ ಪಾರಾಯಣ ನಡೆಯಲಿದೆ. ಮೇ 26ರಂದು ಬೆಳಗ್ಗೆ 9 ಗಂಟೆಗೆ ದೇವರಿಗೆ ಸಹಸ್ರ ಕಳಶಾಭಿಷೇಕ ಮತ್ತು ಮಹಿಳಾ ಸಂಘದಿಂದ ಸೌಂದರ್ಯ ಲಹರಿ ಪಾರಾಯಣ ನೆರವೇರಲಿದೆ. ಮೇ 27ರಂದು ಬೆಳಗ್ಗೆ 9 ಗಂಟೆಗೆ ಅಖಂಡ ಮಹಾ ಸುದರ್ಶನ ಹೋಮ ಹಾಗೂ ವಿಷ್ಣು ಸಹಸ್ರನಾಮ ಪಾರಾಯಣ ವಿರಲಿದ್ದು, ಮಧ್ಯಾಹ್ನ 12 ಗಂಟೆಗೆ ಪೂರ್ಣಾಹುತಿ ನಡೆದು 12.30ಕ್ಕೆ ಅನ್ನ ಸಂತರ್ಪಣೆ ಆಯೋಜಿಸಲಾಗಿದೆ ಎಂದು ದೇವ ಸ್ಥಾನದ ಆಡಳಿತಾಧಿಕಾರಿ ಎನ್.ಶ್ರೀನಿವಾಸನ್ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಮೈಸೂರು: ಮೈಸೂರಿನ ನರಸಿಂಹ ರಾಜ ಮೊಹಲ್ಲಾದಲ್ಲಿರುವ ಟಿಎನ್‌ಎನ್ ಆದರ್ಶ ವಿದ್ಯಾರ್ಥಿನಿಲಯದಿಂದ 2026–27ನೇ ಸಾಲಿನ ಪ್ರವೇಶಾತಿಗೆ 5ರಿಂದ 10ನೇ ತರಗತಿ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ. ಆಸಕ್ತರು ಆಡಳಿತ ಕಚೇರಿಯಲ್ಲಿ ನಿಗದಿತ ಅರ್ಜಿ ಪಡೆದು, ಭರ್ತಿ ಮಾಡಿ ಸೂಕ್ತ ದಾಖಲೆಗಳೊಡನೆ ಸಲ್ಲಿಸಬೇಕು. ಮಾಹಿತಿಗೆ ಮೊ: 97393850 79, 9686768828, 9035414199 ಸಂಪರ್ಕಿಸುವಂತೆ ನಿಲಯದ ಕಾರ್ಯದರ್ಶಿ ಎಂ.ಪಾಟೀಲ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆರೆಯಲ್ಲಿ ಮೀನು ಹಿಡಿಯಲು ಹೋದ ಬಿಹಾರ ಮೂಲದ ಯುವಕ ನೀರುಪಾಲು



ಮೈಸೂರು ತಾಲೂಕು ಕೆ.ಹೆಮ್ಮನಹಳ್ಳಿಯ ಚಿಕ್ಕೆರೆಯಲ್ಲಿ ಮೀನು ಹಿಡಿಯಲು ಹೋಗಿ ನೀರು ಪಾಲಾಗಿರುವ ಬಿಹಾರ ಮೂಲದ ಅಮಿತ್‌ಕುಮಾರ್ ಶವ ಪತ್ತೆಗೆ ಅಗ್ನಿಶಾಮಕ ದಳದವರು ಶೋಧನೆ ನಡೆಸುತ್ತಿರುವ ದೃಶ್ಯ..

ಈಜಿ ದಡ ಸೇರಿದ ಇನ್ನಿಬ್ಬರು ಪಾರು

ಮೈಸೂರು, ಮೇ20(ಬಿಎಲ್‌ಯು)–ಕೆರೆಯಲ್ಲಿ ಮೀನು ಹಿಡಿಯಲು ಹೋದ ಬಿಹಾರಿ ಮೂಲದ ಮೂವರಲ್ಲಿ ಒಬ್ಬ ಯುವಕ ನೀರುಪಾಲಾದರೆ, ಇನ್ನಿಬ್ಬರು ಈಜಿ ದಡ ಸೇರಿ ಪ್ರಾಣಾಪಾಯದಿಂದ ಪಾರಾದ ಘಟನೆ ಮೈಸೂರು ತಾಲೂಕು ಕೆ.ಹೆಮ್ಮನಹಳ್ಳಿಯ ಚಿಕ್ಕೆರೆಯಲ್ಲಿ ಸಂಭವಿಸಿದೆ. ಬಿಹಾರ ಮೂಲದ ಅಮಿತ್ ಕುಮಾರ್ (27) ಮೃತಪಟ್ಟ ಯುವಕ.

ಮೇಘ ಪೌಲ್ಟ್ರಿ ಫಾರಂನಲ್ಲಿ ಕೆಲಸ ಮಾಡುತ್ತಿದ್ದ ಅಮಿತ್‌ಕುಮಾರ್ ಹಾಗೂ ಅವನ ಇಬ್ಬರು ಸ್ನೇಹಿತರು ನಿನ್ನೆ ಸಂಜೆ ಕೆ.ಹೆಮ್ಮನಹಳ್ಳಿಯ ಚಿಕ್ಕೆರೆಯಲ್ಲಿ ಮೀನು ಹಿಡಿಯಲು ಹೋಗಿದ್ದರು. ಕೆರೆಗೆ ಇಳಿದ ಈ ಮೂವರು ಮಧ್ಯ ಭಾಗದವರೆಗೆ ನಡೆದು ಹೋಗಿದ್ದಾರೆ. ಆದರೆ, ಸರಿಯಾಗಿ ಈಜು ಬಾರದ ಇವರು ಮುಳುಗುವ ಸ್ಥಿತಿ ತಲುಪಿದ್ದಾರೆ. ಈ ವೇಳೆ ಅಮಿತ್‌ಕುಮಾರ್ ಮುಳುಗಿದ್ದಾನೆ. ಸ್ನೇಹಿತ ನೀರಿನಲ್ಲಿ ಮುಳುಗುವುದನ್ನು ನೋಡಿ ಆಘಾತಕ್ಕೀಡಾದ ಇನ್ನಿಬ್ಬರು ಪ್ರಯಾಸದಿಂದ ಈಜಿ ದಡ ಸೇರಿದ್ದಾರೆ. ಇವರು ಈಜಿ ದಡ ಸೇರುವ ದೃಶ್ಯವನ್ನು ಗ್ರಾಮಸ್ಥರು ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದಾರೆ. ಅಮಿತ್‌ಕುಮಾರ್ ಶವ ಪತ್ತೆಗೆ ಬೆಳಗ್ಗೆಯಿಂದ ಸಂಜೆವರೆಗೆ ಅಗ್ನಿಶಾಮಕ ದಳದವರು ಹಾಗೂ ನುರಿತ ಈಜು ತಜ್ಞರು ಪ್ರಯತ್ನಿಸಿದ್ದಾರೆ. ಆದರೆ, ಆತನ ಶವ ಪತ್ತೆಯಾಗಿಲ್ಲ. ಶೋಧನಾ ಕಾರ್ಯ ಮುಂದುವರೆದಿದೆ. ಈ ಸಂಬಂಧ ಜಯಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಅಭಿನಂದನೆ...

ಮೈಸೂರಿನ ಜಯಲಕ್ಷ್ಮಿಪುರಂ ಠಾಣೆ ನೂತನ ಸರ್ಕಲ್ ಇನ್‌ಸ್ಪೆಕ್ಟರ್ ಪುರುಷೋತ್ತಮ್ ಅವರನ್ನು ಬಡವರಬಂಧು ಅಭಿಮಾನಿಗಳ ಸಂಘದಿಂದ ಅಭಿನಂದಿಸಲಾಯಿತು. ಈ ವೇಳೆ ಪಡುವಾರಹಳ್ಳಿ ಪಾಪಣ್ಣ, ಸುಣ್ಣದಕೇರಿ ರಮೇಶ್, ಸರೋಜಾ, ಭರತ್, ಆರ್.ಸತ್ಯನಾರಾಯಣ, ಗಾಂಧಿಗೌಡ, ಸುನಿಲ್, ವಿಕಾಸ್, ಹೇಮಂತ್‌ಕುಮಾರ್, ಶಿವರಾಜ್ ಇದ್ದರು.

ಶ್ರೀರಾಂಪುರ 2ನೇ ಹಂತದ ಎಸ್‌ಬಿಎಂ ಕಾಲೋನಿಯಲ್ಲಿ ನಾಯಿ ಹಾವಳಿ!

ಮೈಸೂರು, ಮೇ 20(ಎಸ್‌ಪಿಎನ್)–ಮೈಸೂರು ಶ್ರೀರಾಂಪುರ 2ನೇ ಹಂತದ ಎಸ್‌ಬಿಎಂ ಕಾಲೋನಿಯಲ್ಲಿ ನಾಯಿಗಳ ಹಾವಳಿ ಹೆಚ್ಚಾಗಿದೆ. ಕಳೆದ 15 ದಿನಗಳಿಂದ ಮನೆಮನೆಗೆ ದಿನಪತ್ರಿಕೆ, ಹಾಲು ಹಾಕುವವರು ಹಾಗೂ ರಸ್ತೆಯಲ್ಲಿ ಓಡಾಡುವವರು, ಆಡುವ ಮಕ್ಕಳಿಗೂ ಕಚ್ಚಿ ಗಾಯಗೊಳಿಸುತ್ತಿವೆ.

ಈ ನಾಯಿಗಳಿಗೆ ರೇಬಿಸ್ ಲಸಿಕೆ ನೀಡುವಂತೆ ಮೈಸೂರು ನಗರ ಪಾಲಿಕೆ ಅಧಿಕಾರಿಗಳನ್ನು ಎಸ್‌ಬಿಎಂ ಕಾಲೋನಿ ಸಾಂಸ್ಕೃತಿಕ ಮತ್ತು ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಲವು ಬಾರಿ ಒತ್ತಾಯಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಈ ಸಂಬಂಧ ಹಲವು ತಿಂಗಳಿಂದ ಸಂಬಂಧಪಟ್ಟ ಪಾಲಿಕೆ ಅಧಿಕಾರಿಗಳನ್ನು ಸಂಪರ್ಕಿಸಿ, ಈ ನಾಯಿಗಳಿಂದ ಮಕ್ಕಳು, ಮಹಿಳೆಯರು, ವೃದ್ಧರಿಗೆ ರಕ್ಷಣೆ ನೀಡಬೇಕು. ಬಡಾವಣೆಯ ಬೀದಿ ನಾಯಿಗಳನ್ನು ಹಿಡಿದು ರೇಬಿಸ್ ಲಸಿಕೆ ನೀಡಬೇಕು ಎಂದು ಸಂಘದ ಸದಸ್ಯ ಎಸ್.ವಿ.ರಾಮನಾಥ್ 'ಮೈಸೂರು ಮಿತ್ರ'ನ ಮೂಲಕ ಒತ್ತಾಯಿಸಿದರು.



ನಾಯಿಯಿಂದ ಕಚ್ಚಿಸಿಕೊಂಡು ಚಿಕಿತ್ಸೆ ಪಡೆದುಕೊಂಡವರು.

ಎಸ್‌ಬಿಎಂ ಕಾಲೋನಿ ಬ್ಲಾಕ್ ನಂ. 7, 8 ಮತ್ತು 9ರಲ್ಲಿ ನಾಯಿಗಳ ಸಂಖ್ಯೆ ವಿಪರೀತ ಹೆಚ್ಚಾಗಿದೆ. ಮನೆಮನೆಗೆ ದಿನ ಪತ್ರಿಕೆ ಹಂಚುವ ಹುಡುಗರು ಸೈಕಲ್‌ನಲ್ಲಿ ಹೋಗುವಾಗಲೇ ನಾಯಿಗಳು ಅಟ್ಟಾಡಿಸಿ ಕಚ್ಚುತ್ತಿವೆ. ಇದರಿಂದ ಹಲವು ಹುಡುಗರು ಹೆದರಿ ಕೆಳಗೆ ಬಿದ್ದು, ಗಾಯಗೊಂಡಿದ್ದಾರೆ. ಬಡಾವಣೆಯಲ್ಲಿ ಪತ್ರಿಕೆ, ಹಾಲು ಹಾಕಲು ಹಿಂದೇಟು ಹಾಕುತ್ತಿದ್ದಾರೆ.

ಅಂತೆಯೇ ಕಳೆದವಾರ ವ್ಯಕ್ತಿಯೊಬ್ಬರಿಗೆ ನಾಯಿ ಕಚ್ಚಿತ್ತು. ಆ ನಾಯಿಯು ಪಾಲಿಕೆ ಸಿಬ್ಬಂದಿಯ ಹಿಡಿದು, ರೇಬಿಸ್ ಲಸಿಕೆ ಹಾಕಲು ತೆಗೆದುಕೊಂಡು ಹೋಗುವಾಗ ದಾರಿ ಮಧ್ಯೆ ಸತ್ತು ಹೋಗಿತ್ತು. ಈ ನಾಯಿಯಿಂದ ಕಚ್ಚಿಸಿಕೊಂಡ ಮೂವರು ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದುಕೊಂಡಿದ್ದಾರೆ.

ಹಾಗಾಗಿ ಎಸ್‌ಬಿಎಂ ಕಾಲೋನಿ ನಾಯಿಗಳಿಗೆ ರೇಬಿಸ್ ವಾಕ್ಸಿನ್ ಕೊಡಿಸುವಂತೆ ಪ್ರಾಣಿದಯಾ ಸಂಘ, ಇತರೆ ಪ್ರಾಣಿ ಪ್ರಿಯರ ಗಮನಕ್ಕೂ ತಂದಾಗ ಈ ಸಮಸ್ಯೆಗೆ ಪರಿಹಾರ ನೀಡದೇ ದೂರು ಹೇಳಿದವರಿಗೆ ಸಾಂತ್ವನದ ಮಾತುಗಳನ್ನು ಹೇಳಿ ಹೋಗುತ್ತಿದ್ದಾರೆಯೇ ಹೊರತು ಯಾರೂ ಈ ಸಮಸ್ಯೆಯನ್ನು ಬಗೆಹರಿಸಲು ಮುಂದಾಗುತ್ತಿಲ್ಲ ಎಂದು ಆರೋಪಿಸಿದರು.

ನಾಳೆ 'ಕುಚುಕು' ಬಿಡುಗಡೆ

ಮೈಸೂರು,ಮೇ20(ಜಿಎ)–'ಕುಚುಕು' ಚಲನಚಿತ್ರವು ಮೇ 22ರಂದು ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದ್ದು, ವಿಭಿನ್ನ ಕಥಾ ಹಂದರವುಳ್ಳ ಈ ಚಿತ್ರವನ್ನು ಪ್ರೇಕ್ಷಕರು ಪ್ರೋತ್ಸಾಹಿಸಬೇಕೆಂದು ನಿರ್ದೇಶಕ ಮೈಸೂರು ರಾಜು ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಿತ್ರದ ನಾಯಕಿಯಾಗಿ ಪ್ರಿಯದರ್ಶಿನಿ, ಪ್ರಮುಖ ನಟರಾದ ಅರ್ಜುನ್ ಚೌಹಾನ್, ಬಸವರಾಜ್‌ಕುಮಾರ್ ಹಾಗೂ ಇನ್ನಿತರರು ನಟಿಸಿದ್ದಾರೆ. ಚಿತ್ರದಲ್ಲಿ ಸಾಕಷ್ಟು ಹಾಡುಗಳು ಹಾಗೂ ಸಾಹಸ ದೃಶ್ಯಗಳಿದ್ದು, ಮೈಸೂರು, ಮಂಗಳೂರು ಮೊದಲಾದ ಕಡೆ ಚಿತ್ರೀಕರಣವಾಗಿದೆ. ಸಾಕಷ್ಟು ಮಂದಿ ಹಿರಿಯ ಕಲಾವಿದರೂ ಇದ್ದಾರೆ. ಒಟ್ಟು 40 ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗುತ್ತಿದೆ ಎಂದರು. ಈ ವೇಳೆ ಸುದ್ದಿಗೋಷ್ಠಿಯಲ್ಲಿ ನಿರ್ಮಾಪಕರಾದ ನಾಗರತ್ನಮ್ಮ, ಎಂ.ಡಿ.ಪಾರ್ಥಸಾರಥಿ, ಗೋಲ್ಡ್ ಸುರೇಶ್, ವಕೀಲ ಲಕ್ಷ್ಮಣ್, ಮರಿಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ನಿಧನ

ನೆಲ್ಲಿರ ಡಿ.ವಾಸು



ಮೈಸೂರು, ಮೇ 20– ಮೈಸೂರಿನ ಎನ್.ಆರ್. ಮೊಹಲ್ಲಾ, ಕೆಸರೆ ಎರಡನೇ ಹಂತದ ನಿವಾಸಿ ಹಾಗೂ ನಿವೃತ್ತ ಸೈನಿಕ ನೆಲ್ಲಿರ ಡಿ.ವಾಸು (76) ಬುಧವಾರ ಮುಂಜಾನೆ ಮೈಸೂರಿನ ಸ್ವಗೃಹದಲ್ಲಿ ನಿಧನರಾದರು. ಮೃತರು ಬಿರುನಾಣಿ ಗ್ರಾಮದ ದಿವಂಗತ ಎನ್.ಎಂ.ದೇವಯ್ಯ ಅವರ ಪುತ್ರರಾಗಿದ್ದು, ಪತ್ನಿ ನೆಲ್ಲಿರ ತುಳಸಿ, ಪುತ್ರಿ ಪ್ರಾಣಿತ, ಓರ್ವ ಸಹೋದರ ನೆಲ್ಲಿರ ವಿಶ್ವನಾಥ್, ಮೂವರು ಸಹೋದರಿಯರಾದ ನೆಲ್ಲಿರ ಬೋಜಕ್ಕಿ, ವಿಶಾಲಾಕ್ಷಿ, ಕಸ್ತೂರಿ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಬಿರುನಾಣಿ ಪೊಲೀಸ್ ಠಾಣೆ ಸಮೀಪದ ಅವರ ತೋಟದ ಮನೆಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಡಾ.ಎಸ್.ಪ್ರಸನ್ನಕುಮಾರ್



ಪಶು ಸಂಗೋಪನಾ ಇಲಾಖೆ ನಿವೃತ್ತ ಸಹಾಯಕ ನಿರ್ದೇಶಕರು ಹಾಗೂ ಮೈಸೂರಿನ ವಿ.ವಿ. ಪುರಂ ನಿವಾಸಿ ಡಾ. ಎಸ್. ಪ್ರಸನ್ನಕುಮಾರ್ ಬೆಂಗಳೂರಿನ ಅವರ ಮಗನ ನಿವಾಸದಲ್ಲಿ ಮಂಗಳವಾರ ನಿಧನರಾದರು. ಶ್ರೀಯುತರು ನಿವೃತ್ತ ಪಶು ವೈದ್ಯರ ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.

ಮೃತರು ಪತ್ನಿ ಹೇಮಲತಾ, ಪುತ್ರಿ ರೂಪಾ, ಪುತ್ರ ರಾಜೇಂದ್ರ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಬೆಂಗಳೂರಿನ ಹೆಬ್ಬಾಳ್ ರುದ್ರಭೂಮಿಯಲ್ಲಿ ಬುಧವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರೇಣುಕಮ್ಮ



ಪಾಂಡವಪುರ ತಾಲೂಕಿನ ಕಡತನಾಳು ಗ್ರಾಮದ ನಿವಾಸಿ ಲೇಟ್ ರಾಜಣ್ಣನವರ ಧರ್ಮಪತ್ನಿ ಶ್ರೀಮತಿ ರೇಣುಕಮ್ಮ (57) ಮಂಗಳವಾರ ಬೆಳಗ್ಗೆ ನಿಧನರಾದರು. ಮೃತರು ಪುತ್ರ, ಸೊಸೆ, ಮಗಳು, ಅಳಿಯ, ಮೊಮ್ಮಕ್ಕಳು, ಸಹೋದರ–ಸಹೋದರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಗ್ರಾಮದ ಕಾಲುವೆ ಬಳಿಯ ರುದ್ರಭೂಮಿಯಲ್ಲಿ ಸಂಜೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

21.5.2026 ಗುರುವಾರ, ಮಳೆ ನಕ್ಷತ್ರ: ಕೃತ್ತಿಕ 11.05.2026ರಿಂದ 24.05.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ (ಅಧಿಕ) ಮಾಸ, ಶುಕ್ಲ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಪುಷ್ಯ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ

- **ಎಸ್‌ಡಿಎಂ ಮತ್ತು ಎಂಎಂಕೆ ಮಹಿಳಾ ಮಹಾವಿದ್ಯಾಲಯ :** ಸ್ವರ್ಣಾಮೃತಪ್ರಾಶನ ಕಾರ್ಯಕ್ರಮ, ಸ್ಥಳ: ಎಸ್‌ಡಿಎಂ ಮತ್ತು ಎಂಎಂಕೆ ಮಹಿಳಾ ಮಹಾವಿದ್ಯಾಲಯ, ಬಲ್ಲಾಳ್ ಸರ್ಕಲ್, ಬೆಳಗ್ಗೆ 7 ರಿಂದ.
- **ಸುಯೋಗ್ ಆಸ್ಪತ್ರೆ :** ಉಚಿತ ಸಕ್ಕರೆ ಕಾಯಿಲೆ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆ 9 ರಿಂದ.
- **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ:** ಪಾರಂಪರಿಕ ಹಾಸು ಆಟಗಳ 11ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10 ರಿಂದ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಮಧುಮೇಹದ ಗಾಯಗಳು, ವೆರಿಕೋಸ್ ವೇನ್ಸ್, ಆರೋಗ್ಯಾಯುಷ್ಯ ಆರೋಗ್ಯವರ್ಧಕ ಶಿಬಿರ, ಬೆಳಗ್ಗೆ 9.30 ರಿಂದ ಕಣ್ಣಿನ ದೃಷ್ಟಿ ಸಮಸ್ಯೆಗಳಿಗೆ ವಿಶೇಷ ಬೇಸಿಗೆ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.
- **ವ್ಯವಸ್ಥಾಪಕರು :** ಮಾವು ಮತ್ತು ಹಲಸು ಮೇಳ, ಸ್ಥಳ: ಶ್ರೀ ಬಂದಂತಮ್ಮ ಕಾಳಮ್ಮ ಸಮುದಾಯ ಭವನ, ಕುವೆಂಪುನಗರ, ಬೆಳಗ್ಗೆ 10 ರಿಂದ.
- **ಪ್ರೀತಿ ಕ್ಯಾನ್ಸರ್ ಸೆಂಟರ್ :** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10 ರಿಂದ.
- **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ :** ಶ್ರೀ ಜಗಜ್ಯೋತಿ ಬಸವೇಶ್ವರ ಜಯಂತಿ, ಉದ್ಘಾಟನೆ: ಹಂಪಿ ಕನ್ನಡ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಡಿ.ವಿ. ಪರಮಶಿವಮೂರ್ತಿ, ಮುಖ್ಯ ಅತಿಥಿಗಳು: ಜೆಎಸ್‌ಎಸ್ ಶಿಕ್ಷಣ ಸಂಸ್ಥೆ ಸಹಾಯಕ ಆಡಳಿತಾಧಿಕಾರಿ ಜಿ.ಎಲ್. ತ್ರಿಪುರಾಂತಕ, ಅಧ್ಯಕ್ಷತೆ : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಉಪಸ್ಥಿತರು : ಕರಾಮುವಿವಿ ಕುಲಸಚಿವ ಪ್ರೊ. ಸಿ.ಎಸ್. ಆನಂದ್‌ಕುಮಾರ್, ಹಣಕಾಸು ಅಧಿಕಾರಿ ಪ್ರೊ. ಎಸ್. ನಿರಂಜನ್‌ರಾಜ್, ಡೀನ್ ಡಾ.ಎನ್.ಆರ್. ಚಂದ್ರೇಗೌಡ, ಸ್ಥಳ: ಕಾವೇರಿ ಸಭಾಂಗಣ, ಕರಾಮುವಿವಿ, ಬೆಳಗ್ಗೆ 11ಕ್ಕೆ.
- **ಚಾಮರಾಜೇಶ್ವರಿ ಅಕ್ಕನ ಬಳಗ :** ಅಕ್ಕ ಮಹಾದೇವಿ ಜಯಂತಿ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ಅರಮನೆ ಪಂಚಗವಿ ಮಠದ ಶ್ರೀಕಂಠ ಸ್ವಾಮೀಜಿ, ಮುಖ್ಯ ಅತಿಥಿಗಳು : ಡಾ. ಹೇಮಾ ಪಾಟೀಲ್, ಅಧ್ಯಕ್ಷತೆ : ಬಳಗದ ಅಧ್ಯಕ್ಷೆ ಶ್ರೀಮತಿ ಮಾದಲಾಂಬಿಕೆ ನಂಜುಂಡಸ್ವಾಮಿ, ಸನ್ಮಾನ : ವಾತ್ಸಲ್ಯ ಸೇವಾ ಫೌಂಡೇಷನ್‌ನ ಶ್ರೀಮತಿ ಬಿ. ನಾಗರತ್ನ, ಸ್ಥಳ: ಜೆಎಸ್‌ಎಸ್ ಕಾನೂನು ಕಾಲೇಜು, ಕುವೆಂಪುನಗರ, ಸಂಜೆ 4ಕ್ಕೆ.
- **ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್ :** ನಾಟಕಕಾರ ಹೊರೆಯಾಲ ದೊರೆಸ್ವಾಮಿ ಅವರು ರಚಿಸಿ, ವಾಚಿಸುವ ಐತಿಹಾಸಿಕ ನಾಟಕ ದೊರೆ ದಡಿಯಪ್ಪ, ಮುಖ್ಯ ಅತಿಥಿಗಳು : ಹಿರಿಯ ರಂಗಕರ್ಮಿ ಕೆ.ಜೆ. ನಾರಾಯಣ ಶೆಟ್ಟಿ, ಉಪಸ್ಥಿತರು : ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್ ಅಧ್ಯಕ್ಷ ಕೃಷ್ಣ ಜನಮನ, ಸ್ಥಳ: ಬಿ.ವಿ. ಕಾರಂತ ರಂಗ ವೇದಿಕೆ, ರಂಗಾಯಣ, ಸಂಜೆ 4.30ಕ್ಕೆ.
- **ಶ್ರೀ ಉತ್ತರಾದಿ ಮಠ, ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ :** ಸಾಂಸ್ಕೃತಿಕ ಕಾರ್ಯಕ್ರಮಗಳು, ವಿದುಷಿ ತುಳಸಿ ರಾಮಚಂದ್ರ ಮತ್ತು ತಂಡದವರಿಂದ ಭರತನಾಟ್ಯ ಪ್ರದರ್ಶನ, ಸ್ಥಳ: ಶ್ರೀ ಕಾಶಿ ವಿಶ್ವೇಶ್ವರ ಸನ್ನಿಧಿ ಆವರಣ, ಅಗ್ರಹಾರ, ಸಂಜೆ 5.30ಕ್ಕೆ.
- **ಶ್ರೀ ವಿದ್ಯಾರಣ್ಯ ಟ್ರಸ್ಟ್ :** ಯುಗಪುರುಷ ಶ್ರೀವಿದ್ಯಾರಣ್ಯರ ಜಯಂತಿ, ಮುಖ್ಯ ಅತಿಥಿಗಳು : ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಹಿರಿಯ ಸಮಾಜ ಸೇವಕ ಕೆ ರಘುರಾವ್ ವಾಜಪೇಯಿ, ವಿಪ್ರ ಮುಖಂಡ ಎನ್.ಎಂ.ನವೀನ್ ಕುಮಾರ್, ನಗರ ಪಾಲಿಕಾ ಮಾಜಿ ಸದಸ್ಯ ಮಾ.ವಿ. ರಾಮಪ್ರಸಾದ್, ಸಮಾಜ ಸೇವಕರಾದ ವಿಕ್ರಂ ಅಯ್ಯಂಗಾರ್, ಸ್ಥಳ: ವಿದ್ಯಾರಣ್ಯಪುರಂನಲ್ಲಿರುವ ವಿದ್ಯಾರಣ್ಯ ಕೋಚಿಂಗ್ ಸೆಂಟರ್ ಆವರಣ, ಸಂಜೆ 5.30ಕ್ಕೆ.
- **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 'ದೈಹಿಕ ದೀಕ್ಷೆ' ಅರಿವಿನಿಂದ ಆರೋಗ್ಯದತ್ತ ಬಾನುಲಿ ಸರಣಿ ಕಾರ್ಯಕ್ರಮ, ಪ್ರಸ್ತುತಿ–ಡಾ. ಕುಲದೀಪ್.ಎನ್, 6.40 ಪದಸಂಸ್ಕೃತಿ– ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ನಾ ಕಸ್ತೂರಿ ಅವರ ಪಾತಾಳದಲ್ಲಿ ಪಾಪಚ್ಚಿ–ಮಕ್ಕಳ ಸಾಹಿತ್ಯ ಕೃತಿಯ ಬಾನುಲಿ ಓದು, ಪ್ರಸ್ತುತಿ– ಉಮೇಶ್ ಎಸ್. ಎಸ್., 8.35 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಕಲಾವತಿ ಅವಧೂತ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ಸುತ್ತಮುತ್ತ : ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಗಳ ಪ್ರಮುಖ ಸಭೆ ಸಮಾರಂಭಗಳ ಪರಿಚಯಾತ್ಮಕ ಕಾರ್ಯಕ್ರಮ. ಪ್ರಸ್ತುತಿ–ಚಂದನಾ .ಸಿ ಹಾಗೂ ಅರ್ಚನಾ. ಪಿ ಆರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ವಿಜ್ಞಾನ ಭಾರತಿ ಮಾನವ ಜೀವನದ ಸಮಗ್ರ ಅಧ್ಯಯನಕ್ಕಾಗಿ ಮಾನವಶಾಸ್ತ್ರ ಮಾತನಾಡುತ್ತಾರೆ ಡಾ. ಕೇಶವ್ .ಎಸ್, ಕುಬ್ಜಗ್ರಹಗಳು ಮಾತನಾಡುತ್ತಾರೆ ಎನ್. ಶಂಕರ್, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ– ಕಿಸಾನ್ ವಾಣಿ ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಹಣ್ಣು ಹೊನ್ನು – ತೋಟಗಾರಿಕಾ ಬೆಳೆಗಳ ಸುಸ್ಥಿರ ಬೇಸಾಯ ಕುರಿತ ಬಾನುಲಿ ಸರಣಿ. ಮೈಸೂರು ಚಿಗುರೆಲೆ ಬೇಸಾಯ ಕುರಿತು ಸಂವಾದ. ಭಾಗವಹಿಸುತ್ತಾರೆ–ಮೈಸೂರು ತಾಲ್ಲೂಕು ಇಲವಾಲದ ಸಹಾಯಕ ತೋಟಗಾರಿಕಾ ಅಧಿಕಾರಿ ಎಸ್. ವೆಂಕಟೇಶಮೂರ್ತಿ ಮತ್ತು ಮೈಸೂರು ತಾಲ್ಲೂಕು ಉದ್ಬೂರು ಗ್ರಾಮದ ಕೃಷಿಕ ಎನ್. ಮರಂಕಯ್ಯ, ಪ್ರಸ್ತುತಿ–ಎನ್. ಕೇಶವಮೂರ್ತಿ, 7.45 ಚಿತ್ರಗೀತೆಗಳು, 8.00 ಯುವವಾಣಿ –ಮಾನವನ ಜೀವನದಲ್ಲಿ ಸೂಕ್ಷ್ಮಾಣು ಜೀವಿಗಳ ಪಾತ್ರ ಕುರಿತು ಚರ್ಚೆ, ಭಾಗವಹಿಸುತ್ತಾರೆ–ಮೈಸೂರಿನ ಎಂ.ಎಂ.ಕೆ., ಎಸ್.ಡಿ. ಎಂ. ಕಾಲೇಜಿನ ವಿದ್ಯಾರ್ಥಿಗಳಾದ ಚೈತ್ರಾ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, 10.00 ನಾಟಕ–ಸುಧಾರಿಸಿಕೊಂಡು ಹೋಗಿ, ರಚನೆ–ಟಿ.ಕೆ. ಹನುಮನ ಸಾಗರ, ನಿರ್ದೇಶನ–ವಸುಂಧರ ಶ್ರೀಧರ್, 10.30 ಸವಿನೆನಪು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 21 ಗುರುವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

47

ಸಂಪುಟ: 47 | ಸಂಚಿಕೆ: 35 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಖಾಲಿ ಇರುವ 15 ಸಾವಿರ ಶಿಕ್ಷಕರ ನೇಮಕ

ಉಚಿತ ಪಠ್ಯದ ಜೊತೆಗೆ ನೋಟ್‌ಬುಕ್ ವಿತರಿಸಲು ಸಿಎಂ ಸೂಚನೆ

ಬೆಂಗಳೂರು, ಮೇ 20(ಕೆಎಂಶಿ)– ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ 15,000 ಶಿಕ್ಷಕರ ನೇಮಕಾತಿಗೆ ಚಾಲನೆ ಹಾಗೂ ಪಠ್ಯದ ಜೊತೆ ಉಚಿತವಾಗಿ ನೋಟ್ ಪುಸ್ತಕಗಳನ್ನೂ ನೀಡುವ ಕುರಿತು ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಅಧಿಕಾರಿಗಳಿಗೆ ಸೂಚಿಸಿದ್ದಾರೆ.



ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ಅಧಿಕಾರಿಗಳೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬುಧವಾರ ಸಭೆ ನಡೆಸಿದರು. ಈ ವೇಳೆ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಉಪಸ್ಥಿತರಿದ್ದಾರೆ.

ಗೃಹ ಕಚೇರಿ ಕೃಷ್ಣಾದಲ್ಲಿ ನಡೆದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಭೆಯಲ್ಲಿ ಮಾತನಾಡಿದ ಅವರು, ಗ್ರಾಮೀಣ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಕ್ರಮಕೈಗೊಳ್ಳಿ ಎಂದು ಸಲಹೆ ಮಾಡಿದರು.

ಜೂನ್ 1ರಂದು ಕರ್ನಾಟಕ ಪಬ್ಲಿಕ್ ಶಾಲಾ (ಕೆಪಿಎಸ್) ಯೋಜನೆಗೆ ಶಿವಮೊಗ್ಗದಲ್ಲಿ ಚಾಲನೆ ನೀಡಲಾಗುವುದು. ಪ್ರತಿ ಕೆಪಿಎಸ್ ಶಾಲೆಯಲ್ಲಿ 1,200 ಮಕ್ಕಳಿಗೆ ಪ್ರವೇಶಾವಕಾಶ ಸಿಗಲಿದ್ದು, ಎಲ್‌ಕೆಜಿಯಿಂದ ಪಿಯುಸಿವರೆಗೆ ಒಂದೇ ಸೂರಿನಡಿ ಕನ್ನಡ ಮತ್ತು ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣ ದೊರೆಯಲಿದೆ. ಮುಂದಿನ ಎರಡು ವರ್ಷಗಳಲ್ಲಿ ಎಲ್ಲಾ 800 ಕೆಪಿಎಸ್ ಶಾಲೆಗಳು ಸಂಪೂರ್ಣವಾಗಿ ಸಿದ್ಧವಾಗಬೇಕು ಎಂದು ಅಧಿಕಾರಿಗಳಿಗೆ ಆದೇಶಿಸಿದರು. ಪ್ರಸಕ್ತ ವರ್ಷವೇ 800 ಕರ್ನಾಟಕ ಪಬ್ಲಿಕ್ ಸ್ಕೂಲ್ ಆರಂಭಿಸಲು ಟೆಂಡರ್ ಪ್ರಕ್ರಿಯೆ ಆದಷ್ಟು ಬೇಗನೆ ಪ್ರಾರಂಭಿಸಿ. ಕೆಪಿಎಸ್ ಶಾಲೆಗಳಿಗೆ ಬಸ್ ವ್ಯವಸ್ಥೆ ಸೌಲಭ್ಯ ಯಾವ ರೀತಿ ಯಲ್ಲಿ ಕಲ್ಪಿಸಬಹುದು ಎಂಬ ಕುರಿತು ಪರಿಶೀಲಿಸಲು ಸೂಚಿಸಿದರು. 15 ಸಾವಿರ ಶಿಕ್ಷಕರನ್ನು ಭರ್ತಿ ಮಾಡುವ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ತಕ್ಷಣ ಸಲ್ಲಿಸಲು ಮುಖ್ಯಮಂತ್ರಿ ಆದೇಶಿಸಿದರು. ಈ ಬಾರಿ ಎಸ್‌ಎಸ್‌ಎಲ್‌ಸಿಯಲ್ಲಿ

■ 10ನೇ ಪುಟಕ್ಕೆ

ರಾಜ್ಯ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ತಾಕೀತು

ಆ.31ರೊಳಗೆ ಜಿಬಿಎ ವ್ಯಾಪ್ತಿ ಪಾಲಿಕೆಗಳಿಗೆ ಚುನಾವಣೆ ನಡೆಸಿ

ಬೆಂಗಳೂರು, ಮೇ 20(ಕೆಎಂಶಿ)– ಆಗಸ್ಟ್ 31ರ ಒಳಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯ ಐದು ನಗರಪಾಲಿಕೆಗಳಿಗೆ ಚುನಾವಣೆ ನಡೆಸಲು ಸುಪ್ರೀಂ ಕೋರ್ಟ್ ರಾಜ್ಯ ಸರ್ಕಾರಕ್ಕೆ ಗಡುವು ವಿಧಿಸಿದೆ.



ಸೆಪ್ಟೆಂಬರ್ ಅಂತ್ಯದವರೆಗೆ ಕಾಲಾವಕಾಶ ಕೋರಿ ಕರ್ನಾಟಕ ಸರ್ಕಾರ ಹಾಗೂ ರಾಜ್ಯ ಚುನಾವಣಾ ಆಯೋಗದ ಎರಡು ಪ್ರತ್ಯೇಕ ಅರ್ಜಿ ಸಲ್ಲಿಸಿದ್ದವು.


ಮನವಿ ಆಲಿಸಿದ ಮುಖ್ಯನ್ಯಾಯಮೂರ್ತಿ ಸೂರ್ಯಕಾಂತ್ ಅವರನ್ನು ಒಳಗೊಂಡ ನ್ಯಾಯಪೀಠ ಈ ಆದೇಶ ನೀಡಿದೆ. ರಾಜ್ಯ ಸರ್ಕಾರ ಮತ್ತು ರಾಜ್ಯ ಚುನಾವಣಾ ಆಯೋಗ ಸಲ್ಲಿಸಿದ್ದ ಅರ್ಜಿಯಲ್ಲಿ, ರಾಜ್ಯ ಸಿಬ್ಬಂದಿ ಜನಗಣತಿ, ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್), ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಮಂಡಳಿ ಪರೀಕ್ಷೆ ಇತ್ಯಾದಿ ಕರ್ತವ್ಯಗಳಲ್ಲಿ ನಿರತರಾಗಿದ್ದಾರೆ. ಜೂನ್ 30ರಿಂದ ಅನ್ವಯವಾಗುವಂತೆ ಹೆಚ್ಚುವರಿ ಮೂರು ತಿಂಗಳ ಸಮಯ ನೀಡಬೇಕು, ಈ ವೇಳೆಯೊಳಗೆ

■ 10ನೇ ಪುಟಕ್ಕೆ

ಕೊಟ್ಟ ಹಣ ಕೇಳಿದ ವ್ಯಕ್ತಿಗೆ ನರಕ ದರ್ಶನ ಮಾಡಿಸಿದ ಆರ್‌ಟಿಐ ಕಾರ್ಯಕರ್ತ!

ಕಾರು ಡಿಕ್ಕಿ ಹೊಡೆಸಿ, ಬಾನೆಟ್ ಮೇಲೆ ಬಿದ್ದ ಆತನ ಸಿನಿಮಾ ಸ್ಟೈಲ್‌ನಲ್ಲಿ ವೇಗವಾಗಿ ಸಾಗಿ ಪೊಲೀಸ್ ಠಾಣೆ ಮುಂದೆ ಬಿಸಾಡಿ ಪರಾರಿ!

- ಜನನಿಬಿಡ ಪ್ರದೇಶದಲ್ಲಿ ಹಾಡಹಗಲೇ ನಡೆದ ಘಟನೆ
- ಬಾನೆಟ್ ಮೇಲೆ ಪ್ರಾಣ ರಕ್ಷಣೆಗೆ ಒದ್ದಾಡಿದ ವ್ಯಕ್ತಿ
- ಅಮಾನವೀಯ ಘಟನೆ ನೋಡಿ ಆತಂಕಗೊಂಡ ಜನರು
- ಮೈಸೂರಲ್ಲಿ ಕಾನೂನು, ಪೊಲೀಸರೆಂದರೆ ಭಯ ಇಲ್ಲವೇ!?



ಬಾನೆಟ್ ಮೇಲೆ ವ್ಯಕ್ತಿ ಇದ್ದರೂ ವೇಗವಾಗಿ ಸಾಗುತ್ತಿರುವ ಕಾರು.

ಮೈಸೂರು, ಮೇ 20(ಬಿಎಲ್‌ಯು)– ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಪೋಲಿ–ಪುಂಡರು, ಪುಡಿ ರೌಡಿಗಳ ಅಟ್ಟಹಾಸ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಜನರು ನೆಮ್ಮದಿಯಾಗಿ ಬದುಕಲು ಸಾಧ್ಯವಾಗದಂತಹ ವಾತಾವರಣ ನಿರ್ಮಾಣವಾಗಿದೆ. ಕಾನೂನು–ಸುವ್ಯವಸ್ಥೆ ಹದಗೆಟ್ಟಿದೆ, ಪುಂಡ–ಪೋಕರಿಗಳಿಗೆ ಭಯವೇ ಇಲ್ಲದಂತಾಗಿದೆ ಎಂದು ಹಿರಿಯ ನಾಗರಿಕರು, ಸಾಮಾನ್ಯ ಜನರು ದೂರುತ್ತಿದ್ದಾರೆ.

ಒಂದೆಡೆ ಮುಂಬೈ, ಕೊಲ್ಕತ್ತಾ ಮತ್ತು ದೆಹಲಿಯಂತಹ ಮಹಾನಗರಗಳಲ್ಲಿ ನಡೆಯುತ್ತಿದ್ದ ದಂಧೆ, ಮಾಫಿಯಾ ಪ್ರಕರಣಗಳು ಮೈಸೂರಿಗೂ ಕಾಲಿಟಿರುವ ಭೀತಿ ಎದುರಾಗಿದೆ. ಮತ್ತೊಂದೆಡೆ ಪೊಲೀಸ ರೆಂದರೆ ಭಯವೇ ಇಲ್ಲದಂತೆ ಅಟ್ಟಹಾಸ ಮೆರೆಯುತ್ತಿದ್ದಾರೆ ಇದಕ್ಕೆ ಇಂದು ನಡೆದ ಘಟನೆ ಸಾಕ್ಷಿ.

ಆರ್‌ಟಿಐ ಕಾರ್ಯಕರ್ತನೊಬ್ಬ ತನಗೆ ನೀಡಿದ್ದ ಹಣ ಕೇಳಿದಂತಹ ವ್ಯಕ್ತಿಗೆ ತನ್ನ ಕಾರಿನಿಂದ ಡಿಕ್ಕಿ ಹೊಡೆಸಿದ್ದಾನೆ. ಕೊನೆಗೆ ಆತ ಬಾನೆಟ್ ಮೇಲೆ ಬಿದ್ದರೂ ಬಿಡದೇ ಅತೀ ವೇಗವಾಗಿ ಕಾರನ್ನು ಓಡಿಸಿ, ಚೆಲ್ಲಾಟವಾಡಿದ್ದಾನೆ. ಬಳಿಕ ಪೊಲೀಸ್ ಠಾಣೆ ಮುಂದೆಯೇ ಆತನ

■ 10ನೇ ಪುಟಕ್ಕೆ

ಎಫ್‌ಐಆರ್ ದಾಖಲಿಸುವ ಪ್ರಕ್ರಿಯೆ ನಡೆಯುತ್ತಿದೆ. ಇಲ್ಲಿ ನಮೂದಿಸಲಾಗಿರುವ ಸೆಕ್ಷನ್‌ಗಳನ್ವಯ ಮುಂದಿನ ಕ್ರಮ ನಿರ್ಧಾರಿತವಾಗುತ್ತದೆ. ಅದರಂತೆಯೇ ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು.

\- ಡಾ. ಹರ್ಷಪ್ರಿಯಂವದಾ,
ಡಿಸಿಪಿ–1, ಮೈಸೂರು ನಗರ ಪೊಲೀಸ್

ಧನಂಜಯ ಹಾಗೂ ಇನ್ನಿತರ ನಾಲ್ವರು ನನ್ನ ಮೇಲೆ ಅಟ್ಯಾಕ್ ಮಾಡಿದರು. ಹಾಗಾಗಿ ನಾನು ಕಾರನ್ನು ಓಡಿಸಿಕೊಂಡು ಪೊಲೀಸ್ ಠಾಣೆಗೆ ಹೋದೆ. ಈ ಸಂಬಂಧ ನಾನು ಸಹ ಪೊಲೀಸರಿಗೆ ದೂರು ನೀಡುತ್ತೇನೆ.

\- ಗಂಗರಾಜು,
ಆರ್‌ಟಿಐ ಕಾರ್ಯಕರ್ತ.

ಅಧಿಕಾರ ಹಸ್ತಾಂತರ ವಿಚಾರದಲ್ಲಿ ರಾಜ್ಯ ರಾಜಕೀಯದಲ್ಲಿ ಬಿರುಸಿನ ಚಟುವಟಿಕೆ

ಬೆಂಗಳೂರು, ಮೇ 20(ಕೆಎಂಶಿ)– ಕೇರಳಂ ಮುಖ್ಯಮಂತ್ರಿಯಾಗಿ ಕಾಂಗ್ರೆಸ್‌ನ ವಿ.ಡಿ.ಸತೀಶನ್ ಅಧಿಕಾರ ವಹಿಸಿಕೊಂಡ ಬೆನ್ನಲ್ಲೇ ಕರ್ನಾಟಕದಲ್ಲೂ ಅಧಿಕಾರ ಹಸ್ತಾಂತರ ಸಂಬಂಧ ಚಟುವಟಿಕೆಗಳು ಪಕ್ಷದ ಉನ್ನತ ಮಟ್ಟದಲ್ಲಿ ತೀವ್ರಗೊಂಡಿವೆ.

ಕಳೆದ ಮೂರು ದಿನಗಳಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಬಣದ ಸಚಿವರುಗಳು ಸತತವಾಗಿ ಸಭೆಗಳನ್ನು ನಡೆಸುತ್ತಿದ್ದಾರೆ. ಕೇರಳಂನಲ್ಲಿ ಸತೀಶನ್ ಪ್ರಮಾಣವಚನ ಕಾರ್ಯಕ್ರಮ ಮುಗಿಸಿಕೊಂಡು



ನಗರಕ್ಕೆ ಹಿಂತಿರುಗಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಕೆಲವು ಸಚಿವರು ವಿಮಾನ ನಿಲ್ದಾಣ ಸಮೀಪವಿರುವ ಸಚಿವ ಕೆ.ಜೆ.ಜಾರ್ಜ್ ಅತಿಥಿ ಗೃಹದಲ್ಲಿ ರಾಜ್ಯ ಕಾಂಗ್ರೆಸ್ ನಾಯಕತ್ವ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚಿಸಿದ್ದಾರೆ. ಜಾರ್ಜ್ ನಿವಾಸದಲ್ಲಿ ಖರ್ಗೆ ಅವರು ಸಚಿವರೊಂದಿಗೆ ಸಮಾಲೋಚನೆ ನಂತರ ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಜೊತೆ ಪ್ರತ್ಯೇಕ ಕೊಠಡಿಯಲ್ಲಿ

■ 10ನೇ ಪುಟಕ್ಕೆ

ಕೆ.ಎನ್.ರಾಜಣ್ಣ ನಮ್ಮ ಹೈಕಮಾಂಡ್ ಅಂತಾ ಇವತ್ತೇ ನಂಗೆ ಗೊತ್ತಾಗಿದ್ದು...!

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವ್ಯಂಗ್ಯೋಕ್ತಿ

ಬೆಂಗಳೂರು: ಮುಖ್ಯಮಂತ್ರಿ ಬದಲಾವಣೆಯ ವಿಚಾರದಲ್ಲಿ ಮಾಜಿ ಸಹಕಾರ ಸಚಿವ ಕೆ.ಎನ್. ರಾಜಣ್ಣ ನೀಡಿದ ಹೇಳಿಕೆಗೆ, ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ವ್ಯಂಗ್ಯವಾಗಿ ಪ್ರತಿಕ್ರಿಯಿಸಿದ್ದಾರೆ. ರಾಜಣ್ಣನವರು ನಮ್ಮ ಹೈಕಮಾಂಡ್ ಎಂದು ಗೊತ್ತಿರಲಿಲ್ಲ ಎಂದು ಡಿಸಿಎಂ ಖಾರವಾಗಿ ಪ್ರತಿಕ್ರಿಯಿಸಿದ್ದಾರೆ. ಮುಂದಿನ ಮುಖ್ಯಮಂತ್ರಿ ಬಗ್ಗೆ ಕೆಎನ್ ರಾಜಣ್ಣ ತಮ್ಮ ಅಭಿಪ್ರಾಯವನ್ನು ಮಂಡಿಸಿದ್ದರು.

ಹಿಂದಿನಿಂದಲೂ ಡಿಕೆ ಶಿವಕುಮಾರ್ ಅವರ ನಾಯಕತ್ವಕ್ಕೆ ವಿರೋಧವನ್ನು ವ್ಯಕ್ತಪಡಿಸುತ್ತಲೇ ಇರುವ ರಾಜಣ್ಣ, ಮುಖ್ಯಮಂತ್ರಿ ಹುದ್ದೆ ಎನ್ನುವುದು ಯಾರ ಮನೆಯ ಆಸ್ತಿಯೂ ಅಲ್ಲ, ಡಾ.ಪರಮೇಶ್ವರ್ ಮುಂದಿನ ಮುಖ್ಯಮಂತ್ರಿ ಆಗಬೇಕೆಂದು ಹೇಳಿಕೆಯನ್ನು ನೀಡಿದ್ದರು.



ಕೆ.ಎನ್.ರಾಜಣ್ಣ

ನಾನು ನಿಖಿಲ್ ಮಾತಿಗೆ ಉತ್ತರ ಕೊಡಲ್ಲ : ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಟ್ವೀಟ್ ಬಗ್ಗೆ ಮಾತನಾಡುತ್ತಾ, ನಾನು ಆ ಹುಡುಗನ ಮಾತಿಗೆ ಪ್ರತಿಕ್ರಿಯಿಸಲು ಹೋಗುವುದಿಲ್ಲ. ನಮ್ಮ ಇತರ ನಾಯಕರು ಇದಕ್ಕೆ ಉತ್ತರ ಕೊಡುತ್ತಾರೆ. ರಾಜಕೀಯದಲ್ಲಿ ಚಾಲ್ತಿಯಲ್ಲಿ ಇರಬೇಕಲ್ಲವೇ, ಅದಕ್ಕೆಂದೇ ಹೇಳಿಕೆಯನ್ನು ನೀಡುತ್ತಿದ್ದಾರೆ. ನನಗೆ ಆ ಹುಡುಗನ ಸ್ಟೇಟಸ್ ಏನೆಂದೇ ಗೊತ್ತಿಲ್ಲ. ಹಿಂದೆ, ಮೋದಿ

■ 10ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ವಿದ್ಯಾರ್ಥಿ : ಸರ್, ಇದೇನು
ಶಿಕ್ಷಕ : ಪ್ರಶ್ನೆ ಪತ್ರಿಕೆ
ವಿದ್ಯಾರ್ಥಿ : ಮತ್ತೆ ಇದೇನು?
ಶಿಕ್ಷಕ : ಉತ್ತರ ಪತ್ರಿಕೆ
ವಿದ್ಯಾರ್ಥಿ : ಏನ್ ಸರ್, ಪ್ರಶ್ನೆ ಪತ್ರಿಕೆಯಲ್ಲಿ ಪ್ರಶ್ನೆ ಇದೆ. ಆದರೆ, ಉತ್ತರ ಪತ್ರಿಕೆಯಲ್ಲಿ ಉತ್ತರವೇ ಇಲ್ಲ.

ಮೈಸೂರು ಮಿತ್ರ

ಗುರುವಾರ, ಮೇ 21, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ನಮಗೆ ನಮ್ಮ ಹುಟ್ಟು ಸಾವು ಎರಡೂ ನೋಡದ ಕುರುಡುತನ ಕೊಟ್ಟ ಭಗವಂತ. ಒಂದೊಳ್ಳೆ ಬದುಕು ಬಾಳಲು ಜೀವನವನ್ನು ನೀಡಿದ್ದಾನೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ದಡ್ಡನಿಗೆ ಹಗಲು ಕಳೆಯುವುದಿಲ್ಲ, ಒಳ್ಳೆಂಯುವನಿಗೆ ರಾತ್ರಿ ಸಾಲುವುದಿಲ್ಲ.

ನಿಮ್ಮ ಪತ್ರಗಳು

ರಸ್ತೆ ಅಪಘಾತಗಳಿಗೆ ಕಡಿವಾಣ ಅಗತ್ಯ

ಮಾನ್ಯರೆ,

ರಾಜ್ಯದಲ್ಲಿ ಕಳೆದ ಮೂರು ತಿಂಗಳ ಅವಧಿಯಲ್ಲಿ 11,265 ರಸ್ತೆ ಅಪಘಾತಗಳು ಸಂಭವಿಸಿ, 2,917 ಮಂದಿ ಮೃತಪಟ್ಟಿರುವ ಆತಂಕಕಾರಿ ವರದಿಯನ್ನು ಮಾಧ್ಯಮಗಳು ಪ್ರಕಟಿಸಿವೆ. ಅಂದರೆ, ಸರಾಸರಿ ಪ್ರತಿ ದಿನ 32 ಜನರು ರಸ್ತೆ ಅಪಘಾತದಲ್ಲಿ ಜೀವ ಕಳೆದುಕೊಳ್ಳುತ್ತಿದ್ದಾರೆ. ಅದರಲ್ಲಿ 30 ವರ್ಷ ವಯಸ್ಸಿನ ಒಳಗಿನವರೇ ಹೆಚ್ಚು ಎಂಬುದು ದುರಂತದ ಸಂಗತಿ. ದೇಶದ ರಸ್ತೆ ಅಪಘಾತಗಳಲ್ಲಿ ರಾಜ್ಯ 4ನೇ ಸ್ಥಾನದಲ್ಲಿದೆ.

ರಸ್ತೆ ಅಪಘಾತಗಳಿಗೆ ಮುಖ್ಯ ಕಾರಣ, ಅತಿಯಾದ ವೇಗದ ಚಾಲನೆ, ರಸ್ತೆ ಸಂಚಾರ ನಿಯಮಗಳ ಉಲ್ಲಂಘನೆ, ವಾಹನ ಓಡಿಸುವಾಗ ಮೊಬೈಲ್ ಬಳಕೆ, ಹೆಲ್ಮೆಟ್ ಧರಿಸದೇ ವಾಹನ ಓಡಿಸುವುದು, ಕೆಲವರು ಶೋಕಿಗಾಗಿ ವೇಗವಾಗಿ ವಾಹನ ಓಡಿಸುವುದು, ಅಪ್ರಾಪ್ತ ವಯಸ್ಸಿನವರು ಪರವಾನಗಿ ಇಲ್ಲದೆ ವಾಹನ ಓಡಿಸುವುದು, ಕುಡಿದು ವಾಹನ ಓಡಿಸುವುದು, ವೀಲಿಂಗ್ ಮಾಡುವುದು, ಇವೆಲ್ಲವೂ ಸ್ವಯಂ ಕೃತ್ಯದಿಂದ ಪ್ರಾಣ ಕಳೆದುಕೊಂಡರೆ, ಮತ್ತೊಂದು ಕಡೆ ಗುಂಡಿ ಬಿದ್ದ ರಸ್ತೆಗಳು, ಕಿತ್ತು ಹೋಗಿರುವ ಡಾಂಬರು ಕಾಣದ ರಸ್ತೆಗಳು, ರಾತ್ರಿ ವೇಳೆ ಸಮರ್ಪಕವಾದ ಬೀದಿ ದೀಪಗಳು ಇಲ್ಲದೆ ಇರುವುದು, ಭೂಗತ ಕೇಬಲ್‌ಗಳನ್ನು ಅಳವಡಿಸುವಾಗ ತೆಗೆದಿರುವ ಗುಂಡಿಗಳನ್ನು ಅರ್ಧಂಬರ್ಧ ಮುಚ್ಚಿರುವುದು, ಮಳೆ ಬಂದಾಗ ರಸ್ತೆ ಯಾವುದು ಗುಂಡಿ ಯಾವುದು ಎಂದು ತಿಳಿಯದೇ ಗುಂಡಿಗಳಿಗೆ ಬಿದ್ದು ಪ್ರಾಣ ಕಳೆದುಕೊಂಡವರು ಇದ್ದಾರೆ. ರಸ್ತೆ ಅಪಘಾತಗಳು ಕಡಿಮೆ ಆಗಲು ಮುಖ್ಯವಾಗಿ ನಮ್ಮ ಸಂಚಾರ ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ಕಾನೂನು ಕ್ರಮ ಕೈಗೊಳ್ಳಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಜನತಾ ನಗರದಲ್ಲಿ ಒಳಚರಂಡಿ ಸಮಸ್ಯೆಗೆ ಹೊಸ ಪೈಪ್‌ಲೈನ್ ಅಳವಡಿಸಿ

ಮಾನ್ಯರೇ,



ನಾನು ಚಂದ್ರು ಎಂ, ಮೈಸೂರಿನ #1582, 7ನೇ ಕ್ರಾಸ್, ಜನತಾ ನಗರ, ವಾರ್ಡ್ ನಂ. 44, ಸಾಹುಕಾರ್ ಚೆನ್ನಯ್ಯ ರಸ್ತೆ, ಮೈಸೂರು ನಿವಾಸಿಯಾಗಿದ್ದೇನೆ.

ನಮ್ಮ ಪ್ರದೇಶದಲ್ಲಿ ಕಳೆದ 4 ತಿಂಗಳಿನಿಂದ ಗಂಭೀರವಾದ ಒಳಚರಂಡಿ ಸಮಸ್ಯೆ ಉಂಟಾಗಿದೆ. ಪದೇ ಪದೆ ಮ್ಯಾನ್‌ಹೋಲ್ ಬ್ಲಾಕ್ ಆಗುತ್ತಿದ್ದು, ಒಳಚರಂಡಿ ನೀರು ರಸ್ತೆ ಮತ್ತು ಮನೆಗಳ ಮುಂದೆ ಹರಿಯುತ್ತಿದೆ. ಇದರಿಂದ ಸಾರ್ವಜನಿಕರಿಗೆ ದುರ್ವಾಸನೆ, ಅಸ್ವಚ್ಛತೆ ಹಾಗೂ ಆರೋಗ್ಯ ಸಮಸ್ಯೆಗಳು ಎದುರಾಗುತ್ತಿವೆ.

ಈ ಕುರಿತು ಪೌರಕಾರ್ಮಿಕರು ಹಲವಾರು ಬಾರಿ ಬಂದು ಕೆಲಸ ಮಾಡಿದರೂ ಸಮಸ್ಯೆಯನ್ನು ಶಾಶ್ವತವಾಗಿ ಬಗೆಹರಿಸಲು ಸಾಧ್ಯವಾಗಿಲ್ಲ. ಅಲ್ಲದೆ ನಮ್ಮ ವಾರ್ಡಿನ ಹಿಂದಿನ ಕಾರ್ಪೋರೇಟರ್‌ರಿಗೆ ತಿಳಿಸಿದರೂ ಇದುವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ.

ಆದ್ದರಿಂದ ದಯವಿಟ್ಟು ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ, ಶಾಶ್ವತ ಪರಿಹಾರಕ್ಕಾಗಿ ಹೊಸ ಒಳಚರಂಡಿ ಪೈಪ್‌ಲೈನ್ ಅಳವಡಿಸಿ, ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಯನ್ನು ನಿವಾರಿಸುವಂತೆ ವಿನಂತಿಸಿಕೊಳ್ಳುತ್ತೇವೆ.

–ಚಂದ್ರು, ಜನತಾನಗರ, ಮೈಸೂರು.

ಕೊಲ್ಲುವ ವಿಧೇಯಕ

ಮಾನ್ಯರೆ,

ಅಮೆರಿಕದ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಹಾಗೂ ಇಸ್ರೇಲಿನ ಪ್ರಧಾನ ಮಂತ್ರಿ ಬೆಂಜಮಿನ್ ನೆತನ್ಯಾಹು ಅವರನ್ನು ಕೊಲ್ಲಲು ಇರಾನ್ ಸರ್ಕಾರ 'ಕಿಲ್ ಟ್ರಂಪ್' ಯೋಜನೆಯಡಿ 563 ಕೋಟಿ ರೂಪಾಯಿ ಮೌಲ್ಯದ ವಿಧೇಯಕವನ್ನು ಸಿದ್ಧಪಡಿಸುತ್ತಿದೆ ಎಂಬ ಮಾಧ್ಯಮಗಳ ವರದಿ ಕುತೂಹಲಕಾರಿಯಾಗಿದೆ. ಇರಾನಿನ ಸರ್ವೋಚ್ಚ ನಾಯಕರಾಗಿದ್ದ ಖಮೇನಿಯವರ ಹತ್ಯೆಯ ಸೇಡನ್ನು ತೀರಿಸಿಕೊಳ್ಳಲು ಇರಾನ್ ಈ ನಿರ್ಧಾರಕ್ಕೆ ಬಂದಿದೆ ಎಂದು ಹೇಳಲಾಗುತ್ತಿದೆ. ಆದರೆ ಪ್ರಜಾಸತ್ತಾತ್ಮಕ ರೀತಿಯಲ್ಲಿ ಆಯ್ಕೆಗೊಂಡ ಸರ್ಕಾರ, ಈ ರೀತಿಯ ಕೊಲೆ ವಿಧೇಯಕವನ್ನು ತನ್ನ ದೇಶದ ಸಂಸತ್ತಿನಲ್ಲಿ ಮಂಡಿಸಬಹುದೇ?

–ಕೆ.ವಿ.ವಾಸು,ವಕೀಲರು ಮತ್ತು ನೋಟರಿ, ಮೈಸೂರು

ಶಾಲಾ ವಾಹನ ದರ ಏರಿಕೆ ತಡೆಗೆ ಕ್ರಮ ಅಗತ್ಯ

ಮಾನ್ಯರೇ,

ಇತ್ತೀಚಿನ ಡೀಸೆಲ್ ಬೆಲೆ ಏರಿಕೆ, ಬಿಡಿಭಾಗಗಳ ದುಬಾರಿ ವೆಚ್ಚ ಮತ್ತು ವಿಮೆ, ತೆರಿಗೆಗಳ ಹೆಚ್ಚಳದಿಂದಾಗಿ ಖಾಸಗಿ ಶಾಲಾ ವಾಹನಗಳ ಮಾಸಿಕ ಶುಲ್ಕ ಕನಿಷ್ಠ ಶೇ.10 ರಷ್ಟು ಹೆಚ್ಚಳವಾಗುತ್ತಿರುವುದು ಪೋಷಕರಿಗೆ ಮತ್ತೊಂದು ದೊಡ್ಡ ಹೊರೆಯಾಗಿದೆ. ಈಗಾಗಲೇ ಶೈಕ್ಷಣಿಕ ಶುಲ್ಕ, ಪುಸ್ತಕ ಹಾಗೂ ಸಮವಸ್ತ್ರಗಳ ವೆಚ್ಚದಿಂದ ಕಂಗಾಲಾಗಿರುವ ಪೋಷಕರಿಗೆ ಈ ದರ ಏರಿಕೆ ಆತಂಕ ಮೂಡಿಸಿದೆ. ರಾಜ್ಯದಲ್ಲಿ ಸುಮಾರು 20 ಸಾವಿರಕ್ಕೂ ಹೆಚ್ಚು ಶಾಲಾ ವಾಹನಗಳು ಮಕ್ಕಳ ಸೇವೆಯಲ್ಲಿದ್ದು, ಇಂಧನ ದರ ಏರಿಕೆಯಿಂದಾಗಿ ಇವುಗಳ ನಿರ್ವಹಣೆ ಕಷ್ಟಕರವಾಗಿದೆ ಎಂದು ಮಾಲೀಕರು ಅಳಲು ತೋಡಿಕೊಂಡಿದ್ದಾರೆ.

ಶಾಲಾ ವಾಹನಗಳಿಗೆ ತ್ರೈಮಾಸಿಕ ರಸ್ತೆ ತೆರಿಗೆ ಮತ್ತು ಟೋಲ್ ಶುಲ್ಕದಲ್ಲಿ ವಿಶೇಷ ವಿನಾಯಿತಿ ನೀಡಬೇಕು. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಶಾಲಾ ಬಸ್ ಹಾಗೂ ವ್ಯಾನ್‌ಗಳಿಗೆ ರಿಯಾಯಿತಿ ದರದಲ್ಲಿ ಡೀಸೆಲ್ ಒದಗಿಸಬೇಕು. ಖಾಸಗಿ ಸಾರಿಗೆ ಕ್ಷೇತ್ರವು ನಷ್ಟಕ್ಕೆ ಸಿಲುಕದಂತೆ ಸರ್ಕಾರವು ನಿಯಮಿತವಾಗಿ ಆರ್ಥಿಕ ಅನುದಾನ ಅಥವಾ ಪ್ಯಾಕೇಜ್ ಘೋಷಿಸಬೇಕು.

–ಡಾ. ಎಚ್.ಕೆ. ವಿಜಯಕುಮಾರ್, ಮೈಸೂರು.





ನಿವೇದಿತ ಎಚ್.
ಇಂಗ್ಲಿಷ್ ಉಪನ್ಯಾಸಕಿ
ಮಹಾರಾಜ ಕಾಲೇಜು
ಮೈಸೂರು.
niveditha.manthana26@gmail.com

ಮಂಥನ

ಉಡುಗೊರೆಗಳು: ಉಪಟಳಗಳೋ... ಹೊರೆಗಳೋ...?!







ಅಧಿಕ ಮಾಸವಾದ್ದರಿಂದ ಒಂದಷ್ಟು ಬಿಡುವು ಸಿಕ್ಕಿರಬೇಕು ನಿಮಗೆಲ್ಲ ಮದುವೆ ಮುಂಜಿ ಗೃಹಪ್ರವೇಶ ಇತ್ಯಾದಿ ಕಾರ್ಯಕ್ರಮಗಳನ್ನು ಅಟೆಂಡ್ ಮಾಡಿ ಮಾಡಿ ಸಾಕಾಗಿರಬೇಕು ಅಲ್ಲವೇ? ಅದರಲ್ಲೂ ಈ ಎಲ್ ನಿನೋದ ಪ್ರಭಾವದಿಂದ ಬೆಂಕಿ ಮಳೆಯೇ ಆಗಿದೆಯೇನೋ ಎನ್ನುವ ಹಾಗೆ ಧಗೆ ಅದರಲ್ಲಿ ರೇಷ್ಮೆ ಸೀರೆ ಒಡವೆ ತೊಡಲೇ ಬೇಕಾದ ಅನಿವಾರ್ಯತೆಗೆ ಒಳಪಟ್ಟು ನೀವು ನಾನೂ ಸೇರಿದಂತೆ, ಅನುಭವಿಸಿದ ಪರಿಪಾಟಲು ಯಾರಿಗೂ ಬೇಡ ಹೆಂಗಸರದು ಒಂದು ಗೋಳಾದರೆ, ಗಂಡಸರದು ಇನ್ನೊಂದು ರೀತಿಯದು ಎಲ್ಲಕ್ಕಿಂತಾ ದೊಡ್ಡ ಸವಾಲು, ಬಿಸಿಲಲ್ಲಿ ಪಾರ್ಕ್ ಆಗಿದ್ದ ವಾಹನಗಳನ್ನು ಏರುವುದು ಮತ್ತು ಅವುಗಳನ್ನು ಬಿಸಿಲಲ್ಲಿ ಓಡಿಸುವುದು. ಕೆಲವರಿಗೆ ಸಿಗದ ರಜೆ, ಮಕ್ಕಳ ಕಾಟ, ಬಿಸಿಲಲ್ಲಿ ಸೇರದ ಭೂರಿ ಭೋಜನ ಇವೆಲ್ಲ ಒಂದು ಕಡೆಯಾದರೆ, ಉಡುಗೊರೆಗಳದ್ದು ಒಂದು ದೊಡ್ಡ ಎಪಿಸೋಡ್ ಧಾರಾವಾಹಿಯೇ ಎನ್ನಿ ಕಾರ್ಯಕ್ರಮಗಳ ಈ ಸಮಾರಂಭಗಳ ಸೀಜನ್ ಮುಗಿಯುವ ವರೆಗೂ ಉಡುಗೊರೆಗಳ ಬಗ್ಗೆ ಚರ್ಚೆ ಮನೆಯಲ್ಲಿ ನಡೆಯುತ್ತಲೇ ಇರುತ್ತದೆ.

ಉಡುಗೊರೆಗಳಿಗೆ ಒಂದು ಪರಂಪರೆಯೇ ಇದೆ. ನನಗೆ ನೆನಪಿರುವ ಹಾಗೆ, ಆಗೆಲ್ಲಾ ಉಡುಗೊರೆಗಳೆಂದರೆ ಸ್ಟೀಲ್ ಪಾತ್ರೆ ಸಾಮಾನುಗಳು. ಸಂಬಂಧಗಳು ಎಷ್ಟು ಹತ್ತಿರ ದೂರ ಎನ್ನುವುದರ ಮೇಲೆ, ಪಾತ್ರೆಗಳ ಗಾತ್ರ ನಿರ್ಧಾರವಾಗುತ್ತಿತ್ತು. ಲೋಟ, ತಟ್ಟೆ, ಬಟ್ಟಲು, ಬೇಸನ್, ವಿವಿಧ ಸೈಜಿನ ಡಬ್ಬಗಳು, ಮಸಾಲೆ ಡಬ್ಬಿ, ಸ್ಟೀಲ್ ಬಕೆಟ್–ಕೊಡ, ಗುಂಡಿ, ಕೊಳಗ ಅಬ್ಬಾ! ಅದೆಷ್ಟು ವೈವಿಧ್ಯಮಯ! ಮದುವೆ ಮುಗಿದಮೇಲೆ ಅವುಗಳನ್ನೆಲ್ಲಾ ಗುಡ್ಡೆ ಹಾಕಿದರೆ ಪಾತ್ರೆ ಅಂಗಡಿ ತೆರೆಯುವಷ್ಟು! ಮಿಕ್ಸಿ ಕುಕ್ಕರ್‌ಗಳೂ ಸಹಾ!

ಇನ್ನು ಕೆಲವರು ದುಡ್ಡನ್ನು ಮುಯ್ಯಿ ಹಾಕುತ್ತಿದ್ದರು. ಅವರವರ ಆರ್ಥಿಕ ಸಾಮರ್ಥ್ಯಕ್ಕೆ ತಕ್ಕಂತೆ ಕವರ್‌ನಲ್ಲಿ ಹಣವಿರುತ್ತಿತ್ತು. ಇನ್ನು ಸಂಬಂಧ ತೀರಾ ಹತ್ತಿರದ್ದಾಗಿದ್ದರೆ ಚಿನ್ನ ಬೆಳ್ಳಿಯ ಉಡುಗೊರೆ ಖಾತ್ರಿ. ಚಿನ್ನದ್ದಾದರೆ, ಉಂಗುರ, ಸರ. ಬೆಳ್ಳಿಯದಾದರೆ ಸಾಮಾನ್ಯವಾಗಿ ದೀಪಾಲೆ ಕಂಬ, ಅರಿಶಿನ ಕುಂಕುಮದ ಬಟ್ಟಲು ಹೀಗೆ

ಯಾರು ಏನು ಕೊಟ್ಟರೆಂದು ಬರೆದಿಟ್ಟುಕೊಂಡು, ಅವರ ಮನೆಯ ಕಾರ್ಯಕ್ರಮಕ್ಕೆ ಹೋದಾಗ, ಅದೇ ಬೆಲೆಯ ಉಡುಗೊರೆ ಕೊಂಡು ಕೊಡುವವರು ಈಗಲೂ ಇದ್ದಾರೆ!

ಇನ್ನು ಮದುವೆಗೆ ಬಂದ ಅತಿಥಿಗಳಿಗೆ ತಾಂಬೂಲದ ಜೊತೆಗೆ, ಅರಿಶಿನ ಕುಂಕುಮ ಎಲೆ ಅಡಿಕೆ ಬಾಳೆಹಣ್ಣು ಕಾಯಿ ಮಡಿಲಕ್ಕಿ. ಅದ್ಯಾವಾಗ Return gift ಕೊಡುವ ಸಂಪ್ರದಾಯ ಬಂತೋ ಗೊತ್ತಿಲ್ಲ. ಹತ್ತಿರದವರಿಗೆ ಸೀರೆ ಪಂಚೆಗಳನ್ನು ಕೊಡುತ್ತಿದ್ದರು. ನಂತರ ಅರಿಶಿನ ಕುಂಕುಮದ ಜೊತೆ ಸ್ಟೀಲ್ ಬಟ್ಟಲು, ಲೋಟ, ಸಣ್ಣ ತಟ್ಟೆಗಳನ್ನು ಕೊಡಲಾರಂಭಿಸಿದರು. ಇಲ್ಲಿಯೂ ಅವರವರ ಆರ್ಥಿಕ ಸ್ಥಿತಿಗೆ ತಕ್ಕಂತೆ ಪಾತ್ರೆಗಳ ಗಾತ್ರ ಹೆಚ್ಚು ಕಡಿಮೆಯಿರುತ್ತಿತ್ತು.

ನಂತರದ ದಿನಗಳಲ್ಲಿ ಈ ರಿಟರ್ನ್ ಗಿಫ್ಟ್‌ಗಳ ಹಾವಳಿ ಹೆಚ್ಚಾಯಿತೆಂದೇ ಹೇಳಬೇಕು. ನೀವು ಗಮನಿಸಿರಬಹುದು, ತಟ್ಟೆ ಲೋಟ ಪಾತ್ರೆಗಳ ಕಾಲ ಎಂದೋ ನಿಂತುಹೋಗಿದೆ. ನನಗೆ ನೆನಪಿರುವ ಹಾಗೆ ಮೊದಲು ಬಂದದ್ದು ಬಾಕ್ಸ್‌ಗಳ ಕಾಲ. ಆಗ ಯಾವ ಮದುವೆಗೆ ಹೋದರೂ ಥರಾವರಿ ಡಬ್ಬಿಗಳನ್ನು ಕೊಡುತ್ತಿದ್ದರು. ನಂತರ ಸ್ಪೂನ್ ಸ್ಟಾಂಡ್‌ಗಳ ತರಹದ ಅಡುಗೆಮನೆಯ ಅಂದವನ್ನು ಹೆಚ್ಚಿಸುವ ಉಪಯೋಗಿ ವಸ್ತುಗಳನ್ನು ಕೊಡಲಾರಂಭಿಸಿದರು.

ಸ್ವಲ್ಪ ವರ್ಷ ಅದರ ಟ್ರೆಂಡ್ ಆದಮೇಲೆ, ಬ್ಯಾಗುಗಳನ್ನು, ಪರ್ಸ್‌ಗಳನ್ನು ಕೊಡುವ ಪರಿಪಾಠ ಶುರುವಾಯಿತು. ಈಗಲೂ ಇದೆಯೆನ್ನಿ. ಮನೆಯಲ್ಲಿ ಥರಹೇವಾರಿ ಪರ್ಸು ಬ್ಯಾಗುಗಳ ಸಂಗ್ರಹ ಶುರುವಾಗತೊಡಗಿತು. ಕೆಲವರಂತೂ, ಹುಡುಗ ಹುಡುಗಿಯ ಹೆಸರು ಹಾಕಿಸಿ ಒಂದು ದಿನದ ಪ್ರವಾಸಕ್ಕೆ ಆಗಬಲ್ಲಂತಹಾ ಕಿಟ್ ಬ್ಯಾಗುಗಳನ್ನೇ ಕೊಡಲು ಮೊದಲು ಮಾಡಿದರು. ಜೊತೆಗೆ ಜೀನ್ಸ್‌ನ ವ್ಯಾನಿಟಿ ಬ್ಯಾಗುಗಳು ಟ್ರೆಂಡ್ ಆದವು.

ಈಗ ನೀವು ಗಮನಿಸಿರಬೇಕು. ಸ್ಟೀಲ್‌ನ ನೀರಿನ ಬಾಟಲ್‌ಗಳ ಟ್ರೆಂಡ್ ಶುರುವಾಗಿದೆ. ಹಾಗೆಯೇ ಕಾಫಿ, ಟೀ, ಸಕ್ಕರೆಗಳನ್ನು ಹಾಕಿಡುವ ಮೂರು ಡಬ್ಬಗಳ ಸೆಟ್ ಈಗ ತುಂಬಾ ಫೇಮಸ್. ಜೊತೆಗೆ ಸಸಿಗಳನ್ನು ಕೊಡುವವರೂ ಇದ್ದಾರೆ. ಪುಸ್ತಕಗಳನ್ನು ಕೊಡುವ ಮಂದಿಯೂ ಅಪರೂಪಕ್ಕೆ ನಿಮಗೆ ಸಿಗುತ್ತಾರೆ, ಬಹುಶಃ ಅವರೇ ಹೆಚ್ಚು ಬೈಗುಳ ತಿನ್ನುವುದೇನೋ ನಿಮಗೂ ಇನ್ನೇನೇನೋ ನೆನಪಾಗಿರಬೇಕಲ್ಲವೇ? ನಾನು ಮರೆತದ್ದನ್ನು ತಿಳಿಸಿ.

ನಾನು ಹೇಳುತ್ತಿರುವುದು ಮಧ್ಯಮ ವರ್ಗ, ಮೇಲ್ಮಧ್ಯಮ ವರ್ಗ ಮತ್ತು ಕೆಳ ಮಧ್ಯಮ ವರ್ಗದಲ್ಲಿ ಚಾಲ್ತಿಯಲ್ಲಿರುವ ಉಡುಗೊರೆಗಳ ಅಭ್ಯಾಸಗಳ ಬಗ್ಗೆ. ಇನ್ನು ಶ್ರೀಮಂತರು, ಅತಿ ಶ್ರೀಮಂತರು, ಮಿಲಿಯನೇರ್, ಬಿಲಿಯನೇರ್‌ಗಳ ಮದುವೆಗಳಲ್ಲಿ ಅತಿಥಿಗಳು ಮತ್ತು ಅಭ್ಯಾಗತರ ನಡುವಿನ ಗಿಫ್ಟ್‌ಗಳ ಕೊಡುಕೊಳ್ಳುವಿಕೆಗೆ ಮಿತಿಯೇ ಇಲ್ಲ. ಕಳೆದ ವರ್ಷ ನಡೆದ ಅಂಬಾನಿಗಳ ಮನೆ ಮದುವೆಯಲ್ಲಿ, ಪ್ರತಿ ಅತಿಥಿಗೂ 2 ಕೋಟಿ ರೂ ಬೆಲೆಯ ಕೈಗಡಿಯಾರ ಕೊಟ್ಟಿದ್ದನ್ನು ಓದಿಯೇ ಇರುತ್ತೀರಿ. ಈಗ ಮದುವೆ ಮಾತ್ರವಲ್ಲ, ನೀವೊಂದು ಬರ್ತ್‌ಡೇ ಪಾರ್ಟಿಗೆ ಹೋದರೂ ಅಲ್ಲಿಯೂ ಈ ರಿಟರ್ನ್ ಗಿಫ್ಟ್‌ನ ಹಾವಳಿ.

> “ನಾವೆಲ್ಲಾ ಶ್ರೀಸಾಮಾನ್ಯರು ಅಲ್ಲಲ್ಲಾ ಅತಿ ಸಾಮಾನ್ಯರು! ನಮಗೆ ಆ ಸೌಲಭ್ಯ ಇಲ್ಲ ಹಾಗಾಗಿ ನಾವೇ ಪರಿಹಾರ ಕಂಡುಕೊಳ್ಳಬೇಕು. ಇವೆಲ್ಲಾ ಎಲ್ಲೋ ಆಗಬೇಕಾದ ಬದಲಾವಣೆಗಳಲ್ಲ, ನಾವು ಜಾಗೃತರಾಗಿ ನಮ್ಮ ಮನೆಯಲ್ಲಿಯೇ ತರಬಹುದಂತಾದ ಬದಲಾವಣೆಗಳು. ಗ್ಲೋಬಲ್ ವಾರ್ಮಿಂಗ್ ಬಗ್ಗೆ ನಾಗರೀಕ ಪ್ರಜ್ಞೆ ಬಗ್ಗೆ ಮಾತಿನಲ್ಲಿ ಕಳಕಳಿ ತೋರಿಸಿದರೆ ಸಾಲದು, ಈ ಸಣ್ಣ ಪುಟ್ಟ ಬದಲಾವಣೆಗಳನ್ನು ತರುವ ಬಗ್ಗೆ ನಾವು ನಿರ್ಧಾರ ಕೈಗೊಳ್ಳಬೇಕು. ಉಡುಗೊರೆ ಉಪಟಳವಾಗಬಾರದು.

ಅವರವರ ಖುಷಿಗೆ ಕೊಟ್ಟುಕೊಳ್ಳುತ್ತಾರೆ, ಅವರಿಷ್ಟ, ಅದರ ಬಗ್ಗೆ ಇವರೇಕೆ ಮಾತನಾಡಬೇಕು ಎಂದು ಯೋಚಿಸುತ್ತಿದ್ದೀರಾ? ಹೌದು ಅದು ನಿಜವೇ ಆದರೆ ಉಡುಗೊರೆ ಹೊರೆಯಾಗುತ್ತಿದೆ ಎಂಬುದನ್ನು ನಾವು ಇಲ್ಲಿ ಗಮನಿಸುತ್ತಿಲ್ಲ ಅಥವಾ ಅದರೆಡೆಗೆ ಜಾಣ ಕುರುಡು ತೋರಿಸುತ್ತಿದ್ದೇವೆ. ಎಷ್ಟೋಬಾರಿ ಈ ಸಮಾರಂಭಗಳಲ್ಲಿ ಮನೆಯ ಅಲಂಕರಣ ವಸ್ತುಗಳನ್ನು ನೀಡುತ್ತೇವೆ. ಮನೆಯೇನು ಮ್ಯೂಸಿಯಮ್ಮೇ ಅವುಗಳನ್ನೆಲ್ಲಾ ಅಂದವಾಗಿ ಜೋಡಿಸಿಡಲು ಜಾಗದ ಕೊರತೆ, ಅವುಗಳನ್ನು ಶುಚಿಯಾಗಿಡುವ ಕಷ್ಟ ಬಲ್ಲವರೇ ಬಲ್ಲರು. ಇನ್ನು ಕೆಲವು ಅಲ್ಲಲ್ಲ ಹಲವು ಬುದ್ಧಿವಂತರು, ಆ ಗಿಫ್ಟ್‌ಗಳನ್ನು ಜೋಪಾನವಾಗಿ ಇಟ್ಟು, ಮತ್ತೊಬ್ಬರಿಗೆ ದಾಟಿಸುತ್ತಾರೆ! ಕೆಲವೊಮ್ಮೆ ಅದು ಕೊಟ್ಟವರಿಗೇ ತಲುಪುವ ಸಾಧ್ಯತೆಯನ್ನೂ ತಳ್ಳಿಹಾಕಲಾಗುವುದಿಲ್ಲ.

ಇನ್ನು ಎಲ್ಲಕಡೆಯಲ್ಲೂ ದೊರೆಯುವ ಒಂದೇ ರೀತಿಯ ರಿಟರ್ನ್ ಗಿಫ್ಟ್ ಕೂಡಾ ನಿರುಪಯೋಗಿ ಎನಿಸಿಬಿಡುತ್ತದೆ. ಅವುಗಳ ಕತೆಯೂ ಮೇಲೆ ಹೇಳಿದ್ದೇ. ಕೆಲವರಿಗೆ ಈ ರೀತಿ ರಿಟರ್ನ್ ಗಿಫ್ಟ್ ಕೊಡುವ ಸಾಮರ್ಥ್ಯ ಇಲ್ಲದಾಗ ಕೀಳರಿಮೆ ಅನುಭವಿಸುತ್ತಾರೆ, ಶುಭಸಮಾರಂಭ ನಡೆದ ಖುಷಿಗಿಂತಾ ಕೀಳರಿಮೆ ಅವರನ್ನು ಕಾಡುತ್ತದೆ. ಆಗ ಪ್ರತಿಷ್ಠೆಗಾಗಿ ಸಾಲ ಮಾಡಿಯಾದರೂ ಕೊಡೋಣ ಎಂದು ಯೋಚಿಸುತ್ತಾರೆ, ಅನಗತ್ಯ ಆರ್ಥಿಕ ಹೊರೆ.

ಇವೆಲ್ಲವನ್ನೂ ಯೋಚಿಸಿದರೆ, ಹಣ ಕೊಟ್ಟು ಬಿಡುವುದು ಒಳ್ಳೆಯ ಉಪಾಯ ಎನಿಸುತ್ತದೆ. ಹಣದ ಮೌಲ್ಯ ಎಂದಿಗೂ ಕಡಿಮೆಯಾಗುವುದಿಲ್ಲ. ಎಷ್ಟೇ ಸಣ್ಣ ಮೊತ್ತವಾದರೂ, ಯಾವಾಗಲೋ ಹೇಗೋ ಉಪಯೋಗಕ್ಕೆ ಬರುತ್ತದೆ. ಇತ್ತೀಚೆಗೆ ಒಂದು ಮದುವೆಯ ಕರೆಯೋಲೆಯಲ್ಲಿ, ವಧು–ವರರು ಹಾಗೆಯೇ ವಿನಂತಿಸಿಕೊಂಡು, ಕ್ಯೂ–ಆರ್ ಕೋಡ್ ಕೊಟ್ಟುಬಿಟ್ಟಿದ್ದರು ಒಳ್ಳೆಯದೆನಿಸಿತು.

ಮತ್ತೊಂದು ನಾನು ಕೇಳಿದ್ದು. ವಧೂ ವರರು ಹೊಸ ಮನೆ ಹೂಡುವವರಿದ್ದರು, ಹೀಗೆಯೇ ಎಲ್ಲರಿಗೂ ಉಡುಗೊರೆಯಾಗಿ ತಮಗೆ ಹೊಸ ಮನೆಗೆ ಅಗತ್ಯವಿರುವ ಸಾಮಾನುಗಳನ್ನು ಕೊಡುವ ವಿನಂತಿ ಮಾಡಿಕೊಂಡಿದ್ದರು. ಇದು ತೀರಾ ಪ್ರಾಕ್ಟಿಕಲ್ ಎನಿಸಿದರೂ ಇಲ್ಲಿ ಯಾರ ಹಣವೂ ವ್ಯರ್ಥವಾಗುವುದಿಲ್ಲ ಉಡುಗೊರೆ ನಿಜಾರ್ಥದಲ್ಲಿ ಉಪಯೋಗಕ್ಕೆ ಬರುತ್ತದೆ. ಈ ಸಂಕಷ್ಟದ ಸಮಯದಲ್ಲಿ ಇಂತಹಾ ಪ್ರಾಕ್ಟಿಕಲ್ ನಿರ್ಧಾರಗಳು ಲಾಭದಾಯಕ ಕೂಡಾ. ಇತ್ತೀಚೆಗೆ ನಮಗೆ ಹೀಗೆಯೇ ಒಬ್ಬರು ಒಂದು ವಸ್ತುವನ್ನು ಕೇಳಿದ್ದರು ಉಡುಗೊರೆಯಾಗಿ. ಅತ್ಯಂತ ಸಂತೋಷದಿಂದ ನಾವೂ ಅದನ್ನೇ ಹುಡುಕಿ ನೀಡಿದೆವು. ಅವರಿಗೂ ಖುಷಿ, ನಮಗೂ ಸಮಾಧಾನ. ಅಂದಹಾಗೆ ನಾವು ನೀಡಿದ್ದು ಅವರು ಕೇಳಿ ಪಡೆದದ್ದು ರೇಡಿಯೋ ಸೆಟ್ಟು!

ಇವು ದೊಡ್ಡ ಪ್ರಮಾಣದ ಉಡುಗೊರೆಗಳ ಮಾತಾದರೆ, ಮನೆ–ಮನೆಗಳಲ್ಲಿ ಶುಭ ಸಮಾರಂಭಗಳಲ್ಲಿ ಕೊಡುವ ಅರಿಶಿಣ ಕುಂಕುಮ ಇತ್ಯಾದಿಗಳು ನಿಜಾರ್ಥದಲ್ಲಿ ಹೊರೆ ಎನಿಸತೊಡಗಿವೆ. ಗೌರಿ ಹಬ್ಬ, ವರಮಹಾಲಕ್ಷ್ಮಿ ವ್ರತ, ಶ್ರಾವಣ ಶುಕ್ರವಾರಗಳು ಮತ್ತು ಇನ್ನೂ ಹಲವು ಹಬ್ಬ ವ್ರತಗಳ ಸಂದರ್ಭದಲ್ಲಿ ಅರಿಶಿನ ಕುಂಕುಮ ಕೊಡುವ ಸಂಪ್ರದಾಯವಿದೆ. ಈಗ ಯಾರೂ ಅರಿಶಿನ ಕುಂಕುಮ ಹೂವು ಎಲೆ ಅಡಿಕೆ ಬಾಳೆಹಣ್ಣು ಕೊಟ್ಟು ಮುಗಿಸುವುದಿಲ್ಲ. ಅದರ ಜೊತೆಗೆ ಅರಿಶಿನ ಕುಂಕುಮಗಳ ಪ್ಯಾಕೆಟ್‌ಗಳು, ಬಾಗಿನದ ಸಾಮಗ್ರಿಗಳನ್ನು ಕೊಡುತ್ತಾರೆ. ಜೊತೆಗೆ ರವಿಕೆಯ ಕಣ. ರವಿಕೆಯ ಕಣ ಮತ್ತೆ ಇನ್ನೊಂದು ಹಬ್ಬದಲ್ಲಿ ಇನ್ನೊಬ್ಬರ ಕೈ ಸೇರುತ್ತದೆ. ಅಲ್ಲಿಂದ ಮತ್ತೊಬ್ಬರದು ಹಾಗೆಯೇ ಮುಂದುವರೆಯುತ್ತದೆ. ಇನ್ನು ಪ್ಲಾಸ್ಟಿಕ್ ಪ್ಯಾಕ್‌ನ ಅರಿಶಿನ ಕುಂಕುಮ ಕಸದ ಬುಟ್ಟಿ ಸೇರುತ್ತದೆ. ಆ ಸಣ್ಣ ಪ್ಯಾಕೆಟ್‌ನಲ್ಲಿ ಕಳಪೆ ಗುಣಮಟ್ಟದ ಅರಿಶಿಣ ಕುಂಕುಮ ಇರುತ್ತದೆ ಎಂದು ಕೆಲವರು ಬಿಸಾಡಿದರೆ, ಇನ್ನೂ ಕೆಲವರಿಗೆ ಆ ಪ್ಯಾಕೆಟ್‌ಗಳನ್ನು ಕತ್ತರಿಸಿ ಬಳಸುವ ವ್ಯವಧಾನವಿರುವುದಿಲ್ಲ. ಹಾಗೆಯೇ ಸುಮ್ಮನೆ ಲೆಕ್ಕ ಹಾಕಿಕೊಳ್ಳಿ. ಇದರಿಂದ ಎಷ್ಟು ಪ್ಲಾಸ್ಟಿಕ್ ತ್ಯಾಜ್ಯ ಉತ್ಪನ್ನವಾಯಿತು? ಅನಗತ್ಯವಾಗಿ ಹಣವೆಷ್ಟು ಪೋಲಾಯಿತು? ಪ್ರಕೃತಿಗೂ ಕಷ್ಟ, ನಮ್ಮ ಜೇಬಿಗೂ ಕತ್ತರಿ. ಅವುಗಳ ಸರಿಯಾದ ವಿಲೇವಾರಿಯನ್ನು ಎಷ್ಟು ಜನ ಮಾಡುತ್ತಾರೆ.

ಈಗ ಸಂಕ್ರಾಂತಿಯ ಸಮಯದಲ್ಲಿಯೂ ವಿಧ–ವಿಧವಾದ ಪ್ಲಾಸ್ಟಿಕ್ ಡಬ್ಬಿಗಳಲ್ಲಿ ಎಳ್ಳು ಬೀರುವ ಅಭ್ಯಾಸ ಬೆಳೆದಿದೆ. ಆ ಸಣ್ಣ ಡಬ್ಬಿಗಳು ಯಾತಕ್ಕೂ ಪ್ರಯೋಜನಕ್ಕೆ ಬಾರದಂತಹವು. ಸುಮ್ಮನೆ ಲೆಕ್ಕ ಹಾಕಿ, 15–20 ಮನೆಗಳಿಂದ ನಿಮಗೆ ಎಳ್ಳು ಅಂತಹ 15–20 ಡಬ್ಬಿಗಳಲ್ಲಿ ಬರುತ್ತದೆ. ಆ ಡಬ್ಬಗಳನ್ನೇನು ನೀವು ಅಡುಗೆ ಮನೆಯಲ್ಲಿಯೋ ಅಥವಾ ಮತ್ತೆ ಎಲ್ಲಿಯೋ ಬಳಸುತ್ತೀರ? ಎಸೆಯಲು ಮನಸಾಗದೆ ಎಲ್ಲೋ ಒಂದಷ್ಟು ತಿಂಗಳುಗಳ ಕಾಲ ಇಡುತ್ತೀರಿ, ನಂತರ ಒಂದುದಿನ ಎಲ್ಲವನ್ನೂ ಎಸೆಯುತ್ತೀರಿ. ಎಷ್ಟು ಪ್ಲಾಸ್ಟಿಕ್ ತ್ಯಾಜ್ಯ ನಿಮ್ಮನೆಯೊಂದರಿಂದಲೇ ಉತ್ಪತ್ತಿಯಾಯಿತು? ಇನ್ನೂ ಇಡೀ ಬಡಾವಣೆ, ನಗರ, ಜಿಲ್ಲೆ, ರಾಜ್ಯ, ದೇಶ ಕಾಗದದ ಪೊಟ್ಟಣಗಳಲ್ಲಿ ಎಳ್ಳು ಬೀರುವ ಹಳೆಯ ಅಭ್ಯಾಸ ಪ್ರಕೃತಿಸ್ನೇಹಿಯಾಗಿರಲಿಲ್ಲವೇ? ನಾವೇಕೆ ಮತ್ತೆ ಅತ್ತಕಡೆ ಹೊರಳಬಾರದು.

ಇನ್ನು ಸಭೆ ಸಮಾರಂಭಗಳಲ್ಲಿ ಹೊದಿಸುವ ಪ್ಲಾಸ್ಟಿಕ್ ಮುತ್ತಿನ ಹಾರಗಳು, ಪೇಟಾಗಳು, ನೆನಪಿನ ಸ್ಮರಣಿಕೆಗಳು, ಶಾಲುಗಳು ದೇವರೇ ಇತ್ತೀಚೆಗೆ ಒಂದು ಸಮಾರಂಭಕ್ಕೆ ಮುಖ್ಯ ಅತಿಥಿಗಳನ್ನಾಗಿ ಪ್ರಖ್ಯಾತ ವಿದ್ವಾಂಸರನ್ನು ಆಹ್ವಾನಿಸಲು ಹೋಗಿದ್ದೆವು. ಅವರು ಒಪ್ಪಿಕೊಂಡು ಎಲ್ಲ ಆಯಿತು. ನಂತರ ಒಳಗಿನಿಂದ ಬಂದ ಅವರ ಶ್ರೀಮತಿಯವರು, ನೋಡಿ ನೀವು ಹಾರ, ಶಾಲು, ಪೇಟಾಗಳಿಗೆ ಖರ್ಚು ಮಾಡಬೇಡಿ, ನಿಮಗೆ ಬೇಕಾದ ಮಾದರಿಯವು ನಮ್ಮ ಮನೆಯಲ್ಲಿಯೇ ದಂಡಿಯಾಗಿವೆ. ದಯವಿಟ್ಟು ಅದರಿಂದಲೇ ಆರಿಸಿಕೊಳ್ಳಿ. ಮತ್ತೆ ನಿಮಗೆ ಹೀಗೆ ಕಾರ್ಯಕ್ರಮ ಮಾಡುವವರು ಗೊತ್ತಿದ್ದರೆ ಅವರನ್ನೂ ನಮ್ಮ ಮನೆಗೆ ಕಳಿಸಿ ಎಂದು ಅಕ್ಷರಶಃ ದೈನ್ಯದಿಂದಲೇ ವಿನಂತಿಸಿಕೊಂಡರು. ಅವರ ಮನೆಯ ಒಂದು ಕೋಣೆಯ ತುಂಬೆಲ್ಲಾ ಶಾಲುಗಳು ಹಾರಗಳು ಪೇಟಾಗಳು ಎಲ್ಲವನ್ನೂ ಯಾರೋ ಪ್ರೀತಿ ಗೌರವಗಳಿಂದಲೇ ಕೊಟ್ಟಿದ್ದರಿಂದ ಎಸೆಯಲು ಮನಸ್ಸು ಬರುವುದಿಲ್ಲ, ಬಳಕೆ ಸಾಧ್ಯವಿಲ್ಲ. ಏನು ಮಾಡಬೇಕು ಎಷ್ಟು ಸ್ಮರಣಿಕೆಗಳಿಗೆ ಮನೆಯಲ್ಲಿ ಜಾಗ ಮಾಡಬಹುದು. ಹಾರಗಳನ್ನು ಹೇಗೋ ಸರಗಳನ್ನಾಗಿ ಮಾಡೋಣವೆಂದರೆ ಮಣಿಸರಗಳನ್ನು ಇಂದಿನ ಮಕ್ಕಳು ಹಾಕುವುದೇ ಇಲ್ಲ! ಮೈಮೇಲೆ ಹಾಕಿದ್ದನ್ನು ದೇವರಿಗೂ ಹಾಕುವಂತಿಲ್ಲ. ಬದಲಿಗೆ ಹಿಂದಿನ ಹಾಗೆ ಸುಗಂಧರಾಜ ಹೂವಿನದೋ ಮಲ್ಲಿಗೆಯದೋ ಅಥವಾ ಯಾವುದೋ ಹೂವಿನ ಹಾರ ಹಾಕಿದರೆ, ಒಂದು–ಎರಡು ದಿನ ಮನೆಯಲ್ಲಿ ಅದರ ಘಮಲಾದರೂ ಇರುತ್ತದೆ.

ಕೃತಕ ಜರಿಯ ಶಾಲುಗಳನ್ನು ಹೊದಿಸಿದರೆ ವಿಪರೀತ ಸೆಖೆ, ಅತ್ತಗೆ ಅವು ಛಳಿಯನ್ನೂ ನೀಗಿಸುವುದಿಲ್ಲ. ಏನು ಮಾಡುವುದು ಅವುಗಳನ್ನು? ಇತ್ತೀಚೆಗೆ ಒಬ್ಬರು ಯಾವುದೋ ಕಾರ್ಯಕ್ರಮದಲ್ಲಿ ನಮ್ಮ ಅಮ್ಮನಿಗೆ ಟವೆಲ್ ಹೊದಿಸಿ, ಸನ್ಮಾನ ಮಾಡಿದರು. ಆ ಟವೆಲ್ ಮನೆಯಲ್ಲಿ ಬಳಕೆಯಾಗುತ್ತಿದೆ. ಒಳ್ಳೆಯ ಉಪಾಯವೆನಿಸಿತು. ಇನ್ನೊಂದು ಕಡೆ ಮಹಿಳಾ ಅತಿಥಿಗಳಿಗೆ ಸೀರೆ, ಪುರುಷರಿಗೆ ಪಂಚೆ ಶಲ್ಯವನ್ನು ನೀಡಿದರು.

ಟೊಪ್ಪಿ ಪೇಟಾಗಳನ್ನು ದಿನವೂ ಧರಿಸಿ ಓಡಾಡುವ ಅಭ್ಯಾಸವೇ ಇಲ್ಲ ಯಾರಿಗೂ. ಅವುಗಳ ವಿಲೇವಾರಿ ಹೇಗೆ? ತನ್ನದೇ ಆದ ಘನತೆಯುಳ್ಳ ಮೈಸೂರು ಪೇಟಾ ಅನ್ನು ಎಸೆಯುವುದುಂಟೇ?

ಎಲ್ಲವೂ ವ್ಯಾಪಾರೀಕರಣಗೊಂಡಿರುವ ಈ ಕಾಲದಲ್ಲಿ ಏನು ಪರಿಹಾರ ಸೂಚಿಸುವುದು ಮತ್ತೆ ಕೆಲವು ಗಣ್ಯರು ಶಾಲು ಹಾರ ಪೇಟಾ ಹಾಕದಿದ್ದರೆ ಅವಮಾನ ಆಯಿತು ಎಂದುಕೊಳ್ಳುತ್ತಾರೆ.

ಪದ್ಧತಿ ಬದಲಾಗಬೇಕೋ? ಮನಃಸ್ಥಿತಿ ಬದಲಾಗಬೇಕೋ?

ಉಡುಗೊರೆಗಳು ಪ್ರೀತಿಯನ್ನು ಅಭಿವ್ಯಕ್ತಿಗೊಳಿಸಲು ಒಂದು ವಿಧಾನ. ಅದನ್ನು ಅಲ್ಲಗಳೆಯಲಾಗದು. ಆದರೆ ಉಡುಗೊರೆಗಳು ಸ್ವೀಕರಿಸುವವರ ದುಗುಡ ಹೆಚ್ಚಿಸಬಾರದು, ಉಪಯೋಗಕ್ಕೆ ಬರುವಂತಿದ್ದರೆ ಉಡುಗೊರೆಗೂ ಒಂದು ಸಮ್ಮಾನ.

ನಮ್ಮ ನೆಚ್ಚಿನ ರಾಷ್ಟ್ರಪತಿಗಳಾಗಿದ್ದ ಎಪಿಜೆ ಅಬ್ದುಲ್ ಕಲಾಮ್ ಅವರು ರಾಷ್ಟ್ರಪತಿಗಳಾಗಿದ್ದಾಗ ದೇಶ–ವಿದೇಶಗಳಿಂದ ಬಂದ ಅಮೂಲ್ಯವಾದ ಉಡುಗೊರೆಗಳನ್ನು ಮ್ಯೂಸಿಯಮ್ ಮಾಡಿ ಇರಿಸಿದರೆ, ನಮ್ಮ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ತಮಗೆ ಬಂದ ಉಡುಗೊರೆಗಳ ಇ–ಹರಾಜು ಏರ್ಪಡಿಸಿ, ಅದರಿಂದ ಬಂದ ಹಣವನ್ನು ನಮಾಮಿ ಗಂಗೆ ಯೋಜನೆಗೆ ಹಾಕುತ್ತಿರುವುದು ನಮಗೇ ತಿಳಿದೇ ಇದೆ. ತಮಗೆ ಬಂದ ಉಡುಗೊರೆಗಳನ್ನು ತಮ್ಮ ಜೊತೆಗೇ ಎತ್ತಿಕೊಂಡು ಹೋದವರ ನಡುವೆ ಇವರಿಬ್ಬರೂ ವಿಭಿನ್ನವಾಗಿ ಯೋಚಿಸಿ ಹೊಸ ಸಂಪ್ರದಾಯಕ್ಕೆ ನಾಂದಿ ಹಾಡಿದರು.

ಆದರೆ ನಾವೆಲ್ಲಾ ಶ್ರೀಸಾಮಾನ್ಯರು ಅಲ್ಲಲ್ಲಾ ಅತಿಸಾಮಾನ್ಯರು ನಮಗೆ ಆ ಸೌಲಭ್ಯ ಇಲ್ಲ. ಹಾಗಾಗಿ ನಾವೇ ಪರಿಹಾರ ಕಂಡುಕೊಳ್ಳಬೇಕು. ಇವೆಲ್ಲಾ ಎಲ್ಲೋ ಆಗಬೇಕಾದ ಬದಲಾವಣೆಗಳಲ್ಲ, ನಾವು ಜಾಗೃತರಾಗಿ ನಮ್ಮ ಮನೆಯಲ್ಲಿಯೇ ತರಬಹುದಂತಾದ ಬದಲಾವಣೆಗಳು. ಗ್ಲೋಬಲ್ ವಾರ್ಮಿಂಗ್ ಬಗ್ಗೆ ನಾಗರೀಕ ಪ್ರಜ್ಞೆ ಬಗ್ಗೆ ಮಾತಿನಲ್ಲಿ ಕಳಕಳಿ ತೋರಿಸಿದರೆ ಸಾಲದು, ಈ ಸಣ್ಣ ಪುಟ್ಟ ಬದಲಾವಣೆಗಳನ್ನು ತರುವ ಬಗ್ಗೆ ನಾವು ನಿರ್ಧಾರ ಕೈಗೊಳ್ಳಬೇಕು. ಉಡುಗೊರೆ ಉಪಟಳವಾಗಬಾರದು.

ಟೀಂ ಮೈಸೂರು ಹಸಿರು ಮೈಸೂರು ಅಭಿಯಾನಕ್ಕೆ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಚಾಲನೆ

ಮೈಸೂರು, ಮೇ 20(ಎಂಕೆ)– ಟೀಂ ಮೈಸೂರು ವತಿಯಿಂದ ಹಮ್ಮಿಕೊಂಡಿರುವ 'ಹಸಿರು ಮೈಸೂರು ಅಭಿಯಾನ'ಕ್ಕೆ ಬುಧವಾರ ಚಾಲನೆ ನೀಡಲಾಯಿತು.

ಮೈಸೂರಿನ ಅವಧೂತ ದತ್ತಪೀಠದ ಆವರಣದಲ್ಲಿ ಗಿಡಗಳಿಗೆ ನೀರು ಪೂರೈಕೆ ಮಾಡುವ ಟ್ಯಾಂಕರ್‌ಗೆ ಹಸಿರು ನಿಶಾನೆ ತೋರುವ ಮೂಲಕ 'ಹಸಿರು ಮೈಸೂರು ಅಭಿಯಾನ'ಕ್ಕೆ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಪ್ರತಿಯೊಬ್ಬರೂ ಪ್ರಕೃತಿಯನ್ನು ಉಳಿಸುವ ಕಾರ್ಯ ಕೈಗೊಳ್ಳಬೇಕು. ಆ ನಿಟ್ಟಿನಲ್ಲಿ ಟೀಂ ಮೈಸೂರು ತಂಡ ಒಂದೊಳ್ಳೆಯ ಕೆಲಸವನ್ನು ಮಾಡುತ್ತಿದ್ದು, ಗಿಡಗಳನ್ನು ನೆಡುವುದು ಮಾತ್ರವಲ್ಲದೇ ಅವುಗಳಿಗೆ ನೀರನ್ನು ಹಾಕಿ ಬೆಳೆಸುವ ಹಸಿರು ಅಭಿಯಾನ ಕೈಗೊಂಡಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ಟೀಂ ಮೈಸೂರು ವತಿಯಿಂದ ಹಮ್ಮಿಕೊಂಡಿರುವ 'ಹಸಿರು ಮೈಸೂರು ಅಭಿಯಾನ'ಕ್ಕೆ ಬುಧವಾರ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಚಾಲನೆ ನೀಡಿದರು. ಶಾಸಕ ಟಿ.ಎಸ್. ಶ್ರೀವತ್ಸ ಇದ್ದಾರೆ.

ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಟೀಂ ಮೈಸೂರು ತಂಡ ಕಳೆದ 12 ವರ್ಷಗಳಿಂದ ಪರಿಸರ ಉಳಿಸುವ ನಿಟ್ಟಿನಲ್ಲಿ ಗಿಡಗಳನ್ನು ನೆಟ್ಟು, ಅವುಗಳನ್ನು ಪೋಷಣೆ ಮಾಡುವ ಕಾರ್ಯ ಮಾಡುತ್ತಿದೆ. ತಂಡಕ್ಕೆ ನೀರಿನ ಟ್ಯಾಂಕರ್ ಸೇರ್ಪಡೆಗೊಳ್ಳುತ್ತಿರುವುದು ನಿಜಕ್ಕೂ ಹರ್ಷದಾಯಕ ಎಂದರು. ಈ ವೇಳೆ ಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ, ಜೆಎಸ್‌ಎಸ್ ಮಹಾ ವಿದ್ಯಾಪೀಠದ ಆಡಳಿತಾಧಿಕಾರಿ ನಿರಂಜನ್ ಮೂರ್ತಿ, ಕ್ಲೂಬರ್ ಸಂಸ್ಥೆಯ ಶ್ರೀಪಾದ್ ಆಚಾರ್ಯ, ಲೆಟ್ಸ್ ಡು ಇಟ್ ಸಂಸ್ಥೆ ಮುಖ್ಯಸ್ಥ ಶಿವಶಂಕರ್, ಟೀಂ ಮೈಸೂರು ತಂಡದ ಕಿರಣ್ ಜೈರಾಮ್‌ಗೌಡ, ಅನಿಲ್ ಜೈನ್, ಹರೀಶ್‌ಬಾಬು, ರಾಮ ಪ್ರಸಾದ್, ಶಿವಪ್ರಸಾದ್, ಮನೋಹರ್, ಅಭಿ ನಂದನ್, ನಿಶ್ಚಿತ್, ಆನಂದ್, ಯತೀಶ್, ರಾಘವೇಂದ್ರ, ಬಾಲಕೃಷ್ಣ, ಗಣೇಶ್, ಸುಮಂತ್, ಹರೀಶ್ ಇಟ್ಟಿಗೆಗೂಡು, ತಿಲಕ್, ಶೇಖರ್, ಚಂದನ್, ಹರೀಶ್ ಶೆಟ್ಟಿ, ಹರೀಶ್ ಗೋಕುಲಂ, ಬಸವರಾಜ್ ಬೆಳವಾಡಿ, ಬಸವರಾಜ್ ಬಳ್ಳಾರಿ, ಮಂಜು ಹುಣಸೂರು, ನಾರಾಯಣ್, ತ್ರಿಮೂರ್ತಿ, ಮಹಿಳಾ ಸದಸ್ಯರಾದ ಉಮಾ, ಜ್ಯೋತಿ, ಉಷಾ, ಶಾಂತ, ಸಹನಾ, ಸುಕೃತ, ಕಾವೇರಿ, ಸುಗುಣ ಶೇಖರ್, ನಂದಿನಿ, ಕಲ್ಯಾಣಿ ಮತ್ತಿತರರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಬಿಡದಿ ಟೌನ್‌ಶಿಪ್‌ಗೆ ಶೇ80ರಷ್ಟು ರೈತರ ಒಪ್ಪಿಗೆ: ಜೂನ್ 1 ರಿಂದಲೇ ಪರಿಹಾರ ಹಣ ಬಿಡುಗಡೆ

ಹೆಚ್‌ಡಿಕೆ ವಿರೋಧದ ನಡುವೆ ಡಿಕೆಶಿ ಮಹತ್ವದ ಘೋಷಣೆ



ಬಿಡದಿ ಟೌನ್‌ಶಿಪ್‌ಗೆ ಭೂಮಿ ನೀಡಲು ಒಪ್ಪಿಗೆ ಸೂಚಿಸಿದ ರೈತರು

ಬೆಂಗಳೂರು: ರಾಮನಗರ ಬಳಿಯ ಬಿಡದಿಯಲ್ಲಿ ಪ್ರಸ್ತಾವಿತ ಗ್ರೇಟರ್ ಬೆಂಗಳೂರು ಟೌನ್‌ಶಿಪ್ ಯೋಜನೆಗೆ ಸುಮಾರು ಶೇ. 80 ರಷ್ಟು ರೈತರು ಒಪ್ಪಿಗೆ ನೀಡಿದ್ದು, ಜೂನ್ ಮೊದಲ ವಾರದಲ್ಲಿ ಪರಿಹಾರ ವಿತರಣೆ ಪ್ರಾರಂಭವಾಗಲಿದೆ ಎಂದು ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರು ಬುಧವಾರ ಘೋಷಿಸಿದ್ದಾರೆ.

ಯೋಜನೆಗೆ ವಿರೋಧ ವ್ಯಕ್ತಪಡಿಸಿದ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಡಿ.ಕೆ.ಶಿವಕುಮಾರ್ ಅವರು, ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲೇ ಟೌನ್‌ಶಿಪ್ ಬಗ್ಗೆ ಪ್ರಸ್ತಾಪಿಸಿದ್ದರು ಎಂದು ತಿರುಗೇಟು ನೀಡಿದರು.

ಚರ್ಚೆಗೆ ಸಿದ್ಧ: ಜೆಡಿಎಸ್ ನಾಯಕರೊಂದಿಗೆ ಅವರು ಆಯ್ಕೆ ಮಾಡಿದ ಯಾವುದೇ ಸ್ಥಳ ಮತ್ತು ಸಮಯದಲ್ಲಿ ಸಾರ್ವಜನಿಕ ಚರ್ಚೆಗೆ ಸಿದ್ಧನಿದ್ದೇನೆ ಎಂದು ಡಿಸಿಎಂ ಸವಾಲು ಹಾಕಿದರು. ಬಿಡದಿ ಗ್ರೇಟರ್ ಬೆಂಗಳೂರು ಟೌನ್‌ಶಿಪ್ ಯೋಜನೆ ಕುರಿತು ಇಂದು ರೈತರೊಂದಿಗೆ ಮಹತ್ವದ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿ ನಡೆಸಿ ವಿವರ ನೀಡಿದ ಡಿಸಿಎಂ, ನಮ್ಮ ಗ್ರೇಟರ್ ಬೆಂಗಳೂರು ಟೌನ್‌ಶಿಪ್ ವಿಷಯಕ್ಕೆ ಸಂಬಂಧಿಸಿದಂತೆ ಎಲ್ಲಾ ರೈತರು ಬಂದಿದ್ದರು. ಅವರಿಗೆ ಪರಿಹಾರದ ಕುರಿತು ನಾನು ಈಗಾಗಲೇ ಘೋಷಣೆ ಮಾಡಿದ್ದೇನೆ. ಹೆಚ್ಚು ಕಡಿಮೆ ಶೇ. 80 ರಷ್ಟು ರೈತರು ಬಂದು ತಮ್ಮ ಒಪ್ಪಿಗೆ ನೀಡಿದ್ದಾರೆ. ಪರಿಹಾರವನ್ನು ಆದಷ್ಟು ಬೇಗ ಬಿಡುಗಡೆ ಮಾಡುವಂತೆ ಅವರು ನಮ್ಮನ್ನು(ರಾಜ್ಯ ಸರ್ಕಾರ) ಒತ್ತಾಯಿಸಿದರು ಎಂದು ಬೆಂಗಳೂರು ಅಭಿವೃದ್ಧಿ ಖಾತೆಯನ್ನು ಹೊಂದಿರುವ ಶಿವಕುಮಾರ್ ಹೇಳಿದರು.


ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಗ್ರಾಮವಾರು ಅಂತಿಮ ಅಧಿಸೂಚನೆಗಳನ್ನು ಹೊರಡಿಸಲಾಗುವುದು ಮತ್ತು ಪರಿಹಾರವನ್ನು ಶೀಘ್ರದಲ್ಲೇ ಬಿಡುಗಡೆ ಮಾಡಲಾಗುವುದು ಎಂದು ಉಪ ಮುಖ್ಯಮಂತ್ರಿ ಹೇಳಿದರು.

ಮೂರು ದಿನಗಳಲ್ಲಿ ಅಧಿಸೂಚನೆ ಹೊರಡಿಸಲಾಗುವುದು ಮತ್ತು ಜೂನ್ ಮೊದಲ ವಾರದಿಂದ, ನಾವು ಅವರೆಲ್ಲರಿಗೂ ಪರಿಹಾರವನ್ನು ಬಿಡುಗಡೆ ಮಾಡಲು ಪ್ರಾರಂಭಿಸುತ್ತೇವೆ ಎಂದು ಶಿವಕುಮಾರ್ ತಿಳಿಸಿದರು.

ಟೌನ್‌ಶಿಪ್ ಯೋಜನೆ ಬಗ್ಗೆ ಸರ್ಕಾರ ಪ್ರಕಟಿಸಿರುವ ಪರಿಹಾರ ಕ್ರಮಗಳು ಮತ್ತು ಭೂಮಿ ಸ್ವಾಧೀನ ಪ್ರಕ್ರಿಯೆ ಕುರಿತು ರೈತರಿಗೆ ವಿವರ ನೀಡಲಾಗಿದ್ದು, ಅವರು ಅದನ್ನು ಒಪ್ಪಿಕೊಂಡಿದ್ದಾರೆ ಎಂದು ಡಿಕೆಶಿ ಹೇಳಿದ್ದಾರೆ.

ಜೂನ್ 30ರೊಳಗೆ ಎಲ್ಲಾ ಸಂಬಂಧಿತ ನೋಟಿಫಿಕೇಶನ್‌ಗಳನ್ನು ಪೂರ್ಣಗೊಳಿಸುವ ಗುರಿ ಇಟ್ಟುಕೊಂಡಿರುವುದಾಗಿ ಅವರು ಸ್ಪಷ್ಟಪಡಿಸಿದರು. ಅಂದರೆ, ಹಳ್ಳಿಗಳಂತೆ ವಿಭಾಗ ಮಾಡಿ ಪ್ರತ್ಯೇಕ ಹಂತಗಳಲ್ಲಿ ಯೋಜನೆ ಜಾರಿಗೆ ಬರಲಿದೆ ಎಂದರು. ಈ ಯೋಜನೆ ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲೇ ಹುಟ್ಟಿಕೊಂಡಿದೆ. ಇದು ನಾನು ಪ್ರಾರಂಭಿಸಿದ ಯೋಜನೆ ಅಲ್ಲ. ಈ ಯೋಜನೆಯನ್ನು ಡಿಎಲ್‌ಎಫ್‌ಗೆ ನೀಡಲಾಗಿದೆ. ನಂತರ ಡಿಎಲ್‌ಎಫ್ ಇದು ಕಾರ್ಯಸಾಧ್ಯವಲ್ಲ ಎಂದು ಹೇಳಿ ಅದರಿಂದ ಹಿಂದೆ ಸರಿದಿದೆ ಎಂದು ಡಿಸಿಎಂ ಹೇಳಿದರು.

ಸಭೆಯಲ್ಲಿ ರೈತರು ತಮ್ಮ ಕೆಲವು ಬೇಡಿಕೆಗಳನ್ನು ಕೂಡ ಮುಂದಿಟ್ಟರು. ವಿಶೇಷವಾಗಿ, ಅಭಿವೃದ್ಧಿ ಆಗುವ ಜಾಗದಲ್ಲಿ ರೈತರಿಗೆ 30x40 ಸೈಟ್‌ಗಳನ್ನು ಮಂಜೂರು ಮಾಡುವಂತೆ ಮನವಿ ಮಾಡಿದರು. ತಮ್ಮ ಭೂಮಿಯನ್ನು ಸರ್ಕಾರಕ್ಕೆ ನೀಡುತ್ತಿರುವ ಹಿನ್ನೆಲೆಯಲ್ಲಿ, ಹಣದೊಂದಿಗೆ ಕನಿಷ್ಠ ಕೆಲವು ಸೈಟ್‌ಗಳ ರೂಪದಲ್ಲಿ ಹಿಂತಿರುಗಿ ಸೌಲಭ್ಯ ನೀಡಬೇಕು ಎಂದು ವಿನಂತಿಸಿದರು. ಅಭಿವೃದ್ಧಿಯಾಗುವ ಪ್ರದೇಶದಲ್ಲೇ ಅವರಿಗೆ ಸೈಟ್ ನೀಡಿದರೆ, ತಮ್ಮ ಭವಿಷ್ಯ ಭದ್ರವಾಗುತ್ತದೆ ಎಂಬ ಅಭಿಪ್ರಾಯವನ್ನು ರೈತರು ವ್ಯಕ್ತಪಡಿಸಿದರು. ಆದರೆ ರೈತರ ಬೇಡಿಕೆಯನ್ನು ತಕ್ಷಣ ಒಪ್ಪಿಕೊಳ್ಳುವ ಬದಲು, ಈ ಬಗ್ಗೆ ಯೋಚನೆ ಮಾಡುತ್ತೇವೆ ಎಂದು ಡಿಸಿಎಂ ಹೇಳಿದ್ದಾರೆ.



ಕರ್ನಾಟಕ ವೈಮಾಂತರಿಕ್ಷ-ರಕ್ಷಣಾ ಕ್ಲಸ್ಟರ್ ಅಭಿವೃದ್ಧಿ

6000 ಕೋಟಿ ರೂ ಹೂಡಿಕೆ; 54000 ಉದ್ಯೋಗ ಸೃಷ್ಟಿ

ಬೆಂಗಳೂರು: ಕರ್ನಾಟಕ ರಾಜ್ಯದಲ್ಲಿ ಮುಂದಿನ ಮೂರು ವರ್ಷಗಳಲ್ಲಿ ವೈಮಾಂತರಿಕ್ಷ, ರಕ್ಷಣೆ, ಎಂಆರ್‌ಒ, ತಯಾರಿಕಾ ಕ್ಲಸ್ಟರ್ ಅಭಿವೃದ್ಧಿಗೊಳಿಸಲಾಗುವುದು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಎಂಬಿ ಪಾಟೀಲ ಹೇಳಿದರು.

ಬುಧವಾರ ಖನಿಜ ಭವನದಲ್ಲಿ ಕಂಪನಿಯ ಉನ್ನತಾಧಿಕಾರಿಗಳ ಜೊತೆಗೆ ನಡೆದ ವಿಸ್ತೃತ ಸಮಾಲೋಚನೆಯ ನಂತರ ಸಚಿವರು ಈ ಮಾಹಿತಿ ನೀಡಿದರು. ವೈಮಾಂತರಿಕ್ಷ ಹಾಗೂ ರಕ್ಷಣಾ ವಲಯದ ಬೆಂಗಳೂರು ಮೂಲದ ಆ್ಯಕ್ಸಿಸ್‌ಕೇಡ್ಸ್ ಏರೊಸ್ಪೇಸ್ ಇನ್‌ಫ್ರಾಸ್ಟ್ರಕ್ಚರ್ ಪ್ರೈವೇಟ್ ಲಿಮಿಟೆಡ್, ರಾಜ್ಯದಲ್ಲಿ ಬರೋಬ್ಬರಿ 6,000 ಕೋಟಿ ಮೊತ್ತದ ಬಂಡವಾಳ ಹೂಡಿಕೆಗೆ ಒಲವು ತೋರಿದೆ ಎಂದು ಹೇಳಿದರು.

200 ಎಕರೆ ಪ್ರದೇಶದಲ್ಲಿ ವೈಮಾಂತರಿಕ್ಷ, ರಕ್ಷಣೆ, ಸೆಮಿಕಂಡಕ್ಟರ್ ಹಾಗೂ ಕೃತಕ ಬುದ್ಧಿಮತ್ತೆ (ಎಐ) ನಾವೀನ್ಯತೆ ಕ್ಷೇತ್ರಗಳಲ್ಲಿ ಉತ್ಪಾದನೆ, ಪರೀಕ್ಷೆ ಮತ್ತು ನಿರ್ವಹಣೆಯ ಸಮಗ್ರ ಕೇಂದ್ರ ಸ್ಥಾಪಿಸಲಾಗುತ್ತದೆ. ಇದು ಆ್ಯಕ್ಸಿಸ್‌ಕೇಡ್ಸ್ ಏರೊಸ್ಪೇಸ್‌ನ ಮುಖ್ಯ ಉದ್ದೇಶವಾಗಿದೆ. ಜಾಗತಿಕ ಪಾಲುದಾರಿಕೆಯಡಿ ದೇಶೀಯವಾಗಿ ಸಂಶೋಧನೆ ಹಾಗೂ ಅಭಿವೃದ್ಧಿ ಕೇಂದ್ರವನ್ನೂ ಸ್ಥಾಪಿಸಲಿದೆ ಎಂದರು.

54,000 ಉದ್ಯೋಗ ಸೃಷ್ಟಿ: ಕಂಪನಿಯು ಹಂತ ಹಂತವಾಗಿ ಒಟ್ಟು 6,000 ಕೋಟಿ ರೂ. ಬಂಡವಾಳ ಹೂಡಿಕೆ ಮಾಡಲಿದೆ. ಇದರಿಂದ ರಾಜ್ಯದಲ್ಲಿ ಪ್ರತ್ಯಕ್ಷವಾಗಿ 20 ಸಾವಿರ ಹಾಗೂ ಪರೋಕ್ಷವಾಗಿ 54 ಸಾವಿರ ಉದ್ಯೋಗಗಳು ಸೃಷ್ಟಿಯಾಗಲಿವೆ. ಕ್ಷಿಪಣಿ ತಯಾರಿಕೆಯ ಪೂರಕ ಸೌಲಭ್ಯ, ರೇಡಾರ್-ಸಂವೇದಕ, ಯುದ್ಧ ವಿಮಾನಗಳ ದುರಸ್ತಿ – ನಿರ್ವಹಣೆ ಸೌಲಭ್ಯ (ಎಂಆರ್‌ಒ) ಸೇರಿದಂತೆ ವೈಮಾಂತರಿಕ್ಷ ಹಾಗೂ ರಕ್ಷಣಾ ವಲಯದ ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಕಂಪನಿ ಉದ್ದೇಶಿಸಿದೆ.



ಮೊದಲ ಹಂತದಲ್ಲಿ 1,290 ಕೋಟಿ ರೂಪಾಯಿ, 2ನೇ ಹಂತದಲ್ಲಿ 2,898 ಕೋಟಿ ರೂಪಾಯಿ ಮತ್ತು 3ನೇ ಹಂತದಲ್ಲಿ 1,512 ಕೋಟಿ ರೂಪಾಯಿ ಬಂಡವಾಳ ಹೂಡಿಕೆ ಮಾಡಲಿದೆ. ನಂತರ ಹಂತ ಹಂತವಾಗಿ ಹೂಡಿಕೆ ಪೂರ್ಣಗೊಳ್ಳಲಿದೆ.

ವಿವಿಧ ವಿಮಾನ ನಿಲ್ದಾಣಗಳ ಪರಿಗಣಿಸಲು ಸಲಹೆ: ಈ ಯೋಜನೆ ಕಾರ್ಯಗತಗೊಳಿಸಲು ಕಂಪನಿಯು ದೇವನಹಳ್ಳಿ ಬಳಿ ಭೂಮಿ ಒದಗಿಸಲು ಮನವಿ ಮಾಡಿಕೊಂಡಿದೆ. 1.8 ಕಿ.ಮೀ ಉದ್ದದ ರನ್ ವೇ ನಿರ್ಮಾಣದ ಉದ್ದೇಶ ಕೂಡ ಇದೆ ಎಂದು ಕಂಪನಿ ಹೇಳಿದೆ. ಹಾಗಾದರೆ ಹಾಸನ, ವಿಜಯಪುರ ಹಾಗೂ ಶಿವಮೊಗ್ಗ ವಿಮಾನ ನಿಲ್ದಾಣಗಳನ್ನು ಬೇಕಾದರೂ ಪರಿಗಣಿಸಬಹುದು ಎಂದು ಸಚಿವರು ಸಲಹೆ ನೀಡಿದ್ದಾರೆ. ಹಾಲಿ ಇರುವ ದೇವನಹಳ್ಳಿ ಘಟಕದ ಸನಿಹದಲ್ಲೇ ಈ ಉದ್ದೇಶಿತ ಘಟಕ ಇರಬೇಕು ಎನ್ನುವ ಬೇಡಿಕೆಯನ್ನು ಸಂಸ್ಥೆ ಪ್ರತಿನಿಧಿಗಳು ತಿಳಿಸಿದರು. ನಂತರ ಸಚಿವರು ರನ್ ವೇ ನಿರ್ಮಾಣಕ್ಕೂ ಅನುಕೂಲ ಇರುವ ಕಡೆ ಜಾಗ ಗುರುತಿಸಲು ಅಧಿಕಾರಿಗಳಿಗೆ ಸೂಚಿಸಿದರು.

ಭಾರತದ ಆರ್ಥಿಕ ಬೆಳವಣಿಗೆ ಕುರಿತು ವಿಶೇಷ ಉಪನ್ಯಾಸ

ಮೈಸೂರು: ಮೈಸೂರು ಕುವೆಂಪು ನಗರದ ಕಲಾಸುರುಚಿ ಸಂಸ್ಥೆ ವತಿಯಿಂದ ಅರ್ಥಾತ್ ಶೀರ್ಷಿಕೆಯಡಿ ಏರ್ಪಡಿಸಿರುವ 'ಭಾರತದ ಆರ್ಥಿಕ ಬೆಳವಣಿಗೆಯ ಕಥನ ಪ್ರೊ.ಕಾರ್ತಿಕ್ ಮುರಳೀಧರನ್ ಅವರ ನೋಟ' ವಿಷಯ ಕುರಿತು ಶನಿವಾರ(ಮೇ 23) ಸಂಜೆ 6.30ಕ್ಕೆ ಪ್ರೊ.ಟಿ.ಎಸ್.ವೇಣುಗೋಪಾಲ್ ವಿಶೇಷ ಉಪನ್ಯಾಸ ನೀಡಲಿದ್ದಾರೆ.

ಮೈಸೂರು ಮಿತ್ರ

ಮೆಡಿಕಲ್ ಸ್ಟೋರ್ ಬಂದ್‌ಗೆ ಮೈಸೂರಿನಲ್ಲಿ ನೀರಸ ಪ್ರತಿಕ್ರಿಯೆ

ಶೇ.99ರಷ್ಟು ಮೆಡಿಕಲ್ ಶಾಪ್‌ಗಳಲ್ಲಿ ಎಂದಿನಂತೆ ವ್ಯಾಪಾರ–ವ್ಯವಹಾರ

● ಮೈಸೂರು ಜಿಲ್ಲೆಯಲ್ಲಿವೆ 3 ಸಾವಿರ ಮೆಡಿಕಲ್ ಸ್ಟೋರ್ ● ತೆರೆದಿದ್ದ ಮೆಡಿಕಲ್ ಸ್ಟೋರ್‌ಗಳಿಗೆ ಪೊಲೀಸ್ ಭದ್ರತೆ ● ಆನ್‌ಲೈನ್ ಔಷಧ ಮಾರಾಟಕ್ಕೆ ಸಂಘಟಿತ ಹೋರಾಟ ● ಕಪ್ಪು ಪಟ್ಟಿ ಧರಿಸಿ ಸಾಂಕೇತಿಕ ಪ್ರತಿಭಟನೆ







ಅಖಿಲ ಭಾರತ ಕೆಮಿಸ್ಟ್ ಅಂಡ್ ಡ್ರಗ್ಗಿಸ್ಟ್ ಸಂಘಟನೆ ಕರೆ ನೀಡಿದ್ದ ಮೆಡಿಕಲ್ ಸ್ಟೋರ್ ಬಂದ್ ಕರೆಗೆ ಬೆಂಬಲ ನೀಡದೇ ಮೈಸೂರಿನ ಬಹುತೇಕ ಮೆಡಿಕಲ್ ಸ್ಟೋರ್‌ಗಳು ಬಾಗಿಲು ತೆರೆದಿದ್ದವು. (ಎಡಚಿತ್ರ), ಅನಧಿಕೃತ ಆನ್‌ಲೈನ್ ಔಷಧ ಮಾರಾಟ ವಿರೋಧಿಸಿ ಮೈಸೂರು ಜಿಲ್ಲಾ ಔಷಧ ವ್ಯಾಪಾರಿಗಳ ಕ್ಷೇಮಾಭಿವೃದ್ಧಿ ಸಂಘದವರು ಮೈಸೂರು ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಿದರು. ಮೈಸೂರಿನ ಸಯ್ಯಾಜಿರಾವ್ ರಸ್ತೆಯ ರಘುಲಾಲ್ ಅಂಡ್ ಕೋ ಮಾಲೀಕ ಎನ್.ರಾಘವನ್ ಅವರು ಕಪ್ಪು ಪಟ್ಟಿ ಧರಿಸಿ ಸಾಂಕೇತಿಕ ಪ್ರತಿಭಟನೆ ನಡೆಸಿದರು.

ಮೈಸೂರು, ಮೇ20(ಬಿಎಲ್‌ಯು)– ಅನಧಿಕೃತ ಆನ್‌ಲೈನ್ ಔಷಧ ಮಾರಾಟ ಸ್ಥಗಿತ ಸೇರಿದಂತೆ ಹಲವು ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಅಖಿಲ ಭಾರತ ಕೆಮಿಸ್ಟ್ ಅಂಡ್ ಡ್ರಗ್ಗಿಸ್ಟ್ ಸಂಘಟನೆ (ಎಐಒಸಿಡಿ) ಕರೆ ನೀಡಿದ್ದ ಮೆಡಿಕಲ್ ಸ್ಟೋರ್ ಬಂದ್‌ಗೆ ಮೈಸೂರಿನಲ್ಲಿ ನೀರಸ ಪ್ರತಿಕ್ರಿಯೆ ವ್ಯಕ್ತವಾಯಿತು.

ಎಐಒಸಿಡಿ ಕರೆ ನೀಡಿರುವ ಬಂದ್ ಬೆಂಬಲಿಸಿ ಮೈಸೂರಿನ ಬೆರಳಣಿಕೆಯಷ್ಟು ಮೆಡಿಕಲ್ ಸ್ಟೋರ್‌ಗಳು ಮಾತ್ರ ಬಂದ್ ಆಗಿದ್ದರೆ, ಉಳಿದಂತೆ ಶೇ.99ರಷ್ಟು ಮೆಡಿಕಲ್ ಸ್ಟೋರ್‌ಗಳು ಎಂದಿನಂತೆ ಬಾಗಿಲು ತೆರೆದು ವ್ಯವಹಾರ ನಡೆಸಿದವು.

ಮೈಸೂರು ನಗರ ಹಾಗೂ ಜಿಲ್ಲೆಯಲ್ಲಿ ಸುಮಾರು 3 ಸಾವಿರ ಮೆಡಿಕಲ್ ಸ್ಟೋರ್‌ಗಳಿದ್ದು, ಶೇಕಡ 99ರಷ್ಟು ಮೆಡಿಕಲ್ ಸ್ಟೋರ್‌ಗಳು ಬಾಗಿಲು ತೆರೆದಿದ್ದರಿಂದ ರೋಗಿಗಳಿಗೆ ಯಾವುದೇ ರೀತಿಯಲ್ಲೂ ತೊಂದರೆ ಆಗಲಿಲ್ಲ.

ಆದರೂ ಪ್ರತಿಭಟನಾನಿರತರಿಂದ ವ್ಯವಹಾರಕ್ಕೆ ಅಡ್ಡಿ ಆಗಬಾರದು ಎಂಬ ದೃಷ್ಟಿಯಿಂದ ನಗರದ ಸಯ್ಯಾಜಿರಾವ್ ರಸ್ತೆಯ ರಘುಲಾಲ್ ಮೆಡಿಕಲ್ಸ್ ಸೇರಿದಂತೆ ಇತರೆ ಮೆಡಿಕಲ್ ಸ್ಟೋರ್‌ಗಳಲ್ಲಿ ಪೊಲೀಸ್ ಭದ್ರತೆ ಒದಗಿಸಲಾಗಿತ್ತು.

> ಮೈಸೂರು ಸೇರಿದಂತೆ ದೇಶದಲ್ಲಿ ಶೇಕಡ 13ರಿಂದ 17ರಷ್ಟು ಔಷಧಗಳು ಆನ್‌ಲೈನ್‌ನಲ್ಲಿ ಮಾರಾಟವಾಗುತ್ತಿವೆ. ಉಳಿದಂತೆ ಶೇಕಡ 83ರಷ್ಟು ಔಷಧಗಳ ಖರೀದಿಗೆ ಮೆಡಿಕಲ್ ಸ್ಟೋರ್‌ಗಳನ್ನೆ ಅವಲಂಬಿಸಬೇಕಿದೆ. ಫುಡ್ ಅಂಡ್ ಡ್ರಗ್ ಅಡ್ಮಿನಿಸ್ಟ್ರೇಷನ್ ಅನಧಿಕೃತ ಆನ್‌ಲೈನ್ ಔಷಧ ಮಾರಾಟದ ಮೇಲೆ ಕಣ್ಣಿಟ್ಟಿದೆ. ಈಗಾಗಲೇ ನಾವು ಕೂಡ ಅನಧಿಕೃತ ಆನ್‌ಲೈನ್ ಔಷಧ ಮಾರಾಟಗಾರರ ವಿರುದ್ಧ ಪ್ರಕರಣ ದಾಖಲಿಸಿದ್ದು, ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆ. ಅನಧಿಕೃತ ಔಷಧ ಮಾರಾಟದಲ್ಲಿ ದೋಷಪೂರಿತ, ನಕಲಿ, ಅವಧಿ ಮೀರಿದ, ಕಳಪೆ ಗುಣಮಟ್ಟದ ಔಷಧಗಳು ಮಾರಾಟವಾಗುತ್ತವೆ. ಇದು ರೋಗಿಗಳ ಜೀವಕ್ಕೆ ಅಪಾಯ ಉಂಟು ಮಾಡುತ್ತದೆ. ಇದನ್ನು ಸರ್ಕಾರ ಮೊದಲು ಮಟ್ಟ ಹಾಕಬೇಕು. **–ಎಸ್.ಮಂಜುನಾಥ್, ಅಧ್ಯಕ್ಷ, ಮೈಸೂರು ಜಿಲ್ಲಾ ಕೆಮಿಸ್ಟ್ ಅಂಡ್ ಡಿಸ್ಟ್ರಿಬ್ಯೂಟರ್ಸ್ ಅಸೋಸಿಯೇಷನ್**

ಆನ್‌ಲೈನ್ ಔಷಧ ಮಾರಾಟ ವಿರೋಧಿಸಿ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದ ಮೈಸೂರು ಜಿಲ್ಲಾ ಕೆಮಿಸ್ಟ್ ಅಂಡ್ ಡಿಸ್ಟ್ರಿಬ್ಯೂಟರ್ಸ್ ಅಸೋಸಿಯೇಷನ್ ಸಂಯೋಜಿತ ಮೆಡಿಕಲ್ ಸ್ಟೋರ್ಸ್ ಮಾಲೀಕರು ಇಂದು ಕಪ್ಪು ಪಟ್ಟಿ ಧರಿಸಿ ಸಾಂಕೇತಿಕವಾಗಿ ಪ್ರತಿಭಟನೆ ನಡೆಸಿದರು.

ಔಷಧಗಳು ಮನುಷ್ಯನಿಗೆ ಅತ್ಯಂತ ಅವಶ್ಯವಾಗಿದ್ದು, ಸೂಕ್ತ ಸಮಯಕ್ಕೆ ಔಷಧ ದೊರೆಯದಿದ್ದರೆ ಜೀವಕ್ಕೆ ಅಪಾಯ ಎದುರಾಗುವ ಸಾಧ್ಯತೆ ಇದೆ. ಹಣಗಳಿಸುವುದೇ ಮುಖ್ಯ ಉದ್ದೇಶವಲ್ಲ. ರೋಗಿಗಳಿಗೆ ಅನಾನುಕೂಲ ಆಗಬಾರದು ಎಂಬ ಹಿನ್ನೆಲೆಯಲ್ಲಿ ನಾವು ಮೆಡಿಕಲ್ ಸ್ಟೋರ್‌ಗಳನ್ನು ಮುಚ್ಚಿಲ್ಲ ಎಂದು ಮೈಸೂರಿನ ರಘುಲಾಲ್ ಮೆಡಿಕಲ್ಸ್ ಮಾಲೀಕ ರಾಘವನ್ ಅವರು ಸ್ಪಷ್ಟಪಡಿಸಿದರು.

1955ರ ಅಗತ್ಯ ಸರಕುಗಳ ಕಾಯ್ದೆಯಡಿ ನಮ್ಮ ಕುಂದು ಕೊರತೆಗಳನ್ನು ಸರ್ಕಾರಕ್ಕೆ ಮನವರಿಕೆ ಮಾಡಿಕೊಡಲು ಪ್ರತಿಭಟನೆಗೆ ವಿಭಿನ್ನ ಮಾರ್ಗಗಳಿವೆ. ಮೆಡಿಕಲ್ ಸ್ಟೋರ್ ಬಂದ್ ಮಾಡುವುದೇ ಸಮಸ್ಯೆಗೆ ಪರಿಹಾರವಲ್ಲ ಎಂದು ಹಲವು ಮೆಡಿಕಲ್ ಸ್ಟೋರ್ ಮಾಲೀಕರು ಅಭಿಪ್ರಾಯಪಟ್ಟರು.

ಅನಧಿಕೃತ ಆನ್‌ಲೈನ್ ಔಷಧ ಮಾರಾಟ ವಿರೋಧಿಸಿ ಮೈಸೂರು ಜಿಲ್ಲಾ ಔಷಧ ವ್ಯಾಪಾರಿಗಳ ಕ್ಷೇಮಾಭಿವೃದ್ಧಿ ಸಂಘದವರು ಮೈಸೂರು ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಿದರು. ಸಂಘದ ಅಧ್ಯಕ್ಷ ಕುಮಾರಸ್ವಾಮಿ, ಅಮಾನುಲ್ಲಾ ಖಾನ್ ಸೇರಿದಂತೆ ಇತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಮೈಸೂರು ನಗರ ಮತ್ತು ಜಿಲ್ಲಾ ಚಿಲ್ಲರೆ ಔಷಧ ವ್ಯಾಪಾರಿಗಳ ಸಂಘದವರು ಔಷಧ ಉಪನಿಯಂತ್ರಾಧಿಕಾರಿ ಅವರಿಗೆ ಮನವಿ ಸಲ್ಲಿಸಿದರು. ಈ ವೇಳೆ ಸಂಘದ ಅಧ್ಯಕ್ಷ ಎಂ.ರಾಜು, ಕಾರ್ಯಾಧ್ಯಕ್ಷ ಎಸ್.ದೇವರಾಜು, ಕಾರ್ಯದರ್ಶಿ ಸಿ.ಕೆ.ಅರುಣ್ ಹಾಗೂ ಇತರರು ಈ ವೇಳೆ ಹಾಜರಿದ್ದರು.

ಮೈಸೂರು ಶ್ರೀಕೃಷ್ಣಧಾಮದ ಸಮೀಪದ ವೃತ್ತಕ್ಕೆ ಪೇಜಾವರ ಮಠದ

ಶ್ರೀ ವಿಶ್ವೇಶತೀರ್ಥ ಶ್ರೀಪಾದರ ಹೆಸರು ನಾಮಕರಣಕ್ಕೆ ಜಿಲ್ಲಾಡಳಿತಕ್ಕೆ ಪತ್ರ

ಶ್ರೀಕೃಷ್ಣ ಮಿತ್ರಮಂಡಳಿಯ ಸುವರ್ಣ ಸಂಭ್ರಮದ ಸಮಾರೋಪದಲ್ಲಿ ಶಾಸಕ ಕೆ.ಹರೀಶ್‌ಗೌಡ ಮಾಹಿತಿ



ಮೈಸೂರಿನ ಸರಸ್ವತಿಪುರಂನ ಶ್ರೀಕೃಷ್ಣಧಾಮದ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಶ್ರೀಕೃಷ್ಣ ಮಿತ್ರಮಂಡಳಿಯ ಸುವರ್ಣ ಸಂಭ್ರಮದ ಸಮಾರೋಪ ಸಮಾರಂಭದಲ್ಲಿ ಮಂಡಳಿಯ ಸಂಸ್ಥಾಪಕ ಸದಸ್ಯರನ್ನು ಸನ್ಮಾನಿಸಲಾಯಿತು.

ಮೈಸೂರು,ಮೇ 20(ಪಿಎಂ)– ಉಡುಪಿಯ ಪೇಜಾವರ ಮಠದ ವಿಶ್ವೇಶ ತೀರ್ಥ ಶ್ರೀಪಾದರ ಹೆಸರನ್ನು ಮೈಸೂರಿನ ಸರಸ್ವತಿಪುರಂನ ಶ್ರೀಕೃಷ್ಣಧಾಮದ ಸಮೀಪದ ವೃತ್ತವೊಂದಕ್ಕೆ ನಾಮಕರಣ ಮಾಡಲು ಜಿಲ್ಲಾಡಳಿತಕ್ಕೆ ಈಗಾಗಲೇ ಪತ್ರ ಬರೆದಿರುವುದಾಗಿ ಶಾಸಕ ಕೆ.ಹರೀಶ್‌ಗೌಡರು ತಿಳಿಸಿದರು.

ಮೈಸೂರಿನ ಸರಸ್ವತಿಪುರಂನ ಶ್ರೀಕೃಷ್ಣಧಾಮದ ಸಭಾಂಗಣದಲ್ಲಿ ಶ್ರೀ ಕೃಷ್ಣ ಮಿತ್ರ ಮಂಡಳಿ ಮತ್ತು ಶ್ರೀ ಕೃಷ್ಣ ಟ್ರಸ್ಟ್ ವತಿಯಿಂದ ಬುಧವಾರ ಹಮ್ಮಿಕೊಂಡಿದ್ದ ಶ್ರೀಕೃಷ್ಣ ಮಿತ್ರಮಂಡಳಿಯ ಸುವರ್ಣ ಸಂಭ್ರಮದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಶಾಸಕ ಶ್ರೀವತ್ಸ ಹಾಗೂ ನಾನು ಇಬ್ಬರು ಜಿಲ್ಲಾಡಳಿತಕ್ಕೆ ಈಗಾಗಲೇ ಪತ್ರ ಬರೆದಿದ್ದೇವೆ. ಈ ಬಗ್ಗೆ ಮತ್ತೊಮ್ಮೆ ಜಿಲ್ಲಾಡಳಿತದ ಗಮನಕ್ಕೆ ತರಲಾಗುವುದು. ಶ್ರೀ ಕೃಷ್ಣ ಮಿತ್ರ ಮಂಡಳಿ 50 ವರ್ಷಗಳನ್ನು ಪೂರೈಸಿರುವುದು ಸಂತಸದ ಸಂಗತಿ. ಕೃಷ್ಣಧಾಮವನ್ನು ನನಗೆ ಬುದ್ಧಿ ಬಂದಾಗಿನಿಂದಲೂ ನೋಡುತ್ತಿದ್ದೇನೆ. ಕೃಷ್ಣಧಾಮದಿಂದ ಸಮಾಜ ಸೇವಾ ಕಾರ್ಯಗಳು ನಿರಂತರವಾಗಿ ನಡೆಯುತ್ತಿವೆ ಎಂದು ಹೇಳಿದರು.

ಉಡುಪಿಯ ಶ್ರೀ ಪುತ್ತಿಗೆ ಮಠದ ಪೀಠಾಧಿಪತಿಗಳಾದ ಶ್ರೀ 1008 ಶ್ರೀ ಸುಗುಣೇಂದ್ರತೀರ್ಥ ಸ್ವಾಮೀಜಿ ಮಾತನಾಡಿ, ಸಮಾಜ ಸೇವೆ, ಸಮಷ್ಠಿ ಚಿಂತನೆ ಹಾಗೂ ತ್ಯಾಗವು ಮಾನವ ಜೀವನದ ಉದ್ದೇಶವಾಗಬೇಕು. ಆಗ ನಮ್ಮೊಳಗೆ ಸಂಘರ್ಷ ಕಡಿಮೆಯಾಗಿ ಶಾಂತಿ ನೆಲೆಸುತ್ತದೆ ಎಂದರು.

ಮಾನವನಿಗೆ ವಯಸ್ಸು ಹೆಚ್ಚಾದಷ್ಟು ರೋಗಗ್ರಸ್ತನಾಗುತ್ತಾನೆ. ಆದರೆ ಸಂಸ್ಥೆಗಳಿಗೆ ವರ್ಷ ಹೆಚ್ಚಾದರೆ ಅದು ಸುಭದ್ರವಾಗಿದೆ ಎಂಬುದರ ಸೂಚನೆ. ಸುವರ್ಣ ಸಂಭ್ರಮ ಆಚರಿಸಲು ಸಂಸ್ಥೆಯಲ್ಲಿ ಶಿಸ್ತು ಕಾರಣ. ತ್ಯಾಗದ ದೃಷ್ಟಿಯಿಂದ ಸಂಸ್ಥೆಯ ಪದಾಧಿಕಾರಿ ಆಯ್ಕೆ ಮಾಡಿದಾಗ ಭಿನ್ನಮತ ಮೂಡುವುದಿಲ್ಲ. ಇದೇ ಕಾರಣದಿಂದ ಕೃಷ್ಣ ಮಿತ್ರ ಮಂಡಳಿಯಲ್ಲಿ 50 ವರ್ಷಗಳೂ ಚುನಾವಣೆ ನಡೆಯದೆ ಪದಾಧಿಕಾರಿಗಳ ಆಯ್ಕೆಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಬ್ರಾಹ್ಮಣ ಸಮುದಾಯಗಳಲ್ಲಿ ಏಕತೆ ಕಡಿಮೆ ಆಗಿದೆ. ಆ ಭಾವನೆಯನ್ನು ಮೆಟ್ಟಿನಿಂತು ಸಮುದಾಯವನ್ನು ಒಂದೇ ಕಡೆ ಸೇರಿಸುತ್ತಿರುವುದು ಅಭಿನಂದನೀಯ. ಬ್ರಾಹ್ಮಣರ ಸಾತ್ವಿಕ ಸಂಪ್ರದಾಯ ಉಳಿಸುವುದಕ್ಕಾಗಿ ಎಲ್ಲರನ್ನೂ ಒಂದುಗೂಡಿಸುವ ಕೆಲಸ ಆಗಬೇಕು ಎಂದರು.

ಶ್ರೀ ಪುತ್ತಿಗೆ ಮಠದ ವತಿಯಿಂದ ವಿಶ್ವದಾದ್ಯಂತ ನಮ್ಮ ಸಂಸ್ಕೃತಿ ರಕ್ಷಣೆಯಾಗಬೇಕು ಎಂಬ ಕಾರಣಕ್ಕೆ ಅಮೆರಿಕ, ಕೆನಡಾ, ಇಂಗ್ಲೆಂಡ್ ಸೇರಿದಂತೆ ಮೊದಲಾದೆಡೆ ಅನೇಕ ಸಾಂಸ್ಕೃತಿಕ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ. ಇದಲ್ಲದೇ ವಿಶ್ವದಾದ್ಯಂತ ಬ್ರಾಹ್ಮಣ ಸಮಾಜದ ಸಂಘಟನೆಗೂ ಒತ್ತು ನೀಡಲಾಗುತ್ತಿದೆ. ಮಾತ್ರವಲ್ಲದೇ ಸ್ವಾಮೀಜಿಗಳೆಲ್ಲರನ್ನು ಸಂಘಟಿಸಿ ನಾನಾ ಧಾರ್ಮಿಕ ಚಟುವಟಿಕೆಗಳನ್ನು ಆಯೋಜಿಸುವ ಮೂಲಕ ಧರ್ಮದ ಉಳಿವಿಗೆ ಕೊಡುಗೆ ನೀಡುವ ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ ಎಂದು ತಿಳಿಸಿದರು.

ಇದಕ್ಕೂ ಮುನ್ನ ಕೃಷ್ಣ ಮಂಡಳಿಯ ಸಂಸ್ಥಾಪಕ ಸದಸ್ಯರಾದ ಕೃಷ್ಣದಾಸ್ ಪುರಾಣಿಕ್, ಅನಂತ ತಂತ್ರಿ, ರಾಮಕೃಷ್ಣ ಬಲ್ಲಾಳ್, ಬಾಲಕೃಷ್ಣ ಆಚಾರ್ಯ, ಎಸ್.ರಘುರಾಮ ಭಟ್ ಅವರನ್ನು ಸನ್ಮಾನಿಸಲಾಯಿತು.

ಮಂಡಳಿ ಅಧ್ಯಕ್ಷ ಎನ್.ಗೋಪಾಲಕೃಷ್ಣನ್, ಉಪಾಧ್ಯಕ್ಷ ಶ್ರೀವತ್ಸ ರಾವ್, ಗೌರವ ಕಾರ್ಯದರ್ಶಿ ಪಿ.ಜಿ.ಗುರುಪ್ರಸಾದ್, ಟ್ರಸ್ಟ್ ಉಪಾಧ್ಯಕ್ಷರಾದ ರವಿಶಾಸ್ತ್ರಿ ಪಿ.ಎಸ್.ಶೇಖರ್, ಕಾರ್ಯದರ್ಶಿ ಕೆ.ವಿ.ಶ್ರೀಧರ್ ಮತ್ತಿತರರು ಹಾಜರಿದ್ದರು. ಸಭಾ ಕಾರ್ಯಕ್ರಮದ ಬಳಿಕ ಪಂಡಿತ್ ಪ್ರವೀಣ್ ಗೋಡ್ಖಿಂಡಿ ಮತ್ತು ತಂಡದವರಿಂದ 'ರಾಗಸುಧೆ' ಕೊಳಲು ವಾದನ ಕಾರ್ಯಕ್ರಮ ನಡೆಯಿತು.

ಇಂದು ಸ್ಟಡಿ ಸರ್ಕಲ್ ಮೀಟಿಂಗ್

ಮೈಸೂರು: ಮೈಸೂರು ಡಿವಿಷನ್ ಟ್ಯಾಕ್ಸ್ ಪ್ರಾಕ್ಟೀಷನರ್ಸ್ ಅಸೋಸಿಯೇಷನ್ ವತಿಯಿಂದ ಇನ್‌ಕಂ ಟ್ಯಾಕ್ಸ್ ಆಕ್ಟ್–2025 ಬಗ್ಗೆ ಸ್ಟಡಿ ಸರ್ಕಲ್ ಸಭೆಯನ್ನು ಸಂಘದ ಆವರಣದಲ್ಲಿ ನಾಳೆ (ಗುರುವಾರ) ಸಂಜೆ 6 ರಿಂದ 7.30 ರವರೆಗೆ ಹಮ್ಮಿಕೊಳ್ಳಲಾಗಿದೆ.

ಆಸಕ್ತ ತೆರಿಗೆ ವೃತ್ತಿಪರರು ಅಸೋಸಿಯೇಷನ್ ಅಧ್ಯಕ್ಷ ಬಿ.ಎಸ್. ವೆಂಕಟರಾಮು, ಮೊ.98447–17665 ಅವರನ್ನು ಸಂಪರ್ಕಿಸಿ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದು ಎಂದು ಅಸೋಸಿಯೇಷನ್ ಪ್ರಕಟಣೆಯಲ್ಲಿ ತಿಳಿಸಿದೆ.

ಪತಿಯಿಂದ ಪತ್ನಿಗೆ ಕಲ್ಲಿನಿಂದ ಹಲ್ಲೆ

ಮೈಸೂರು,ಮೇ 20(ಪಿಎಂ)– ಪತಿಯೇ ಪತ್ನಿಗೆ ಕಲ್ಲಿನಿಂದ ಹಲ್ಲೆ ನಡೆಸಿ ಹತ್ಯೆ ನಡೆಸಲು ಯತ್ನಿಸಿರುವ ಆರೋಪ ಕೇಳಿ ಬಂದಿದೆ.

ಬೋಗಾದಿಯಲ್ಲಿ ಬುಧವಾರ ವೈದ್ಯರೊಬ್ಬರು ತಮ್ಮ ಪತ್ನಿಗೆ ಹಲ್ಲೆ ನಡೆಸಿದ್ದು, ಗಾಯಗೊಂಡಿರುವ ಅವರು ನಗರದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಗಾಯಗೊಂಡಿರುವ ಗೃಹಿಣಿ ಸದ್ಯ ಪೊಲೀಸರಿಗೆ ಹೇಳಿಕೆ ನೀಡುವ ಸ್ಥಿತಿಯಲ್ಲಿ ಇಲ್ಲದ ಕಾರಣ ಹೆಚ್ಚು ಮಾಹಿತಿ ತಿಳಿದುಬಂದಿಲ್ಲ.

ತಲೆಗೆ ಕಲ್ಲಿನಿಂದ ಹೊಡೆದಿದ್ದು, ಇದರಿಂದ ಅವರು ಗಾಯಗೊಂಡಿದ್ದಾರೆ. ಆದರೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಗಾಯಗೊಂಡಿರುವ ನೋವಿನ ಕಾರಣ ಅವರು ಈಗ ಹೇಳಿಕೆ ನೀಡಲು ಸಾಧ್ಯವಿಲ್ಲ ಎಂದಿದ್ದಾರೆ ಎಂದು ಸರಸ್ವತಿಪುರಂ ಪೊಲೀಸರು ತಿಳಿಸಿದ್ದಾರೆ.

ಪಾರ್ಕ್‌ನಲ್ಲಿ ವ್ಯಕ್ತಿ ಮೃತದೇಹ ಪತ್ತೆ; ಆತ್ಮಹತ್ಯೆ ಶಂಕೆ

ಮೈಸೂರು,ಮೇ 20(ಪಿಎಂ)– ಕೆಸಿ ಲೇಔಟ್ ಪಾರ್ಕ್‌ನಲ್ಲಿ ವ್ಯಕ್ತಿಯೊಬ್ಬರ ಮೃತದೇಹ ಬುಧವಾರ ಪತ್ತೆಯಾಗಿದ್ದು, ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ವ್ಯಕ್ತವಾಗಿದೆ.

ಮೂಲತಃ ಚಾಮರಾಜನಗರ ಜಿಲ್ಲೆಯ ಮೈಸೂರು ಜನತಾನಗರದ ನಿವಾಸಿ ಲೋಕೇಶ್ (45) ಪಾರ್ಕ್‌ನಲ್ಲಿ ಶವವಾಗಿ ಪತ್ತೆಯಾದ ವ್ಯಕ್ತಿ.

15 ವರ್ಷಗಳ ಹಿಂದೆ ಮದುವೆಯಾಗಿದ್ದ ಲೋಕೇಶ್ ಪತ್ನಿಯೊಂದಿಗೆ ಕಳೆದ 12 ವರ್ಷಗಳಿಂದ ಮೈಸೂರಿನಲ್ಲಿ ವಾಸವಾಗಿದ್ದರು. ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ಇದೆ. ಮೈಸೂರು ವೈದ್ಯಕೀಯ ಕಾಲೇಜು ಶವಾಗಾರದ ಮೃತದೇಹ ಇರಿಸಲಾಗಿದೆ. ನಾಳೆ ಮರಣೋತ್ತರ ಪರೀಕ್ಷೆ ಬಳಿಕ ಮೃತದೇಹವನ್ನು ಕುಟುಂಬಸ್ಥರಿಗೆ ಒಪ್ಪಿಸಲಾಗುವುದು. ಮೃತ ಲೋಕೇಶ್ ಸಹೋದರ ನೀಡಿದ ದೂರಿನನ್ವಯ ಅಸಹಜ ಸಾವು ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ನಜರ್‌ಬಾದ್ ಠಾಣಾ ಪೊಲೀಸರು ತಿಳಿಸಿದರು.

ಮಾರಾಟವಾಗದೇ ಉಳಿದ ಮದ್ಯ, ಬಿಯರ್ ನಾಶ



ಲಕ್ಷಾಂತರ ರೂ. ಮೌಲ್ಯದ ಮದ್ಯ ಮತ್ತು ಬಿಯರ್ ಅನ್ನು ಹಿರಿಯ ಅಧಿಕಾರಿಗಳು ನಾಶಪಡಿಸುತ್ತಿರುವ ದೃಶ್ಯ

ಮೈಸೂರು, ಮೇ 20(ಎಸ್‌ಪಿಎನ್)– ಮೈಸೂರು ಕೂರ್ಗಳ್ಳಿಯ ಕೆಎಸ್‌ಬಿಸಿಎಲ್–1ರ ಲಿಕ್ಕರ್ ಡಿಪೋದಲ್ಲಿ ಮಾರಾಟವಾಗದೇ ಉಳಿದಿದ್ದ ಲಕ್ಷಾಂತರ ರೂ. ಮೌಲ್ಯದ ಮದ್ಯ ಮತ್ತು ಬಿಯರ್ ಅನ್ನು ಮೈಸೂರು ನಗರ ಅಬಕಾರಿ ಉಪ ಆಯುಕ್ತ ಹೆಚ್.ಕೆ.ರಮೇಶ್, ಸಮಕ್ಷಮದಲ್ಲಿ ಬುಧವಾರ ನಾಶಪಡಿಸಲಾಯಿತು.

ಮೈಸೂರು ಕೂರ್ಗಳ್ಳಿ ಕೆಎಸ್‌ಬಿಸಿಎಲ್–1ರ ಡಿಪೋ ವ್ಯವಸ್ಥಾಪಕರು, ಅಬಕಾರಿ ಅಧಿಕಾರಿ ಮತ್ತು ಸಿಬ್ಬಂದಿಗಳೊಂದಿಗೆ ಕೂರ್ಗಳ್ಳಿ ಡಿಪೋ–1ರಲ್ಲಿ ಮಾರಾಟವಾಗದೇ ಉಳಿದಿದ್ದ ಒಟ್ಟು 135.000 ಲೀ. ಮದ್ಯ ಹಾಗೂ 11893.460 ಲೀ. ಬಿಯರ್ ದಾಸ್ತಾನುಗಳನ್ನು ನಾಶಪಡಿಸಲಾಗಿದೆ ಎಂದು ಉಪ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪರಿಶಿಷ್ಟ ಜಾತಿ, ಪಂಗಡಕ್ಕೆ ನೀಡಿದ್ದ ಮೀಸಲಾತಿಯ ಕಾಂಗ್ರೆಸ್ ಸರ್ಕಾರ ಕಸಿದುಕೊಳ್ಳುತ್ತಿದೆ

● ಮಾಜಿ ಸಚಿವ ಶ್ರೀರಾಮುಲು ಆಕ್ರೋಶ ● ಕೇವಲ ಅಧಿಕಾರಕ್ಕೆ ಎಸ್‌ಸಿ/ಎಸ್‌ಟಿ ಸಮುದಾಯಗಳ ಸಿದ್ದರಾಮಯ್ಯ ಬಳಸಿಕೊಂಡಿದ್ದಾರೆ ● ಒಳ ಮೀಸಲಾತಿ ವಿಷಯದಲ್ಲಿ ಇವರಿಂದ ಗೊಂದಲ ಸೃಷ್ಟಿ



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಬುಧವಾರ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾಜಿ ಸಚಿವ ಶ್ರೀರಾಮುಲು ಮಾತನಾಡಿದರು.

ಮೈಸೂರು, ಮೇ 20(ವಿವಿಹೆಚ್)– ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಎಸ್‌ಸಿ–ಎಸ್ಟಿಗೆ ನೀಡಲಾಗಿದ್ದ ಮೀಸಲಾತಿಯನ್ನು ಇಂದಿನ ಕಾಂಗ್ರೆಸ್ ಸರ್ಕಾರ ಕಸಿದುಕೊಳ್ಳುತ್ತಿದೆ ಎಂದು ಮಾಜಿ ಸಚಿವ ಶ್ರೀರಾಮುಲು ತಿಳಿಸಿದರು.

ನಗರದ ಚಾಮರಾಜಪುರಂನಲ್ಲಿರುವ ಬಿಜೆಪಿ ಕಚೇರಿಯಲ್ಲಿ ಬುಧವಾರ ಜಂಟಿ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ಎಸ್‌ಸಿ–ಎಸ್ಟಿ ಸಮುದಾಯಗಳು ಒಳ ಮೀಸಲಾತಿಗಾಗಿ ಕಳೆದ 30 ವರ್ಷಗಳಿಂದಲೂ ಹೋರಾಟ ಮಾಡಿಕೊಂಡು ಬರುತ್ತಿವೆ. ನ್ಯಾಯಮೂರ್ತಿ ನಾಗಮೋಹನ್ ದಾಸ್ ಆಯೋಗದ ವರದಿಯ ಆಧಾರದ ಮೇಲೆ, ಹಿಂದಿನ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ ದೃಢ ನಿರ್ಧಾರ ಕೈಗೊಂಡು ಪರಿಶಿಷ್ಟ ಜಾತಿ ಮೀಸಲಾತಿಯನ್ನು ಶೇ.15 ರಿಂದ ಶೇ.17ಕ್ಕೆ ಮತ್ತು ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಶೇ.3ರಿಂದ ಶೇ.7ಕ್ಕೆ ಹೆಚ್ಚಿಸಿತ್ತು. ಇದಕ್ಕೆ ಸಿದ್ದರಾಮಯ್ಯ, ಹೆಚ್‌ಡಿಕೆ ಸೇರಿದಂತೆ ಸರ್ವ ಪಕ್ಷಗಳು ಬೆಂಬಲ ಸೂಚಿಸಿದ್ದವು. ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಂವಿಧಾನಕ್ಕೆ ಅನುಗುಣವಾಗಿ ಸಿಗಬೇಕಾದ ಮೀಸಲಾತಿಯನ್ನು ಕಸಿದುಕೊಳ್ಳುವ ಕೆಲಸ ಮಾಡುತ್ತಿದ್ದಾರೆ. ತಮ್ಮ ಅಧಿಕಾರದ ಆಸೆಗೆ ಎಸ್‌ಸಿ–ಎಸ್ಟಿ ಸಮುದಾಯಗಳನ್ನು ಬಳಸಿಕೊಂಡಿದ್ದಾರೆ. ಕಾಂಗ್ರೆಸ್ ಪಕ್ಷಕ್ಕೆ ಎಸ್‌ಸಿ–ಎಸ್‌ಟಿ ಕಂಡರೆ ಹೊಟ್ಟೆಕಿಚ್ಚು, ಅದೊಂದು ನರಿ ಬುದ್ಧಿಯ ಪಕ್ಷ, ಎಲ್ಲವನ್ನು ಹಾಳುಗೆಡವಿ, ಚಾಣಾಕ್ಷತನದಿಂದ ಪರಾರಿಯಾಗುತ್ತಿದ್ದಾರೆ ಎಂದು ಕಿಡಿಕಾರಿದರು.

ಗೊಂದಲದಲ್ಲಿ ರಾಜ್ಯ ಸರ್ಕಾರ: ಒಳ ಮೀಸಲಾತಿ ಸಂಬಂಧ ಸರ್ಕಾರ ಬೆಳಗಾವಿ ಅಧಿವೇಶನದಲ್ಲಿ 6–6–5 ಮಾದರಿಯ ವರ್ಗೀಕರಣದ ಮಸೂದೆ ಅಂಗೀಕರಿಸಿ, ಡಿಸೆಂಬರ್ 2025ರಲ್ಲಿ ಗೆಜೆಟ್ ನೋಟಿಫಿಕೇಷನ್ ಹೊರಡಿಸಲಾಯಿತು. ತದನಂತರ ರಾಜ್ಯಪಾಲರ ಬಳಿ ಹೋಗಿ ಶೇ.17ರ ವರ್ಗೀಕರಣಕ್ಕೆ ಸಹಿ ಮಾಡಿಸಿಕೊಂಡು ಬಂದಿತು. ಆದರೆ, ಅದೇ ದಿನ ಸಂಜೆ ಸಚಿವ ಸಂಪುಟ ಸಭೆ ಕರೆದು ಸುಪ್ರೀಂಕೋರ್ಟ್ ಮಿತಿಯಾದ ಶೇ.50ರ ಒಳಗಡೆಯೇ ಮೀಸಲಾತಿ ನಿರ್ವಹಿಸುತ್ತೇವೆ ಎಂದು ಉಲ್ಟಾ ಹೊಡೆಯಿತು. ರಾಜಭವನಕ್ಕೆ ಒಂದು ಮಾಹಿತಿ ನೀಡಿ, ಕ್ಯಾಬಿನೆಟ್‌ನಲ್ಲಿ ಮತ್ತೊಂದು ತೀರ್ಮಾನ ಮಾಡುವ ಮೂಲಕ ಹಿಂದುಳಿದ ಸಮುದಾಯಗಳಿಗೆ ದ್ರೋಹ ಬಗೆಯುವ ಕೆಲಸ ಮಾಡಿದೆ ಎಂದರು.

ನಾಲ್ವರು ವಿದ್ಯಾರ್ಥಿಗಳ ಸಾವಿಗೆ ಸರ್ಕಾರವೇ ಹೊಣೆ: ಒಳಮೀಸಲಾತಿ ಸಂಬಂಧ ರಾಯಚೂರಿನ ವ್ಯಕ್ತಿಯೊಬ್ಬರು ಕೋರ್ಟ್ ಮೆಟ್ಟಿಲೇರಿದ್ದರು. ಈ ಸಂಬಂಧ ಸರ್ಕಾರದ ಪರ ವಕೀಲರು ಸಮರ್ಪಕವಾಗಿ ವಾದ ಮಂಡಿಸದ ಕಾರಣ ಹೈ ಕೋರ್ಟ್ ತಾತ್ಕಾಲಿಕ ತಡೆಯಾಜ್ಞೆ ನೀಡಿದೆ. ಇದರಿಂದಾಗಿ ಸರ್ಕಾರ ಎಸ್ಟಿ ಮೀಸಲಾತಿಯನ್ನು ರಾತ್ರೋರಾತ್ರಿ ಶೇ.7 ರಿಂದ ಶೇ.3ಕ್ಕೆ ಇಳಿಕೆ ಮಾಡುವುದಾಗಿ ಗೊಂದಲದ ಆದೇಶ ಹೊರಡಿಸಿದೆ. ಇದು ವಿವಿಧ ಕೋರ್ಸ್‌ಗಳಿಗೆ ಪ್ರವೇಶ ಪಡೆದಿದ್ದ ಸಮುದಾಯದ ಬಡ ವಿದ್ಯಾರ್ಥಿಗಳ ಭವಿಷ್ಯವನ್ನು ಕತ್ತಲಿಗೆ ನೂಕಿದಂತಾಗಿದೆ ಎಂದು ಆಕ್ರೋಶ ಹೊರಹಾಕಿದರು.

ಸದಾ ಸಾಮಾಜಿಕ ನ್ಯಾಯ ಜಪಿಸುವ ಸಿದ್ದರಾಮಯ್ಯರಿಂದಲೇ ಅನ್ಯಾಯ

ಮೈಸೂರು: ಮಾಜಿ ಸಚಿವ ಸಿಟಿ ರವಿ ಮಾತನಾಡಿ, ಸಾಮಾಜಿಕ ನ್ಯಾಯದ ಬಗ್ಗೆ ಅತೀ ಹೆಚ್ಚು ಮಾತನಾಡುವ ಸಿದ್ದರಾಮಯ್ಯ ಅವರು ಜನಸಂಖ್ಯೆ ಆಧಾರದ ಮೇಲೆ ಮೀಸಲಾತಿ ಹೆಚ್ಚಿಸುವುದನ್ನು ಬಿಟ್ಟು, ಎಸ್‌ಸಿ–ಎಸ್‌ಟಿ ಮೀಸಲಾತಿಯನ್ನು ಕಡಿತಗೊಳಿಸಲು ಹೊರಟಿರುವುದು ಸಾಮಾಜಿಕ ಅನ್ಯಾಯ ಎಂದು ಕಿಡಿಕಾರಿದರು.

ಸುಪ್ರೀಂ ಕೋರ್ಟ್‌ನ ಶೇ.50ರ ಮಿತಿ ನೆಪ ಒಡ್ಡುವ ಸರ್ಕಾರ, ಮುಸ್ಲಿಂ ಜನಾಂಗವನ್ನು ಜಾತಿ ಅಥವಾ ಧರ್ಮ ಎಂದು ಪರಿಗಣಿಸಿ ಮೀಸಲಾತಿ ನೀಡುತ್ತಿದ್ದರಾ? ಶೇ.50ರ ಒಳಗೆ ಮೀಸಲಾತಿ ತರಬೇಕಿದ್ದರೆ ಸಂವಿಧಾನ ಬಾಹಿರವಾಗಿ ನೀಡಿರುವ ಮೀಸಲಾತಿಯನ್ನು, ರಾಜಕೀಯ ಓಲೈಕೆ, ಮತಬ್ಯಾಂಕ್ ಆಧಾರಿತ ಮೀಸಲಾತಿಯನ್ನು ಕಡಿತಗೊಳಿಸಬೇಕಿತ್ತೇ ವಿನಃ ಎಸ್‌ಸಿ–ಎಸ್‌ಟಿ ಸಮುದಾಯದ್ದಲ್ಲ. ಹಿಂದುಳಿದ ವರ್ಗಗಳ ಮೀಸಲಾತಿಯಲ್ಲಿ ಯಾವುದೇ ಬದಲಾವಣೆ ಮಾಡದ ಸರ್ಕಾರ ಎಸ್‌ಸಿ–ಎಸ್ಟಿ ವಿಚಾರವಾಗಿ ಮಾತ್ರ ಯಾಕೀ ಧೋರಣೆ ಮಾಡುತ್ತಿದೆ. ಈ ಸಮುದಾಯಕ್ಕೆ ಸಿಗಬೇಕಾದ ಹಕ್ಕನ್ನು ಸರ್ಕಾರ ತಕ್ಷಣ ನೀಡಬೇಕು ಎಂದು ಆಗ್ರಹಿಸಿದರು.

ಕಾಂಗ್ರೆಸ್‌ಗೆ ಸ್ಥಳೀಯ ಚುನಾವಣೆಯ ಸೋಲಿನ ಭಯ: ನೆನ್ನೆಯಷ್ಟೇ ಸಾಧನಾ ಸಮಾವೇಶ ಮಾಡಿ ಸವಾಲು ಸ್ವೀಕರಿಸಲು ಸಿದ್ಧ ಎಂದು ಭಾಷಣ ಬಿಗಿದ ಸಿದ್ದರಾಮಯ್ಯ, ಈಗ ಉತ್ತರನ ಪೌರುಷ ಕೋರ್ಟ್ ಮುಂದೆ ಎಂಬಂತೆ ಜಿಬಿಎ ಚುನಾವಣೆ ಮುಂದೂಡಲು ಕೋರ್ಟ್ ಮೊರೆ ಹೋಗಿರುವುದೇಕೆ ಎಂದು ಲೇವಡಿ ಮಾಡಿದರು.

ಕಾಂಗ್ರೆಸ್‌ಗೆ ಜನರ ಮೇಲೆ ವಿಶ್ವಾಸವಿದ್ದರೆ ಜಿಪಂ, ತಾಪಂ, ನಗರಸಭೆ, ಪುರಸಭೆ ಚುನಾವಣೆಗಳನ್ನು ನಡೆಸಿ ತೋರಿಸಲಿ. ಚುನಾವಣೆ ನಡೆಸಲು ಹಿಂಜರಿಯುತ್ತಿರುವುದನ್ನು ನೋಡಿದರೆ ಅವರಿಗೆ ಸೋಲಿನ ಭಯ ಕಾಡುತ್ತಿದೆ ಎಂದು ಕುಟುಕಿದರು.

ಮೋದಿ ವಿದೇಶಿ ಪ್ರವಾಸ ಸಮರ್ಥನೆ: ಇಂಧನ ಮಿತವ್ಯಯ ಮಾಡಿ, ವಿದೇಶಿ ಪ್ರವಾಸ ಬಂದ್ ಮಾಡಿ ಎಂದು ಕರೆಕೊಟ್ಟಿದ್ದ ಮೋದಿ ಅವರೇ ವಿದೇಶ ಪ್ರವಾಸದಲ್ಲಿದ್ದಾರೆ ಎಂದು ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಅವರು, ಯುದ್ಧವನ್ನು ಭಾರತ ಬಯಸಿದ್ದಲ್ಲ, ಆದರೆ ಅದರ ಜಾಗತಿಕ ಪರಿಣಾಮ ನಮ್ಮ ಮೇಲಾಗಿದೆ. ಆರೋಗ್ಯ ಕಾಪಾಡಿಕೊಳ್ಳಲು ವೈದ್ಯರು ಪಥ್ಯ ಹೇಳುವಂತೆ, ದೇಶದ ಆರ್ಥಿಕ ಹಿತದೃಷ್ಟಿಯಿಂದ 1990–91 ರಲ್ಲಾದ ಆರ್ಥಿಕ ಸಂಕಷ್ಟದಂತೆ ಚಿನ್ನ ಅಡವಿಡುವ ಪರಿಸ್ಥಿತಿ ದೇಶಕ್ಕೆ ಬರಬಾರದು ಎಂದು ದುಂದುವೆಚ್ಚ ಹಾಗೂ ಚಿನ್ನದ ಖರೀದಿ ಬೇಡ ಎಂದು ಮೋದಿ ಕರೆ ನೀಡಿದ್ದಾರೆ.

ಇನ್ನು ಮೋಜು–ಮಸ್ತಿಗಾಗಿ ಪ್ರಧಾನಿ ಅವರು ವಿದೇಶಕ್ಕೆ ಹೋಗುತ್ತಿಲ್ಲ. ದೇಶದ ಹಿತದೃಷ್ಟಿಯಿಂದ ಪ್ರಮುಖ ಒಪ್ಪಂದಗಳನ್ನು ಮಾಡಿಕೊಳ್ಳಲು ಹೋಗುತ್ತಿದ್ದಾರೆ. 3 ದಿನ ಕ್ಯಾಂಪೇನ್ ಮಾಡಿ 30 ದಿನ ಕಾಣೆಯಾಗುತ್ತಿದ್ದಾರಲ್ಲ ಅವರಿಗೆ ಹೇಳಿ ಎಂದು ತಿರುಗೇಟು ನೀಡಿದರು.

ಪ್ರಧಾನಿ ಮೋದಿ ವಿದೇಶಿ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ವಿಚಾರಕ್ಕೆ ಸಂಬಂಧಿಸಿದಂತೆ, ಪತ್ರಕರ್ತರಿಗೆ ಪ್ರಶ್ನೆ ಕೇಳುವ ಹಕ್ಕಿದೆ, ಆದರೆ ಕೇಳಿದ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಬೇಕು ಎಂಬ ನಿಯಮವಿಲ್ಲ. ಮೋದಿಯವರು ಒಬ್ಬ ಅತ್ಯುತ್ತಮ ಕಮ್ಯುನಿಕೇಟರ್. ಅವರಿಗೆ ಯಾವಾಗ, ಏನು ಮಾತನಾಡಬೇಕು ಎಂಬುದು ಚೆನ್ನಾಗಿ ಗೊತ್ತಿದೆ. 'ಮನ್ ಕಿ ಬಾತ್' ಮೂಲಕ ಅವರು ದೇಶದ ಜನರ ಹೃದಯಕ್ಕೆ ಹತ್ತಿರವಾಗಿದ್ದಾರೆ. ಪತ್ರಕರ್ತರು ಕೇಳಿದ ಪ್ರತಿಯೊಂದು ಪ್ರಶ್ನೆಗೂ ಪ್ರಧಾನಿಯವರು ಉತ್ತರ ಕೊಡಲೇಬೇಕು ಎಂಬ ನಿಯಮವೇನೂ ಇಲ್ಲ ಎಂದು ಸಮರ್ಥಿಸಿಕೊಂಡರು.

ಒಂದೇ ಒಂದು ಪತ್ರಿಕಾಗೋಷ್ಠಿ ಎದುರಿಸಲು ಪ್ರಧಾನಿಗೆ ತಾಕತ್ತಿಲ್ಲ ಎಂದು ಕಾಂಗ್ರೆಸ್ ಲೇವಡಿ ಮಾಡಿದ್ದಾರೆ ಎಂಬ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿ, ಪ್ರಜಾಪ್ರಭುತ್ವದಲ್ಲಿ ತಾಕತ್ತಿನ ಪ್ರಶ್ನೆ ರುಜುವಾತಾಗುವುದು ಸುದ್ದಿಗೋಷ್ಠಿಗಳಲ್ಲಲ್ಲ, ಚುನಾವಣಾ ಕಣದಲ್ಲಿ. ದೇಶದ ಜನತೆ ಮೋದಿಯವರ ನಾಯಕತ್ವದ ಮೇಲೆ ವಿಶ್ವಾಸವಿಟ್ಟು ಒಂದೊಂದೇ ರಾಜ್ಯಗಳನ್ನು ಬಿಜೆಪಿಯ ತೆಕ್ಕೆಗೆ ನೀಡುತ್ತಿದ್ದಾರೆ. ಯಾರಿಗೆ ತಾಕತ್ತಿದೆ ಎಂಬುದನ್ನು ಜನರೇ ಚುನಾವಣೆಯ ಮೂಲಕ ಈಗಾಗಲೇ ತೋರಿಸಿಕೊಟ್ಟಿದ್ದಾರೆ ಎಂದು ತಿರುಗೇಟು ನೀಡಿದರು.


ರಾಜ್ಯ ಸರ್ಕಾರದ ದ್ವಂದ್ವ ನಿಲುವಿನಿಂದ ಬೇಸತ್ತ ನಾಲ್ವರು ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ವಿದ್ಯಾರ್ಥಿಗಳ ಭವಿಷ್ಯದೊಂದಿಗೆ ಚೆಲ್ಲಾಟವಾಡುತ್ತಿರುವ ಸರ್ಕಾರವೇ ಈ ಎಲ್ಲಾ ಸಾವುಗಳಿಗೆ ನೇರ ಹೊಣೆ ಎಂದು ದೂರಿದರು.

ತಮಿಳುನಾಡಿನ ಮಾದರಿಯಲ್ಲಿ ಮೀಸಲಾತಿಯನ್ನು ಸಂವಿಧಾನದ 9ನೇ ಶೆಡ್ಯೂಲ್‌ಗೆ ಸೇರಿಸಬೇಕು ಎಂದು ಹೇಳುತ್ತಾ ಕಾಂಗ್ರೆಸ್ ನಾಯಕರು ಜನರನ್ನು ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಸ್ವಯಂ ಘೋಷಿತ ಹಿಂದುಳಿದ ವರ್ಗಗಳ ಚಾಂಪಿಯನ್ ಸಿದ್ದರಾಮಯ್ಯ ಅವರಿಗೆ ಹಿಂದುಳಿದ ಸಮುದಾಯಗಳ ಮೇಲೆ ಪ್ರೀತಿ ಇಲ್ಲ. ನಮ್ಮ ಪಕ್ಷ ಮೀಸಲಾತಿ ಹೆಚ್ಚಳ ಮಾಡಿದ್ದನ್ನು ಸಹಿಸದ ಸಿಎಂ, ಹಲವಾರು ಉಪಜಾತಿಗಳನ್ನು ಸೇರಿಸಿ, ನಾವು ನೀಡಿದ್ದ ಮೀಸಲಾತಿಯನ್ನು ಹಾಳು ಮಾಡಿದ್ದಾರೆ. ಅವರಿಗೆ ಎಸ್‌ಸಿ–ಎಸ್ಟಿ ಮೇಲೆ ನಿಜವಾದ ಕಳಕಳಿ ಇದ್ದರೆ, ಹೈಕೋರ್ಟ್‌ನಲ್ಲಿರುವ ತಾತ್ಕಾಲಿಕ ತಡೆಯಾಜ್ಞೆಯನ್ನು ತೆರವುಗೊಳಿಸುವ ಕೆಲಸ ಮಾಡಲಿ ಎಂದು ಸವಾಲು ಹಾಕಿದರು.

ಮೀಸಲಾತಿಯಂತಹ ಗಂಭೀರ ಪ್ರಕರಣ ಬಗೆಹರಿಸಲು ಬಿಜೆಪಿಯ ಉನ್ನತಮಟ್ಟದ ನಿಯೋಗ ಸಿಎಂ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಲಿದೆ ಒಂದು ವೇಳೆ ಬಗೆಹರಿಸದೇ ಹೋದಲ್ಲಿ, ಮುಂಬರುವ ಚುನಾವಣೆಯಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರಲಿದ್ದು, ಎಸ್‌ಸಿ–ಎಸ್ಟಿಗೆ ಸಿಗಬೇಕಾದ ಮೀಸಲಾತಿಯ ಹಕ್ಕನ್ನು ಯಥಾವತ್ತಾಗಿ ಜಾರಿ ಮಾಡುತ್ತೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಸಚಿವ ಎನ್.ಮಹೇಶ್, ಶಾಸಕ ಟಿ.ಎಸ್.ಶ್ರೀವತ್ಸ, ಬಿಜೆಪಿ ನಗರಾಧ್ಯಕ್ಷ ಹಾಗೂ ಮಾಜಿ ಶಾಸಕ ಎಲ್.ನಾಗೇಂದ್ರ ಮಾಜಿ ಶಾಸಕ ಹರ್ಷವರ್ಧನ್, ಮಾಜಿ ಎಂಎಲ್‌ಸಿ ಸಿದ್ದರಾಜು, ಮೈಸೂರು ಗ್ರಾಮಾಂತರ ಬಿಜೆಪಿ ಜಿಲ್ಲಾಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ, ಮಾಜಿ ಮೇಯರ್‌ಗಳಾದ ಸಂದೇಶ್ ಸ್ವಾಮಿ, ಶಿವಕುಮಾರ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಮೈಸೂರಿನ 'ಜಿಆರ್‌ಎಸ್ ಅಪ್‌ಡೌನ್'ಗೆ 'ಟ್ರಾವೆಲರ್ಸ್ ಚಾಯ್ಸ್ ಅವಾರ್ಡ್-2026'



ಜಿಆರ್‌ಎಸ್ ಅಪ್‌ಡೌನ್‌ಗೆ ಸಂದಿರುವ 'ಟ್ರಾವೆಲರ್ಸ್ ಚಾಯ್ಸ್ ಅವಾರ್ಡ್-2026' ಪ್ರಶಸ್ತಿಯನ್ನು ಬಾಳಿಗ ಇನ್ವೆಸ್ಟ್‌ಮೆಂಟ್ಸ್ ನಿರ್ದೇಶಕ ಯೋಗೇಶ್ ಡಾಂಗೆ ತಮ್ಮ ತಂಡಕ್ಕೆ ಹಸ್ತಾಂತರಿಸಿದರು.

ಮೈಸೂರು, ಮೇ 20-ದೇಶದ ಮೊದಲ ತಲೆಕೆಳಗಿನ ಛಾಯಾಗ್ರಹಣ ಆಕರ್ಷಣೆಯಾಗಿರುವ ಮೈಸೂರಿನ ಜಿಆರ್‌ಎಸ್ ಅಪ್‌ಡೌನ್ ವ್ಯವಸ್ಥೆಯು ಜಾಗತಿಕ ಮಟ್ಟದಲ್ಲಿ ಟ್ರಿಪ್‌ಅಡ್ವೈಸರ್‌ನ ಟಾಪ್ 10 ಪ್ರತಿಶತ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದು, 'ಟ್ರಾವೆಲರ್ಸ್ ಚಾಯ್ಸ್ ಅವಾರ್ಡ್-2026' ಪ್ರಶಸ್ತಿಗೆ ಭಾಜನವಾಗಿದೆ.

ಟ್ರಿಪ್‌ಅಡ್ವೈಸರ್‌ನಲ್ಲಿ 12 ತಿಂಗಳ ಅವಧಿಯಲ್ಲಿ ಸಂಗ್ರಹಿಸಿದ ಪ್ರವಾಸಿಗರ ವಿಮರ್ಶೆಗಳು, ರೇಟಿಂಗ್‌ಗಳ ಆಧಾರದ ಮೇಲೆ ಪ್ರಶಸ್ತಿ ನಿರ್ಧರಿಸಲಾಗಿದ್ದು, ಜಿಆರ್‌ಎಸ್ ಅಪ್‌ಡೌನ್ 4.8 ರೇಟಿಂಗ್ ಹೊಂದಿದೆ. 2020ರಿಂದ ಈವರೆಗೆ ಭೇಟಿ ನೀಡಿ, ಉತ್ತಮ ಅಭಿಪ್ರಾಯ ನೀಡಿರುವ ಲಕ್ಷಾಂತರ ಗ್ರಾಹಕರೇ ಈ ಹೆಗ್ಗಳಿಕೆಗೆ ಕಾರಣ ಎಂದು ಜಿಆರ್‌ಎಸ್ ಅಪ್‌ಡೌನ್ ನಿರ್ವಹಣಾ ಸಂಸ್ಥೆ ಬಾಳಿಗ ಇನ್ವೆಸ್ಟ್‌ಮೆಂಟ್ಸ್ ನಿರ್ದೇಶಕ ಯೋಗೇಶ್ ಡಾಂಗೆ ತಿಳಿಸಿದ್ದಾರೆ.

ದೇಶದ ಮೊದಲ ತಲೆಕೆಳಗಿನ ಛಾಯಾಗ್ರಹಣ ಆಕರ್ಷಣೆಯಾಗಿರುವ ಜಿಆರ್‌ಎಸ್ ಅಪ್‌ಡೌನ್‌ನಲ್ಲಿ ಕಿಚನ್, ಲಿವಿಂಗ್ ರೂಮ್, ಡೈನಿಂಗ್ ಹಾಲ್, ಕಚೇರಿ ವಿನ್ಯಾಸ ಸೇರಿದಂತೆ 12 ಥೀಮ್ ಆಧಾರಿತ ಕೊಠಡಿಗಳಿವೆ. ವಿನ್ಟೇಜ್ ಕಾರು, ಸ್ಕೂಟರ್ ಮಾದರಿಗಳನ್ನೂ ಅಳವಡಿಸಲಾಗಿದೆ. ಟಿಕೆಟ್‌ಗಳು grs.fun ನಲ್ಲಿ ಲಭ್ಯವಿವೆ. 2023ರಲ್ಲಿ ಭಾರತದ ಮನರಂಜನಾ ಉದ್ಯಮದ ರಾಷ್ಟ್ರೀಯ ಸಂಸ್ಥೆಯೊಂದರ 'ಮೋಸ್ಟ್ ಇನ್ನೋವೇಟಿವ್ ಅಟ್ರ್ಯಾಕ್ಷನ್' ಪ್ರಶಸ್ತಿಯೂ ಸಂದಿದೆ ಎಂದು ವಿವರಿಸಿದ್ದಾರೆ.

ಯೋಗೇಶ್ ಡಾಂಗೆ ಅವರು ಪ್ರಶಸ್ತಿ ಫಲಕವನ್ನು ಅನಾವರಣಗೊಳಿಸಿ, ತಮ್ಮ ತಂಡಕ್ಕೆ ಹಸ್ತಾಂತರಿಸಿದರು. ಈ ವೇಳೆ ಸಹಾಯಕ ವ್ಯವಸ್ಥಾಪಕ ಶ್ರೀಕಾಂತ್, ಆದಾಯ ಕಾರ್ಯಾಚರಣೆ ಸಹಾಯಕ ವ್ಯವಸ್ಥಾಪಕ ಸುನಿಲ್, ಜನರಲ್ ಮ್ಯಾನೇಜರ್ ಕೆ.ಟಿ.ಶ್ರೀನಿವಾಸ್, ಮಾರ್ಕೆಟಿಂಗ್ ಮುಖ್ಯಸ್ಥೆ ಪ್ರಿಯಾಂಕಾ, ಸಹಾಯಕ ವ್ಯವಸ್ಥಾಪಕರಾದ ಎ.ವೀಣಾ, ಅರ್ಜುನ್, ಬ್ರ್ಯಾಂಡ್ ಮ್ಯಾನೇಜರ್‌ಗಳಾದ ಮಧುಸೂದನ್, ಕಾವ್ಯಾ,ಪಾರ್ಕ್ ಮುಖ್ಯಸ್ಥ ಶಿವಲಿಂಗೇಗೌಡ, ಕಾರ್ಯಾಚರಣೆ ಮುಖ್ಯಸ್ಥ ಬಿಕೆ, ಅಪ್‌ಡೌನ್ ಸೂಪರ್‌ವೈಸರ್ ಗೀತಾ, ಎಕ್ಸಿಕ್ಯೂಟಿವ್‌ಗಳಾದ ಮೇಘನಾ, ಶಿಲ್ಪಾ, ಸಿಬ್ಬಂದಿ ವರ್ಷಿತಾ, ಚಂದನಾ, ಭವ್ಯ ಹಾಜರಿದ್ದರು.

ಚಿನ್ನತಂಬಿ ಬಹುಕೋಟಿ ಚಿನ್ನಾಭರಣ ವಂಚನೆ ಪ್ರಕರಣ

ಮೈಸೂರು ಸಿಸಿಬಿಯಲ್ಲಿ ನಾಲ್ಕೇ ದಿನಗಳಲ್ಲಿ 200ಕ್ಕೂ ಹೆಚ್ಚು ದೂರುಗಳು ದಾಖಲು

- ಹಗರಣ ರಾಜ್ಯದಾದ್ಯಂತ ವ್ಯಾಪಿಸಿದ್ದು, ದೂರುಗಳ ಸುರಿಮಳೆ
- ಕರ್ನಾಟಕ ಹೂಡಿಕೆದಾರರ ಸಂರಕ್ಷಣಾ ಕಾಯ್ದೆಯಡಿ ಪ್ರಕರಣ ದಾಖಲು

ಮೈಸೂರು, ಮೇ 20(ಜಿಎ)-ಬಹುಕೋಟಿ ಚಿನ್ನಾಭರಣ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮೈಸೂರು ನಗರ ಅಪರಾಧ ವಿಭಾಗ (ಸಿಸಿಬಿ)ಯಲ್ಲಿ ಕೇವಲ 4 ದಿನಗಳಲ್ಲಿ 200ಕ್ಕೂ ಹೆಚ್ಚು ದೂರುಗಳು ಬಂದಿವೆ.

ಸೌಂದರ್‌ರಾಜ್ ಅಲಿಯಾಸ್ ಚಿನ್ನತಂಬಿ ಹಾಗೂ ಆತನಿಗೆ ಸಂಬಂಧಿಸಿದ ಎಸ್‌ಡಿಜೆ ಗೋಲ್ಡ್ ಕಂಪನಿ, ಡಿಜಿಎಫ್ ಗೋಲ್ಡ್ ಅಂಡ್ ಡೈಮಂಡ್ಸ್ ಹಾಗೂ ಧನ ಗಣಪತಿ ಫೈನಾನ್ಸ್ ಸಂಸ್ಥೆಗಳ ವಿರುದ್ಧ ಈ ದೂರುಗಳು ದಾಖಲಾಗಿದ್ದು, ಭಾರೀ ವಂಚನೆಗೆ ಸಾಕ್ಷಿಯಾಗಿದೆ.

ಮೇ 16ರಂದು ಮೈಸೂರು ನಗರ ಪೊಲೀಸರು ಸಾರ್ವಜನಿಕರಿಗೆ ಪ್ರಕಟಣೆ ನೀಡಿ, ತನಿಖೆಗೆ ಸಹಕಾರ ನೀಡಲು ಸಂಬಂಧಿತ ದಾಖಲೆಗಳೊಂದಿಗೆ ಸಿಸಿಬಿ ಕಚೇರಿಯನ್ನು ಸಂಪರ್ಕಿಸುವಂತೆ ಮನವಿ ಮಾಡಿದ್ದರು.

ಧನ ಗಣಪತಿ ಫೈನಾನ್ಸ್ ಸಂಸ್ಥೆಯ ಮಾಲೀಕ ಸೌಂದರ್‌ರಾಜ್ ವಿರುದ್ಧ ಗ್ರಾಹಕರಿಗೆ ಚಿನ್ನಾಭರಣಗಳನ್ನು ಹೆಚ್ಚಿನ ಬೆಲೆಗೆ ಖರೀದಿಸುವುದಾಗಿ ಹಾಗೂ ಕಡಿಮೆ ಬಡ್ಡಿದರದಲ್ಲಿ ಸಾಲ ನೀಡುವುದಾಗಿ ನಂಬಿಸಿ ವಂಚನೆ ಮಾಡಿದ ಆರೋಪ ಕೇಳಿಬಂದಿದೆ. ಆರೋಪಿ ಅಡವಿಟ್ಟಿರುವ ಚಿನ್ನಾಭರಣಗಳನ್ನು ಗ್ರಾಹಕರ ಅನುಮತಿ ಇಲ್ಲದೆ ಕರಗಿಸಿ, ಅದರ ಮೌಲ್ಯವನ್ನು ಪಾವತಿಸದೆ ವೈಯಕ್ತಿಕ ಲಾಭಕ್ಕಾಗಿ ದುರುಪಯೋಗ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೈಸೂರು ನಗರ ಪೊಲೀಸ್ ಆಯುಕ್ತರ ಕಚೇರಿ ಎದುರು ವಂಚನೆಗೊಳಗಾದವರು ಪ್ರತಿಭಟನೆ ನಡೆಸಿದ ಹಿನ್ನೆಲೆಯಲ್ಲಿ ನಂತರ ಸಿಸಿಬಿ ಅಧಿಕಾರಿಗಳು ಆರೋಪಿಗಳ ವಿರುದ್ಧ ಕ್ರಮ ಕೈಗೊಂಡಿದ್ದರು. ದಾವಣಗೆರೆ ಮೂಲದ ಹೆಚ್.ಮಹಾಂತೇಶ್ ನೀಡಿದ ದೂರಿನ ಆಧಾರದ ಮೇಲೆ ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ಸೌಂದರ್‌ರಾಜ್ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು. ಏ.29ರಂದು ಸಿಸಿಬಿ ಅಧಿಕಾರಿಗಳು ಆರೋಪಿಯನ್ನು ಬಂಧಿಸಿದ್ದರು. ಈ ಪ್ರಕರಣವನ್ನು ಭಾರತೀಯ ನ್ಯಾಯಸಂಹಿತೆಯ ವಿವಿಧ ಕಲಂಗಳಡಿ, ವಂಚನೆ ಹಾಗೂ



ಮೈಸೂರು ನಗರ ಪೊಲೀಸ್ ಆಯುಕ್ತರು ಇತ್ತೀಚೆಗೆ ಅಧಿಕೃತ ಫೇಸ್‌ಬುಕ್ ಪುಟದಲ್ಲಿ ಜಾಗೃತಿ ಪೋಸ್ಟರ್‌ಗಳನ್ನು ಬಿಡುಗಡೆ ಮಾಡಿದ್ದಾರೆ.

ನಂಬಿಕೆ ದ್ರೋಹ ಆರೋಪಗಳೊಂದಿಗೆ ದಾಖಲಿಸಲಾಗಿದೆ ಪ್ರಸ್ತುತ ಆರೋಪಿ ನ್ಯಾಯಾಂಗ ಬಂಧನದಲ್ಲಿದ್ದಾನೆ.

'ಮೈಸೂರು ಮಿತ್ರ'ನೊಂದಿಗೆ ಸಿಸಿಬಿ ಸಹಾಯಕ ಪೊಲೀಸ್ ಆಯುಕ್ತ (ಎಸಿಪಿ) ಮೊಹಮ್ಮದ್ ಶರೀಫ್ ರಾವುತ್ತರ್ ಮಾತನಾಡಿ, ಮೇ 16ರಿಂದ ಸಿಸಿಬಿ ಕಚೇರಿಗೆ ಮೈಸೂರು ಮಾತ್ರವಲ್ಲದೆ ರಾಜ್ಯದ ವಿವಿಧ ಭಾಗಗಳಿಂದ ದೂರುಗಳು ಬರುತ್ತಿವೆ. ಹಣಕಾಸು ವಂಚನೆಯ ಪ್ರಮಾಣ ದೊಡ್ಡದಿರುವುದರಿಂದ ಕರ್ನಾಟಕ ಹೂಡಿಕೆದಾರರ ಹಿತಾಸಕ್ತಿ ಸಂರಕ್ಷಣಾ ಕಾಯ್ದೆ ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ ಎಂದರು.

ಆರಂಭದಲ್ಲಿ ಮೈಸೂರಿನಲ್ಲಿ ಮಾತ್ರ ದೂರುಗಳು ಬಂದಿದ್ದರೂ ಈಗ ರಾಜ್ಯದ ವಿವಿಧ ಜಿಲ್ಲೆಗಳಿಂದಲೂ ಜನರು ಮುಂದೆ ಬರುತ್ತಿದ್ದಾರೆ. ದೂರುಗಳ ಸಂಖ್ಯೆ ಹಾಗೂ ಹಣಕಾಸು ವ್ಯವಹಾರಗಳ ಹಾದಿ ದೊಡ್ಡದಿರುವುದರಿಂದ ಸಮಗ್ರ ತನಿಖೆಗೆ ಇನ್ನೂ ಐದಾರು ತಿಂಗಳುಗಳು ಬೇಕಾಗಬಹುದು ಎಂದರು.

ಸಾರ್ವಜನಿಕರು ಮತ್ತೆ ವಂಚನೆಗೆ ಒಳಗಾಗದಂತೆ ಎಚ್ಚರಿಕೆ ನೀಡಲು ಮೈಸೂರು ನಗರ ಪೊಲೀಸ್ ಆಯುಕ್ತರು ಇತ್ತೀಚೆಗೆ ಅಧಿಕೃತ ಫೇಸ್‌ಬುಕ್ ಪುಟದಲ್ಲಿ ಜಾಗೃತಿ ವೀಡಿಯೊ ಹಾಗೂ ಪೋಸ್ಟರ್‌ಗಳನ್ನು ಬಿಡುಗಡೆ ಮಾಡಿದ್ದಾರೆ. ಆರೋಪಿಗಳು ನಡೆಸುತ್ತಿದ್ದ ಅಂಗಡಿಗಳ ವಿವರಗಳನ್ನು ನೀಡಿರುವ ಪೊಲೀಸರು, ಆ ಸಂಸ್ಥೆಗಳೊಂದಿಗೆ ಯಾವುದೇ ಹಣಕಾಸು ಅಥವಾ ವ್ಯಾಪಾರ ವ್ಯವಹಾರ ನಡೆಸಬಾರದು ಎಂದು ಸಾರ್ವಜನಿಕರಿಗೆ ಎಚ್ಚರಿಕೆ ನೀಡಿದ್ದಾರೆ.

ಇಂದು ಯುಗಪುರುಷ ಶ್ರೀವಿದ್ಯಾರಣ್ಯರ ಜಯಂತಿ

ಮೈಸೂರು: ಶ್ರೀ ವಿದ್ಯಾರಣ್ಯ ಟ್ರಸ್ಟ್ ವತಿಯಿಂದ ಯುಗಪುರುಷ ಶ್ರೀವಿದ್ಯಾರಣ್ಯರ ಜಯಂತಿಯನ್ನು ಮೇ 21ರಂದು ಸಂಜೆ 5:30ಕ್ಕೆ ವಿದ್ಯಾರಣ್ಯ ಕೋಚಿಂಗ್ ಸೆಂಟರ್ ಆವರಣದಲ್ಲಿ ಶ್ರೀವಿದ್ಯಾರಣ್ಯರ ಜಯಂತಿ ಹಮ್ಮಿಕೊಳ್ಳಲಾಗಿದೆ. ಮುಖ್ಯ ಅತಿಥಿಗಳಾಗಿ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮೈಸೂರು ನಗರ-ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಹಿರಿಯ ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ, ವಿಪ್ರ ಮುಖಂಡ ಎನ್.ಎಂ.ನವೀನ್‌ಕುಮಾರ್ ಇನ್ನಿತರರು ಭಾಗವಹಿಸಲಿದ್ದಾರೆ.



ಮೈಸೂರು ತಾಲೂಕು ವರಕೋಡು ಬೀರೇಶ್ವರಸ್ವಾಮಿ ದೇವಾಲಯದ ಬಸಪ್ಪ ದೇವರ ಲಿಂಗೈಕ್ಯದ 9ನೇ ದಿನದ ಪುಣ್ಯ ಸ್ಮರಣೆ ಅಂಗವಾಗಿ ಗ್ರಾಮಸ್ಥರು ವಿಶೇಷ ಪೂಜೆ ಸಲ್ಲಿಸಿ, ಅನ್ನಸಂತರ್ಪಣೆ ಏರ್ಪಡಿಸಿದ್ದರು. ಈ ವೇಳೆ ಬಡನಹಳ್ಳಿ ಶಿವಕುಮಾರ್ ಶಾಸ್ತ್ರಿಗಳಿಂದ ಹರಿಕಥೆ ಏರ್ಪಡಿಸಲಾಗಿತ್ತು. ದೇವಾಲಯದ 48 ಗಡಿ ಗ್ರಾಮಗಳ ಮುಖಂಡರು ಹಾಗೂ ಭಕ್ತಾದಿಗಳು ಪಾಲ್ಗೊಂಡಿದ್ದರು.

ಮೇ 23, ಡಾ.ರಾಜ್‌ಕುಮಾರ್ ಗೀತ ನಮನ, ನಾಲ್ವಡಿ ಪ್ರಶಸ್ತಿ ಪ್ರದಾನ ಸಮಾರಂಭ

ಮೈಸೂರು,ಮೇ20(ಜಿಎ)-ರವಿಸಂತು ಬಳಗದ ವತಿಯಿಂದ ಮೇ 23ರಂದು ಬೆಳಗ್ಗೆ 11ರಿಂದ ರಾತ್ರಿ 9ರವರೆಗೆ ನಗರದ ಪುರಭವನದಲ್ಲಿ ಡಾ.ರಾಜ್ ಕುಮಾರ್ ಗೀತನಮನ ಹಾಗೂ ನಾಲ್ವಡಿ ಹೆಸರಿನ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗಿದೆ ಎಂದು ಬಳಗದ ಮುಖ್ಯಸ್ಥ ರವಿಸಂತು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 11 ಗಂಟೆಯಿಂದ ಸಂಜೆ 5 ರವರೆಗೆ ಗಾಯನ ಕಾರ್ಯಕ್ರಮವಿದ್ದು, ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿನ ಹವ್ಯಾಸಿ ಹಾಗೂ ಇನ್ನಿತರ ಗಾಯಕರು ಡಾ. ರಾಜ್‌ಕುಮಾರ್ ಚಿತ್ರಗೀತೆಗಳನ್ನು ಹಾಡಲಿದ್ದಾರೆ. ಬಳಿಕ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದೆ ಎಂದರು.

ಮುಖ್ಯ ಅತಿಥಿಗಳಾಗಿ ಶಾಸಕ ಟಿ.ಎಸ್.ಶ್ರೀವತ್ಸ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಖ್ಯಾತ ನಟ ಅಭಿಜಿತ್ ಮತ್ತಿತರರು ಆಗಮಿಸಲಿದ್ದಾರೆ. ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ 41 ಮಂದಿಗೆ ನಾಲ್ವಡಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಅನುಭವಿ, ಸಿಂಚನ, ರವಿ, ಕಿರಣ್, ಶ್ರೀನಿವಾಸ್, ಸುಧಾಕರ್, ಚಂದನ್, ಪದ್ಮಾ, ವೀಣಾ ಉಪಸ್ಥಿತರಿದ್ದರು.

ನಾಳೆಯಿಂದ ಮೈಸೂರಲ್ಲಿ ಗ್ರೀಷ್ಮ ರಂಗೋತ್ಸವ

ಮೈಸೂರು, ಮೇ 20(ಜಿಎ)-ಸಂಚಲನ ಮೈಸೂರು ತಂಡದ ವತಿಯಿಂದ ಮೇ 22ರಿಂದ 24ರವರೆಗೆ ಕಲಾ ಮಂದಿರದ ಕಿರುರಂಗಮಂದಿರದಲ್ಲಿ ಗ್ರೀಷ್ಮ ರಂಗೋತ್ಸವ ಕಾರ್ಯಕ್ರಮವನ್ನು ಬೆಂಗಳೂರಿನ ಉದ್ಭವ ಕಲಾವಿದರ, ಅರಳಿ ಸೇವಾ ಟ್ರಸ್ಟ್, ತಸ್ಮಿ ಮೈಸೂರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಡನೆ ಆಯೋಜಿಸಲಾಗಿದೆ ಎಂದು ತಂಡದ ಮುಖ್ಯಸ್ಥ ದೀಪಕ್ ಮೈಸೂರು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೇ 22ರಂದು ಸಂಜೆ 6.30ಕ್ಕೆ ಉದ್ಘಾಟನೆ ಕಾರ್ಯಕ್ರಮ ನಡೆಯಲಿದ್ದು, ಶಾಸಕ ಹರೀಶ್‌ಗೌಡ, ಛೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಡಾ.ಡಿ.ಬಿ.ಲಿಂಗರಾಜು, ನಿರ್ಮಲ ಮಠಪತಿ, ಪತ್ರಕರ್ತೆ ರಶ್ಮಿಕೋಟಿ, ಶಾಂತ ವೇದಿಕೆಯಲ್ಲಿರುವರು ಎಂದರು.

ನಂತರ ನಾಟ್ಯ ವೈಭವ ಸೆಂಟ್ರಲ್ ಕಾಲೇಜು ವಿದ್ಯಾರ್ಥಿಗಳಿಂದ ಪ್ರಕಾಶ್ ಜಿ.ಅವರ 'ನನ್ಸಿರಿ' ನಾಟಕ, 23ರಂದು ಸಂಜೆ 6.30ಕ್ಕೆ ಜನಮನ ಸಾಂಸ್ಕೃತಿಕ ಸಂಘಟನೆಯಿಂದ ದೇವನೂರು ಮಹಾದೇವ ಅವರ ಕೃತಿ ಆಧರಿಸಿದ 'ಸಂಬಂಜ ಅನ್ನೋದು ದೊಡ್ದು ಕನಾ' ನಾಟಕ, 24 ರಂದು ಸಂಜೆ 6.30ಕ್ಕೆ ತಮ್ಮ ತಂಡದಿಂದ ಆಸಿಫ್ ಕ್ಷತ್ರಿಯ ಅವರ ರಚನೆಯ 'ಎರಡೆರಡ್ಲಾ ಐದು' ಎಂಬ ನಾಟಕ ಪ್ರದರ್ಶನ ನಡೆಯಲಿದೆ. ಇವುಗಳಿಗೆ ಟಿಕೆಟ್ ಇಲ್ಲ. ಆದರೆ ಪ್ರೋತ್ಸಾಹಧನ ನೀಡಬಹುದಾಗಿದೆ ಎಂದು ತಿಳಿಸಿದರು.

ಚಲನಚಿತ್ರ ನಿರ್ಮಾಪಕ ಬಾಬು, ಹಿರಿಯ ರಂಗಕರ್ಮಿ ನಾಗೇಂದ್ರ ಪ್ರಸಾದ್, ರಾಧಾ ನಾರಾಯಣಗೌಡ, ಸಾಗರ್ ಉಪಸ್ಥಿತರಿದ್ದರು.

ಉಚಿತ ಆರೋಗ್ಯ ತಪಾಸಣೆ ಶಿಬಿರ

ಮೈಸೂರು, ಮೇ 20-ಜೆ.ಪಿ.ನಗರ ಬ್ರಾಹ್ಮಣ ಸಂಘ, ಕಾಮಾಕ್ಷಿ ಆಸ್ಪತ್ರೆ, ಜೆ.ಪಿ.ನಗರ ಹಾಗೂ ಹೆಚ್.ವಿ.ರಾಜೀವ್ ಸ್ನೇಹ ಬಳಗದ ವತಿಯಿಂದ ಮೇ 23ರಂದು ಬೆಳಗ್ಗೆ 9ರಿಂದ ಸಂಜೆ 4ರವರೆಗೆ ಜೆ.ಪಿ.ನಗರ ಕಾಮಾಕ್ಷಿ ಆಸ್ಪತ್ರೆಯಲ್ಲಿ ಉಚಿತ ಆರೋಗ್ಯ ತಪಾಸಣೆ ಶಿಬಿರ ಹಮ್ಮಿಕೊಳ್ಳಲಾಗಿದೆ.

ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ದರ ಏರಿಕೆ ಖಂಡಿಸಿ ಮೈಸೂರಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷ (ಎಂ) ಪ್ರತಿಭಟನೆ

ಮೈಸೂರು,ಮೇ20(ಜಿಎ)-ಕೇಂದ್ರ ಸರ್ಕಾರ ಪೆಟ್ರೋಲ್, ಡೀಸೆಲ್ ಹಾಗೂ ಅಡುಗೆ ಅನಿಲಗಳ ಬೆಲೆ ಹೆಚ್ಚಿಸಿರುವುದನ್ನು ಖಂಡಿಸಿ, ನೀಟ್ ಪರೀಕ್ಷೆಯ ಅಕ್ರಮದಲ್ಲಿ ಭಾಗಿಯಾದವರಿಗೆ ಕಠಿಣ ಶಿಕ್ಷೆಗೆ ಆಗ್ರಹಿಸಿ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಮೈಸೂರು ಸ್ಥಳೀಯ ಸಮಿತಿ ಮೈಸೂರಿನ ಗಾಂಧಿ ವೃತ್ತದಲ್ಲಿ ಬುಧವಾರ ನಡೆಸಿತು.

ಕೇಂದ್ರ ಸರಕಾರ ಜನ ವಿರೋಧಿ ನೀತಿಗಳನ್ನು ಅನುಸರಿಸುತ್ತಿದೆ ಎಂದು ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದ ಸಿಪಿಐಎಂ ಕಾರ್ಯಕರ್ತರು, ಬೆಲೆ ಏರಿಕೆ ವಿರುದ್ಧ ಪ್ರಚಾರ ಮಾಡಿ ಅಧಿಕಾರಕ್ಕೆ ಬಂದ ಮೋದಿ ಸರ್ಕಾರ ಕಳೆದ 12 ವರ್ಷಗಳಿಂದ ರೈತ-ಕಾರ್ಮಿಕರಿಗೆ, ಬಡವರಿಗೆ, ಜನ ಸಾಮಾನ್ಯರಿಗೆ ಬೆಲೆ ಏರಿಕೆ ಬಿಸಿಮುಟ್ಟಿಸಿ ಜನರನ್ನು ಸುಲಿಗೆ ಮಾಡುತ್ತಿದೆ ಎಂದರು.

ಪರೋಕ್ಷ ತೆರಿಗೆ ಹೆಚ್ಚಿಸಿ,ಪ್ರತ್ಯಕ್ಷ ತೆರಿಗೆಯನ್ನು ನಿರಂತರವಾಗಿ ಇಳಿಸುತ್ತಿದೆ. ಮೋದಿ ನಾವು ಅಧಿಕಾರಕ್ಕೆ ಬಂದರೆ ಒಳ್ಳೆಯ ದಿನಗಳನ್ನು ತರುತ್ತೇವೆಂದು ಹೇಳಿ, ಈಗ ಮುಂದೆ ಕೆಟ್ಟ ದಿನಗಳು ಬರುತ್ತಿವೆ ಎಂದು ಹೇಳುವ ಮೂಲಕ ಜನರನ್ನು ಮತ್ತಷ್ಟು ಕಷ್ಟಕ್ಕೆ ದೂಡುತ್ತಿದೆ. ಈ ಹಿಂದೆ ಅಡುಗೆ ಅನಿಲಗಳ ಬೆಲೆ ಏರಿಸಿತ್ತು.ಪಂಚ ರಾಜ್ಯಗಳ ಚುನಾವಣೆ ಮುಗಿಯುವವರೆಗೂ ಸುಮ್ಮನಿದ್ದು, ಚುನಾವಣೆ ಮುಗಿದ ನಂತರ ಒಂದೇ ವಾರದಲ್ಲಿ ಎರಡು ಬಾರಿ ಪೆಟ್ರೋಲ್, ಡೀಸೆಲ್ ಬೆಲೆ ಏರಿಸುವ ಮೂಲಕ ಜನರನ್ನು ಲೂಟಿ ಹೊಡೆಯಲು ಮುಂದಾಗಿದೆ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ಬೆಲೆ ಏರಿಕೆ ಹೊರೆಯನ್ನು ಜನರ ಮೇಲೆ ಏರಲು ಚಿನ್ನ ಖರೀದಿಸಬೇಡಿ, ವಿದೇಶ ಪ್ರವಾಸ ಮಾಡಬೇಡಿ ಎಂಬ ಉಪದೇಶ ಮಾಡಿ ಪ್ರಧಾನಿ ನರೇಂದ್ರ ಮೋದಿ ಜನರನ್ನು ಭಾವನಾತ್ಮಕವಾಗಿ ವಂಚಿಸುತ್ತಿದ್ದಾರೆ. ಮಾತ್ರವಲ್ಲ ಉಪದೇಶ ಜನರಿಗಾಗಿ ತನಗಲ್ಲ ಎಂದು ಈ ಸಂಕಷ್ಟದ ಸಮಯದಲ್ಲಿ ವಿದೇಶ ಪ್ರವಾಸ ಮಾಡುತ್ತಿದ್ದಾರೆ. ಈ ಪ್ರವಾಸದಿಂದ ದೇಶದ ದುಡಿವ ಜನರಿಗೇನು ಪ್ರಯೋಜನ ಎಂದು ಪ್ರಶ್ನಿಸಿದರು.



ಪೆಟ್ರೋಲ್, ಡೀಸೆಲ್ ಹಾಗೂ ಅಡುಗೆ ಅನಿಲಗಳ ಬೆಲೆ ಹೆಚ್ಚಿಸಿರುವುದನ್ನು ಖಂಡಿಸಿ ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಮೈಸೂರು ಸ್ಥಳೀಯ ಸಮಿತಿ ಮೈಸೂರಿನ ಗಾಂಧಿ ವೃತ್ತದಲ್ಲಿ ಬುಧವಾರ ಪ್ರತಿಭಟನೆ ನಡೆಸಿತು.

ಹಾಗೆಯೇ ಬಿಜೆಪಿಯ ಮುಖ್ಯಮಂತ್ರಿಗಳು, ನಾಯಕರ ಒಂದೆರಡು ದಿನ ಬೈಕ್‌ಗಳಲ್ಲಿ, ಮೆಟ್ರೋ ರೈಲಿನಲ್ಲಿ ಓಡಾಡಿ ಪೆಟ್ರೋಲ್, ಡಿಸೇಲ್ ಉಳಿಸುವ ನಾಟಕ ಆಡುತ್ತಿದ್ದಾರೆ. ಆದರೆ ಆಟೋ, ಟ್ಯಾಕ್ಸಿ ಚಾಲಕರು ಹಾಗೂ ಪ್ರತಿನಿತ್ಯ ಪೆಟ್ರೋಲ್, ಡೀಸೆಲ್ ಬಳಸುವ ಜನಸಾಮಾನ್ಯರು ಎಲ್ಲವನ್ನು ಬಿಟ್ಟು ಇರಲು ಸಾಧ್ಯವೇ? ಪ್ರಜೆಗಳಿಗೆ ತೊಂದರೆ ಆಗದಂತೆ ನೋಡಿಕೊಳ್ಳುವ ಸಾಮರ್ಥ್ಯ ತನಗಿಲ್ಲವೆಂದು ಪ್ರಧಾನಿ ಎಂದು ತಮ್ಮನ್ನು ತಾವೇ ಸಾಬೀತು ಮಾಡಿಕೊಂಡಿದ್ದಾರೆ ಎಂದು ದೂರಿದರು. ನೀಟ್ ಪರೀಕ್ಷೆಯನ್ನು ಸರಿಯಾಗಿ ನಡೆಸದೇ ಹಲವು ಮುಗ್ಧ ಅಮಾಯಕ ವಿದ್ಯಾರ್ಥಿಗಳನ್ನು ಆತ್ಮಹತ್ಯೆಗೆ ತಳ್ಳಿದ ಕೊಲೆಗಡುಕ ಸರ್ಕಾರ, ಈ ಅಕ್ರಮದಲ್ಲಿ ಭಾಗಿಯಾದವರಿಗೆ ಕಠಿಣ ಶಿಕ್ಷೆ ನೀಡಬೇಕೆಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ, ಜಿಲ್ಲಾ ಸಮಿತಿ ಸದಸ್ಯರಾದ ಎನ್.ವಿಜಯ್ ಕುಮಾರ್, ಜಯರಾಂ, ಮೆಹಬೂಬ್, ಸ್ಥಳೀಯ ಸಮಿತಿ ಕಾರ್ಯದರ್ಶಿ ಎನ್.ಸುಬ್ರಹ್ಮಣ್ಯ, ಸದಸ್ಯರಾದ ರಾಜೇಂದ್ರ, ಬಸವಯ್ಯ, ಬಲರಾಂ, ಬಾಲಾಜಿರಾವ್, ಶ್ರೀಧರ್, ಶಶಿಕುಮಾರ್, ಲ.ಜಗನ್ನಾಥ್, ಪುಟ್ಟಮಲ್ಲಯ್ಯ, ಅಭಿ, ಕೃಷ್ಣಪ್ಪ, ಆರ್.ಸುಬ್ರಹ್ಮಣ್ಯ ಮತ್ತಿತರರಿದ್ದರು.

ಎಸ್‌ಎಸ್‌ಎಲ್‌ಸಿ: 625ಕ್ಕೆ 624 ಅಂಕ ಪಡೆದ ವಿದ್ಯಾರ್ಥಿನಿಗೆ ಸನ್ಮಾನ

ಮೈಸೂರು, ಮೇ20(ಬಿಎಲ್‌ಯು)-ಮೈಸೂರಿನ ಇಲವಾಲದ ಕರ್ನಾಟಕ ಪಬ್ಲಿಕ್ ಸ್ಕೂಲ್‌ನಲ್ಲಿ ವ್ಯಾಸಂಗ ಮಾಡಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 624 ಅಂಕ ಗಳಿಸಿದ ವಿದ್ಯಾರ್ಥಿನಿ ಮಾಧುರಿ ಆರ್. ಅವರನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳು ಸನ್ಮಾನಿಸಿದರು.

ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಯಾಗಿರುವ ಮಾಧುರಿ ಅವರ ತಾಯಿ ಗ್ಯಾರಂಟಿ ಯೋಜನೆಯಿಂದ ದೊರೆಯುವ ಆರ್ಥಿಕ ಸಹಾಯವನ್ನು ಮಗಳ ವಿದ್ಯಾಭ್ಯಾಸಕ್ಕೆ ಬಳಸಿ ಯೋಜನೆಯನ್ನು ಸದುಪಯೋಗ ಮಾಡಿಕೊಂಡಿದ್ದರು. ಈ ಹಿನ್ನೆಲೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಅವರ ಸೂಚನೆ ಮೇರೆಗೆ ಅಧಿಕಾರಿಗಳು ಮಾಧುರಿ ಅವರಿಗೆ ಸನ್ಮಾನ ಮಾಡಿದರು.



ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 624 ಅಂಕ ಪಡೆದ ಮೈಸೂರಿನ ಇಲವಾಲದ ಕರ್ನಾಟಕ ಪಬ್ಲಿಕ್ ಸ್ಕೂಲ್ ವಿದ್ಯಾರ್ಥಿನಿ ಮಾಧುರಿ ಆರ್. ಅವರನ್ನು ಮಹಿಳಾ-ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳು ಸನ್ಮಾನಿಸಿದರು.

ಸರ್ಕಾರದ ಯೋಜನೆಗಳು ಅರ್ಹ ಫಲಾನುಭವಿಗಳಿಗೆ ತಲುಪಿದಾಗ ಅಮೋಘ ಸಾಧನೆಗಳಾಗುತ್ತವೆ ಎಂಬುದಕ್ಕೆ ಮಾಧುರಿ ಸಾಕ್ಷಿಯಾಗಿದ್ದು, ಈಕೆಯ ಸಾಧನೆ ಇತರೆ ವಿದ್ಯಾರ್ಥಿಗಳಿಗೆ ಪ್ರೇರಣೆ ಎಂದು ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್‌ರ ಅಭಿನಂದನೆಯ ಉದ್ದೇಶವನ್ನು ಅಧಿಕಾರಿಗಳು ತಿಳಿಸಿದರು. ಈ ವೇಳೆ ಮಹಿಳಾ-ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ನಾಗರಾಜ್, ಜಿಪಂ ಮಾಜಿ ಅಧ್ಯಕ್ಷ ಕೂರ್ಗಳ್ಳಿ ಮಹದೇವು, ಶಿಶು ಅಭಿವೃದ್ಧಿ ಯೋಜನಾಧಿಕಾರಿ ತಿಬ್ಬಯ್ಯ ಇನ್ನಿತರರು ಹಾಜರಿದ್ದರು.

ದೇಶ - ವಿದೇಶ

ಮೋದಿಯನ್ನು ಹಾವಾಡಿಗನಂತೆ ವ್ಯಂಗ್ಯಚಿತ್ರ ಪ್ರಕಟಿಸಿದ ನಾರ್ವೆ ಪತ್ರಿಕೆ



ನವದೆಹಲಿ: ನಾರ್ವೆ ಮೂಲದ ದಿನಪತ್ರಿಕೆಯೊಂದು ಪ್ರಧಾನಿ ನರೇಂದ್ರ ಮೋದಿಯವರನ್ನು ಹಾವಾಡಿಗನ ರೀತಿ ವ್ಯಂಗ್ಯಚಿತ್ರದಲ್ಲಿ ಚಿತ್ರಿಸಿದೆ. ಸಾಮಾಜಿಕ ಮಾಧ್ಯಮದಲ್ಲಿ ಕಾಣಿಸಿಕೊಂಡ ಈ ವ್ಯಂಗ್ಯಚಿತ್ರದ ಬಗ್ಗೆ ನೆಟ್ಟಿಗರಿಂದ ತೀವ್ರ ಟೀಕೆ ವ್ಯಕ್ತವಾಗಿದೆ. ಇದು ಸಾಂಪ್ರದಾಯಿಕ ಜನಾಂಗೀಯ ನಿಂದನೆಯ ನಿದರ್ಶನವಾಗಿದೆ ಎಂದು ಕಿಡಿಕಾರಿದ್ದಾರೆ. ನಾರ್ವೆ ಪ್ರಮುಖ ದಿನಪತ್ರಿಕೆ ಆಫ್ಟೆನ್‌ಪೋಸ್ಟನ್‌ನಲ್ಲಿ ಪ್ರಕಟವಾದ ಈ ಚಿತ್ರದಲ್ಲಿ ಪ್ರಧಾನಿ ಮೋದಿಯನ್ನು ಪುಂಗಿ ಊದುವ ರೀತಿ, ಇಂಧನ ತುಂಬುವ ಪೈಪ್ ಅನ್ನು ಹಾವಿನಂತೆ ಚಿತ್ರಿಸಲಾಗಿದೆ. ಈ ಚಿತ್ರ ಒಳಗೊಂಡಿರುವ ಲೇಖನಕ್ಕೆ 'ಚೋರ ಮತ್ತು ಸ್ವಲ್ಪ ಕಿರಿಕಿರಿ ವ್ಯಕ್ತಿ'(A sneaky and slightly annoying man) ಎಂದು ಶೀರ್ಷಿಕೆ ನೀಡಲಾಗಿದೆ. ಮೋದಿ ಅವರು ಇತ್ತೀಚೆಗೆ 3ನೇ ಭಾರತ-ನಾರ್ಡಿಕ್ ಶೃಂಗಸಭೆಯಲ್ಲಿ ಭಾಗವಹಿಸಲು ನಾರ್ವೆಗೆ ಭೇಟಿ ನೀಡಿದ್ದರು. ಇದರ ಬೆನ್ನಲ್ಲೇ, ಪತ್ರಿಕೆ ಈ ರೀತಿ ಚಿತ್ರಿಸಿದೆ. ಸೋಮವಾರ ಒಸ್ಲೋದಲ್ಲಿ ಮೋದಿ ಮತ್ತು ನಾರ್ವೆ ಪ್ರಧಾನಿ ಜೋನಸ್ ಸ್ಟೋರ್ ಭೇಟಿ ಬಳಿಕ ಜಂಟಿ ಹೇಳಿಕೆ ಬಿಡುಗಡೆ ಮಾಡಿದ್ದರು. ನಂತರ, ನಾರ್ವೆ ಪತ್ರಕರ್ತೆಯೊಬ್ಬರು ತಮ್ಮಿಂದ ಕೆಲ ಪ್ರಶ್ನೆಗಳನ್ನು ಸ್ವೀಕರಿಸುವಂತೆ ಪ್ರಧಾನಿ ಮೋದಿಗೆ ಕೇಳಿಕೊಂಡಿದ್ದರು. ಮೋದಿ ಅದಕ್ಕೆ ನಿರಾಕರಿಸಿ ಹೊರಟ ಹಿನ್ನೆಲೆ ತೀವ್ರ ವಾಗ್ದಾಳಿ ನಡೆಸಿದ್ದರು.

ತೈವಾನ್‌ನ ಯಾಂಗ್ ಶುವಾಂಗ್-ಜಿ ಐತಿಹಾಸಿಕ ಪ್ರೇಮಕಥನಕ್ಕೆ ಬೂಕರ್ ಪ್ರಶಸ್ತಿ



ಲಂಡನ್: ತೈವಾನ್ ಮೂಲದ ಲೇಖಕಿ ಯಾಂಗ್ ಶುವಾಂಗ್-ಜಿ ಮತ್ತು ಅನುವಾದಕ ಲಿನ್ ಕಿಂಗ್ ಅವರು 2026ನೇ ಸಾಲಿನ ಪ್ರತಿಷ್ಠಿತ ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿಯನ್ನು ಗೆದ್ದಿದ್ದಾರೆ. 1930ರ ದಶಕದಲ್ಲಿ ಜಪಾನ್ ಆಕ್ರಮಿತ ತೈವಾನ್‌ನಲ್ಲಿ ನಡೆದ ಐತಿಹಾಸಿಕ ಪ್ರೇಮಕಥೆಯನ್ನು ಆಧರಿಸಿರುವ 'ತೈವಾನ್ ಟ್ರಾವೆಲಾಗ್' ಕಾದಂಬರಿಗೆ ಪ್ರಶಸ್ತಿ ಬಂದಿದೆ. 2020ರಲ್ಲಿ ಪ್ರಕಟವಾಗಿದ್ದ ಈ ಪುಸ್ತಕವು, ಬೂಕರ್ ಪ್ರಶಸ್ತಿಯನ್ನು ಗೆದ್ದ ಮೊದಲ ಮ್ಯಾಂಡರಿನ್ ಚೈನೀಸ್ ಭಾಷೆಯ ಕಾದಂಬರಿ ಇದಾಗಿದೆ. ತೀರ್ಪುಗಾರರ ಸಮಿತಿಯ ಅಧ್ಯಕ್ಷತೆ ವಹಿಸಿದ್ದ ಬ್ರಿಟಿಷ್ ಕಾದಂಬರಿಕಾರ ನತಾಶಾ ಬ್ರೌನ್, ಈ ಕೃತಿಯು ಆಕರ್ಷಕ ಮತ್ತು ವಿಭಿನ್ನ ಕಥಾವಸ್ತುವಿನಿಂದ ಕೂಡಿದೆ. ಇದು ಭಾಷೆಯೊಂದಿಗೆ ಆಟವಾಡುವ ಮೂಲಕ ಓದುಗರಿಗೆ ಪ್ರತಿ ಪುಟದಲ್ಲೂ ಆಶ್ಚರ್ಯವನ್ನು ಮೂಡಿಸುತ್ತದೆ ಎಂದಿದ್ದಾರೆ. ಜಪಾನ್‌ನ ವಸಾಹತುಶಾಹಿಯಾಗಿ ತೈವಾನ್ ಇದ್ದ ಸಮಯದಲ್ಲಿನ ಸಂಕೀರ್ಣ ಸಂದರ್ಭಗಳನ್ನು ನಾನು ನನ್ನ ಕೃತಿಗಳಲ್ಲಿ ತೆರೆದಿಟ್ಟಿದ್ದೇನೆ ಎಂದು ಯಾಂಗ್ ಶುವಾಂಗ್-ಜಿ ಹೇಳಿದ್ದಾರೆ. ಈ ಪ್ರಶಸ್ತಿಯು ಅಂದಾಜು 64 ಲಕ್ಷ (50 ಸಾವಿರ ಪೌಂಡ್) ನಗದು ಒಳಗೊಂಡಿದೆ.

ಸುವೇಂದು ಅಧಿಕಾರಿ ಸಹಾಯಕನ ಹತ್ಯೆ: 5ನೇ ಆರೋಪಿ ಬಂಧನ

ವಾರಾಣಸಿ: ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಸುವೇಂದು ಅಧಿಕಾರಿಯ ಸಹಾಯಕನ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿ ಐದನೇ ಆರೋಪಿಯನ್ನು ಕೇಂದ್ರ ತನಿಖಾ ದಳ ಬಂಧಿಸಿದೆ. ವಿಧಾನಸಭಾ ಚುನಾವಣೆಯ ಫಲಿತಾಂಶ ಘೋಷಣೆಯಾದ ಮೇಲೆ ಸುವೇಂದು ಅಧಿಕಾರಿ ಆಪ್ತ ಸಹಾಯಕ ಚಂದ್ರನಾಥ್‌ರಥ್ ಅವರನ್ನು ಹತ್ಯೆ ಮಾಡಲಾಗಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿ ಕಳೆದ ಸೋಮವಾರ ಉತ್ತರ ಪ್ರದೇಶದ ಮುಜಾಫರ್ ನಗರದ ರಾಜ್‌ಕುಮಾರ್ ಸಿಂಗ್‌ನನ್ನು ಬಂಧಿಸಲಾಗಿದ್ದು, ಇದರ ಬಳಿಕ ವಾರಣಾಸಿಯ ನೆರೆಯ ಘಾಜಿಪುರ ಜಿಲ್ಲೆಯ ನಿವಾಸಿ ವಿನಯ್ ರೈ ಎಂಬಾತನನ್ನು ಬಂಧಿಸಲಾಗಿದೆ.

ಚಂದ್ರನಾಥ್ ರಥ್ ಹತ್ಯೆಗೆ ಸಂಬಂಧಿಸಿ ಉತ್ತರ ಪ್ರದೇಶದ ಮುಜಾಫರ್ ನಗರದ ರಾಜ್‌ಕುಮಾರ್ ಸಿಂಗ್ ಎಂಬಾತನನ್ನು ಸೋಮವಾರ ಸಿಬಿಐ ಬಂಧಿಸಿತ್ತು. ರಾಜ್‌ಕುಮಾರ್ ಸಿಂಗ್‌ನನ್ನು ಪ್ರಕರಣದ ಪ್ರಮುಖ ಆರೋಪಿ ಎಂದು ಗುರುತಿಸಲಾಗಿದೆ. ಇದರ ಬಳಿಕ ವಾರಣಾಸಿಯ ನೆರೆಯ ಘಾಜಿಪುರ ಜಿಲ್ಲೆಯ ನಿವಾಸಿ ವಿನಯ್ ರೈ ಎಂಬಾತನನ್ನು ಕೇಂದ್ರ ತನಿಖಾ ಸಂಸ್ಥೆ ವಶಕ್ಕೆ ಪಡೆದಿದೆ. ಈ ಕುರಿತು ಮಾಹಿತಿ ನೀಡಿರುವ ತನಿಖಾಧಿಕಾರಿಗಳು ಹೈ ಪ್ರೊಫೈಲ್ ಹತ್ಯೆ ಪ್ರಕರಣವಾಗಿರುವ ಚಂದ್ರನಾಥ್‌ರಥ್ ಹತ್ಯೆ ಸಂಚಿನಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ಆರೋಪಿ ವಿನಯ್ ರೈ ನನ್ನು ಕೋಲ್ಕತ್ತಾಗೆ ಕರೆದುಕೊಂಡು ಹೋಗಿ ಅಲ್ಲಿ ನ್ಯಾಯಾಲಯದ ಮುಂದೆ ಹಾಜರುಪಡಿಸುವುದಾಗಿ ತಿಳಿಸಿದ್ದಾರೆ.

ಮೆಟಾದಲ್ಲಿ 8,000 ಉದ್ಯೋಗ ಕಡಿತ


ಸಿಂಗಾಪುರ್: ಜಾಗತಿಕ ಸಾಮಾಜಿಕ ಮಾಧ್ಯಮ ಸಂಸ್ಥೆ, ಮೆಟಾ 8,000 ಉದ್ಯೋಗಿಗಳು, ಅಂದರೆ ಕಂಪನಿಯ



ಸುಮಾರು ಶೇ.10ರಷ್ಟು ಉದ್ಯೋಗಿಗಳನ್ನು ಬುಧವಾರ ವಜಾಗೊಳಿಸಲಾಗುವುದು ಎಂದು ತಿಳಿಸಿರುವುದಾಗಿ ವರದಿಯಾಗಿದೆ. ತಂತ್ರಜ್ಞಾನ ದೈತ್ಯ ಕಂಪನಿಯು ಕೃತಕ ಬುದ್ಧಿಮತ್ತೆ ಯುಗಕ್ಕೆ ಸಿದ್ಧವಾಗುತ್ತಿರುವ ಹಿನ್ನೆಲೆಯಲ್ಲಿ ಈ ನಿರ್ಧಾರಕ್ಕೆ ಬಂದಿದೆ ಎಂದು ವರದಿ ತಿಳಿಸಿದೆ.

ಸಿಂಗಾಪುರ್‌ದಲ್ಲಿ ಆದೇಶ ಕಾರ್ಯಗತಗೊಳಿಸುವ ಪ್ರಕ್ರಿಯೆ ಆರಂಭವಾಗಿದೆ ಎಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದೆ. ಬುಧವಾರ ಸ್ಥಳೀಯ ಸಮಯ ಬೆಳಿಗ್ಗೆ 4 ಗಂಟೆ ಸುಮಾರಿಗೆ ಕೆಲಸದಿಂದ ವಜಾಗೊಳಿಸಲಾಗುತ್ತಿರುವ ಕುರಿತಂತೆ ಕಾರ್ಮಿಕರಿಗೆ ಇಮೇಲ್ ಹೋಗಿವೆ. ಬ್ರಿಟನ್, ಅಮೆರಿಕ ಮತ್ತು ಇತರೆಡೆಗಳಲ್ಲಿನ ಉದ್ಯೋಗಿಗಳಿಗೂ ಅಲ್ಲಿನ ಕಾಲಮಾನಕ್ಕೆ ತಕ್ಕಂತೆ ಬುಧವಾರ ಮುಂಜಾನೆ ತಿಳಿಸಲಾಗುತ್ತದೆ. ಇನ್ನೂ 7,000 ಉದ್ಯೋಗಿಗಳನ್ನು ಹೊಸ ಎಐಯ ಉಪಕ್ರಮಗಳಿಗೆ ಮರು ನಿಯೋಜಿಸಲಾಗುವುದು. ಪ್ರಸ್ತುತ ಮಾನವರು ನಿರ್ವಹಿಸುವ ಕಾರ್ಯಗಳನ್ನು ನಿರ್ವಹಿಸಬಲ್ಲ ಎಐ ಏಜೆಂಟ್‌ಗಳನ್ನು ಅಭಿವೃದ್ಧಿಪಡಿಸುವ ಗುರಿ ಹೊಂದಿದೆ. ಕಂಪನಿ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥ ಜನೆಲ್ ಗೇಲ್, ಈ ವಾರ ಉದ್ಯೋಗಿಗಳಿಗೆ ಮನೆಯಿಂದಲೇ ಕೆಲಸ ಮಾಡಬೇಕೆಂದು ಹೇಳಿದ್ದಾರೆ. ಅದರ ಬೆನ್ನಲ್ಲೇ ಈ ಬೆಳವಣಿಗೆ ಆಗಿದೆ.

ಕೇರಳಂ ನೂತನ ಸಚಿವರಿಗೆ ಖಾತೆ ಹಂಚಿಕೆ



ತಿರುವನಂತಪುರ: ಕೇರಳಂ ಯುಡಿಎಫ್ ಸರ್ಕಾರದಲ್ಲಿ ನೂತನ ಸಚಿವರಿಗೆ ಖಾತೆಗಳ ಹಂಚಿಕೆ ಅಂತಿಮಗೊಳಿಸಲಾಗಿದೆ. ಮುಖ್ಯಮಂತ್ರಿ ವಿ.ಡಿ.ಸತೀಶನ್ ಅವರು ಹಣಕಾಸು, ಕಾನೂನು, ಸಾಮಾನ್ಯ ಆಡಳಿತ ಮತ್ತು ಬಂದರು ಸೇರಿದಂತೆ 35 ಇಲಾಖೆಗಳನ್ನು ನಿರ್ವಹಿಸಲಿದ್ದಾರೆ. ಕಾಂಗ್ರೆಸ್‌ನ ಹಿರಿಯ ನಾಯಕ ರಮೇಶ್ ಚೆನ್ನಿತ್ತಲ ಅವರಿಗೆ ಗೃಹ ಖಾತೆ, ಐಯುಎಂಎಲ್ ನಾಯಕ ಕುಂಞಾಲಿಕುಟ್ಟಿ ಅವರಿಗೆ ಕೈಗಾರಿಕೆ ಮತ್ತು ವಾಣಿಜ್ಯ, ಮಾಹಿತಿ ತಂತ್ರಜ್ಞಾನ, ಗಣಿಗಾರಿಕೆ ಮತ್ತು ಭೂ ವಿಜ್ಞಾನ, ಕೈಮಗ್ಗ ಮತ್ತು ಜವಳಿ ಖಾತೆಗಳನ್ನು ವಹಿಸಲಾಗಿದೆ. ಕೇರಳಂ ಪ್ರದೇಶ ಕಾಂಗ್ರೆಸ್ ಸಮಿತಿ ಮುಖ್ಯಸ್ಥ ಸಣ್ಣಿ ಜೋಸೆಫ್ ಅವರಿಗೆ ವಿದ್ಯುತ್, ಪರಿಸರ ಮತ್ತು ಸಂಸದೀಯ ವ್ಯವಹಾರಗಳ ಖಾತೆ ನೀಡಲಾಗಿದೆ. ಹಿರಿಯ ನಾಯಕ ಕೆ.ಮುರಳೀಧರನ್ ಅವರಿಗೆ ಆರೋಗ್ಯ, ದೇವಸ್ವಂ, ವೈದ್ಯಕೀಯ ಶಿಕ್ಷಣ ಜವಾಬ್ದಾರಿ ನೀಡಲಾಗಿದೆ. ರೋಜಿ ಎಂ.ಜಾನ್ ಅವರಿಗೆ ಉನ್ನತ ಶಿಕ್ಷಣ, ಎ.ಪಿ.ಅನಿಲ್ ಕುಮಾರ್ ಅವರಿಗೆ ಕಂದಾಯ, ಎನ್.ಶಂಸುದ್ದೀನ್ ಅವರಿಗೆ ಸಾಮಾನ್ಯ ಶಿಕ್ಷಣ ಖಾತೆ ನೀಡಲಾಗಿದೆ.

ಆರ್‌ಎಸ್‌ಪಿ ಪಕ್ಷದ ಶಿಬು ಬೇಬಿ ಜಾನ್ ಅವರಿಗೆ ಅರಣ್ಯ, ವನ್ಯಜೀವಿ ರಕ್ಷಣೆ, ಕೌಶಲ್ಯ ಅಭಿವೃದ್ಧಿ ಮತ್ತು ಕೇರಳ ಕಾಂಗ್ರೆಸ್ (ಜೋಸೆಫ್) ಪಕ್ಷದ ಮೋನ್ಸ್ ಜೋಸೆಫ್ ಅವರಿಗೆ ನೀರಾವರಿ, ಅಂತರ್ಜಲ, ನೀರು ಸರಬರಾಜು, ನೈರ್ಮಲ್ಯ-ವಸತಿ ಇಲಾಖೆಗಳ ಖಾತೆಗಳನ್ನು ಹಂಚಲಾಗಿದೆ.

ಔಷಧಿ ವ್ಯಾಪಾರಸ್ಥರ ಪ್ರತಿಭಟನೆಗೆ ಉತ್ತಮ ಸ್ಪಂದನೆ





ಅಪರ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸುತ್ತಿರುವುದು. ವಿರಾಜಪೇಟೆಯಲ್ಲಿ ಶಾಪ್ ಬಂದ್ ಆಗಿರುವುದು

ಮಡಿಕೇರಿ, ಮೇ 20–ಔಷಧಿ ವ್ಯಾಪಾರಸ್ಥರ ರಾಷ್ಟ್ರೀಯ ಸಂಘ ಕರೆ ನೀಡಿದ ಬಂದ್‌ಗೆ ಜಿಲ್ಲೆಯಾದ್ಯಂತ ಔಷಧಿ ವ್ಯಾಪಾರಸ್ಥರು ತಮ್ಮ ಅಂಗಡಿ ಗಳನ್ನು ಮುಚ್ಚಿದ್ದರಿಂದಾಗಿ ಬಂದ್‌ಗೆ ಉತ್ತಮ ಸ್ಪಂದನೆ ವ್ಯಕ್ತವಾಗಿದೆ.

ಕೇಂದ್ರ ಸರ್ಕಾರ ತುರ್ತು ಬಳಕೆಗೆ ಆನ್‌ಲೈನ್‌ನಲ್ಲಿ ಔಷಧಿ ವ್ಯಾಪಾರಕ್ಕೆ ನೀಡಿದ ಆದೇಶವನ್ನು ಹಿಂಪಡೆಯಬೇಕು. ತಕ್ಷಣವೇ ಆನ್‌ಲೈನ್ ಔಷಧಿಗಳ ಮಾರಾಟವನ್ನು ಸ್ಥಗಿತಗೊಳಿಸಬೇಕೆಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಜಿಲ್ಲಾ ವ್ಯಾಪ್ತಿಯಲ್ಲಿ 200 ಔಷಧ ವ್ಯಾಪಾರಸ್ಥರು ಕೂಡ ಮಳಿಗೆ ಬಂದ್ ಮಾಡುವ ಮೂಲಕ ಪ್ರತಿಭಟನೆ ನಡೆಸಿದರು. ಬೆಳಗಿನಿಂದ ಎಲ್ಲಾ ಔಷಧಿ ಮಳಿಗೆಗಳು ಬಂದ್ ಆಗಿದ್ದು, ಸಾರ್ವಜನಿಕರಿಗೆ ಸಹಜವಾಗಿಯೇ ಅನಾನುಕೂಲವಾಗಿತ್ತು.

ಔಷಧಿ ಮಳಿಗೆಗಳ ಸಾಂಕೇತಿಕ ಬಂದ್: ಪ್ರತಿಭಟನೆಯ ವ್ಯತಿರಿಕ್ತ ನೇರ ಪರಿಣಾಮ ಸಾರ್ವಜನಿಕರು ಮತ್ತು ರೋಗಿಗಳಿಗೆ ಆಗಬಾರದೆಂಬ ಕಾರಣಕ್ಕೆ ಆಸ್ಪತ್ರೆಗಳ ಒಳಭಾಗದಲ್ಲಿರುವ ಔಷಧಿ ಮಳಿಗೆಗಳಿಗೆ ಬಂದ್‌ನಿಂದ ವಿನಾಯಿತಿ ನೀಡಲಾಗಿತ್ತು. ಹೀಗಾಗಿ ತುರ್ತು ವೈದ್ಯಕೀಯ ಔಷಧ ಸೇವೆಗಳ ಮೇಲೆ ಯಾವುದೇ ಪರಿಣಾಮ ಬೀರಲಿಲ್ಲ

ಜಿಲ್ಲಾ ಔಷಧಿ ವ್ಯಾಪಾರಸ್ಥರ ಸಂಘದ ವತಿಯಿಂದ ಜಿಲ್ಲಾಡಳಿತದ ಮೂಲಕ ಪ್ರಧಾನ ಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು. ಎಡಿಸಿ ಸಹನಾ ಹೆಚ್.ಹಾದಿಮನಿ ಮನವಿ ಸ್ವೀಕರಿಸಿದರು. ಔಷಧಿ ವ್ಯಾಪಾರಸ್ಥರ ಸಂಘದ ಅಧ್ಯಕ್ಷ ಜೀವನ್ ಕುಶಾಲಪ್ಪ, ಉಪಾಧ್ಯಕ್ಷ ಎ.ಕೆ. ವಿನೋದ್, ಜಂಟಿ ಕಾರ್ಯದರ್ಶಿ ವಸಂತ್ ಕುಮಾರ್, ಖಜಾಂಜಿ ಪ್ರಸಾದ್ ಗೌಡ ಹಾಜರಿದ್ದರು.

ವಿರಾಜಪೇಟೆ : ದೇಶಾದ್ಯಂತ ಔಷಧಿ ಅಂಗಡಿಗಳ ಸಂಘ ಕರೆದಿದ್ದ ಬಂದ್‌ಗೆ ಪಟ್ಟಣದಲ್ಲಿ ಮೆಡಿಕಲ್ ಶಾಪ್‌ಗಳನ್ನು ಮುಚ್ಚಿ ಬಂದ್ ಕರೆಗೆ ಸಂಪೂರ್ಣ ಬೆಂಬಲ ನೀಡಿದರು. ಪಟ್ಟಣದಲ್ಲಿ ಮೆಡಿಕಲ್ ಶಾಪ್ ಬಂದ್ ಆಗಿದ್ದರಿಂದಾಗಿ ಜನರು ಔಷಧಿಗೆ ಶಾಪ್‌ಗಳನ್ನು ಹುಡು ಕುವ ಸ್ಥಿತಿ ನಿರ್ಮಾಣವಾಗಿತ್ತು.

ಮೈದಾನದಲ್ಲೇ ಅಡುಗೆ ಮಾಡಿದ ಪ್ರವಾಸಿಗರಿಗೆ 2 ಸಾವಿರ ರೂ. ದಂಡ



ಮಡಿಕೇರಿ, ಮೇ 20–ಗಾಂಧಿ ಮೈದಾನದಲ್ಲಿ ಅಡುಗೆ ಮಾಡಿ ಮೈದಾನದಲ್ಲೇ ಕಸ ಎಸೆದಿದ್ದ ತಮಿಳುನಾಡಿನ ಬಸ್ ಪ್ರಯಾಣಿಕರಿಗೆ ರೂ.2 ಸಾವಿರ ದಂಡ ವಿಧಿಸಲಾಗಿದೆ.

ನಗರದ ಗಾಂಧಿ ಮೈದಾನದ ಗ್ಯಾಲರಿ ಒಳಭಾಗ ಸುಮಾರು 40 ಮಂದಿ ತಮಿಳುನಾಡು ಪ್ರವಾಸಿಗರ ತಂಡವೊಂದು ಮೈದಾನದ ಒಳಗೆ ಗ್ಯಾಸ್ ಸಿಲಿಂಡರ್ ಸ್ಟವ್ ಸೇರಿದಂತೆ ಪಾತ್ರೆಗಳನ್ನು ಬಳಸಿ ಅಡುಗೆ ಮಾಡುತಿದ್ದುದಲ್ಲದೆ ಪ್ಲಾಸ್ಟಿಕ್ ಕವರ್‌ಗಳು, ಊಟ ಮಾಡಿದ್ದ ತಟ್ಟೆ, ಪ್ಲಾಸ್ಟಿಕ್ ಚೀಲಗಳನ್ನು ಮೈದಾನದಲ್ಲಿ ಬಿಸಾಡಿದ್ದರು.

ಸಾರ್ವಜನಿಕರು ನಗರಸಭಾ ಉಪಾಧ್ಯಕ್ಷ ಮಹೇಶ್ ಜೈನಿ ಅವರ ಗಮನ ಸೆಳೆದು ಸೂಕ್ತ ಕ್ರಮಕ್ಕೆ ಒತ್ತಾಯಿಸಿದ್ದರು. ತಕ್ಷಣ ಕಾರ್ಯಪ್ರವರ್ತರಾದ ಉಪಾಧ್ಯಕ್ಷ ಮಹೇಶ್ ಜೈನಿ, ನಗರಸಭಾ ಆರೋಗ್ಯಾಧಿಕಾರಿ ಸುರೇಶ್, ಸಿಬ್ಬಂದಿ ಬೂತ್‌ರಾಜ್ ಮತ್ತು ರಂಗಪ್ಪ ಅವರೊಂದಿಗೆ ಮೈದಾನಕ್ಕೆ ತೆರಳಿ ಪ್ರವಾಸಿಗರಿಂದಲೇ ಪೂರ್ತಿ ಮೈದಾನದ ಕಸ ತೆಗೆಸಿದ್ದಾರೆ. ಬಳಿಕ ಶುಚಿತ್ವದ ಬಗ್ಗೆ ಪ್ರವಾಸಿಗರಿಗೆ ಅರಿವು ಮೂಡಿಸಿ 2ಸಾವಿರ ರೂ. ದಂಡ ವಿಧಿಸಿದರು.

ನಾಡು–ನುಡಿ: ಪ್ರತಿಯೊಬ್ಬರಲ್ಲೂ ಸ್ವಾಭಿಮಾನ ಅಗತ್ಯ



ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ರಮೇಶ್ ಉತ್ತಪ್ಪ ಮಾತನಾಡಿದರು.

> ನಾಡಿನ ಮಕ್ಕಳಿಗೆ ಕನ್ನಡ ಭಾಷೆ ಕಬ್ಬಿಣದ ಕಡಲೆಯೇ, ಪಠ್ಯಪುಸ್ತಕ ದೋಷವೇ, ಕಲಿಸುವಲ್ಲಿ ದೋಷವೇ, ಅಥವಾ ವ್ಯವಸ್ಥೆಯ ದೋಷವೇ ಎಂಬ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ. ಕಾರಣ ಪ್ರಸಕ್ತ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅನುತ್ತೀರ್ಣಗೊಂಡಿರುವ 19 ಸಾವಿರ ವಿದ್ಯಾರ್ಥಿಗಳಲ್ಲಿ 18,678 ವಿದ್ಯಾರ್ಥಿಗಳು ಪ್ರಥಮ ಭಾಷೆ ಕನ್ನಡ ಭಾಷೆಯಲ್ಲಿಯೇ ಅನುತ್ತೀರ್ಣರಾಗಿದ್ದಾರೆ. ನಮ್ಮದೇ ಭಾಷೆ, ನಮ್ಮದೇ ಉಸಿರಾಗಿರುವ ಕನ್ನಡದಲ್ಲಿ ನಮ್ಮ ಮಕ್ಕಳೇ ಅನುತ್ತೀರ್ಣರಾಗುತ್ತಿದ್ದಾರೆ. ಎಂಬುದನ್ನು ನೋಡಿದಾಗ ಇದಕ್ಕೆ ಪರಿಹಾರ ಕಲ್ಪಿಸುವ ಬಗ್ಗೆ ಪ್ರತಿಯೊಬ್ಬರೂ ಅವಲೋಕನ ಮಾಡಬೇಕಾಗಿದೆ. – ರಮೇಶ್ ಉತ್ತಪ್ಪ, ಸಮ್ಮೇಳನಾಧ್ಯಕ್ಷರು.

ಮಡಿಕೇರಿ, ಮೇ 20–ಕನ್ನಡ ಭಾಷೆ, ನಾಡು–ನುಡಿ ಬಗ್ಗೆ ಪ್ರತಿಯೊಬ್ಬರಲ್ಲೂ ಅಭಿಮಾನ ಮತ್ತು ಸ್ವಾಭಿಮಾನ ಇರಬೇಕು ಎಂದು ವಿಧಾನಸಭಾ ಮಾಜಿ ಅಧ್ಯಕ್ಷ ಕೆ.ಜಿ. ಬೋಪಯ್ಯ ಅವರು ತಿಳಿಸಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಕಡಂಗ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದ ಹರದಾಸ ಅಪ್ಪನೆರವಂಡ ಅಪ್ಪಚ್ಚ ಕವಿ ವೇದಿಕೆಯಲ್ಲಿ ಬುಧವಾರ ನಡೆದ ತಾಲೂಕು 12ನೇ ಕನ್ನಡ ಸಾಹಿತ್ಯ ಸಮ್ಮೇಳನ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಕರ್ನಾಟಕದಲ್ಲಿ ಕನ್ನಡ ಭಾಷೆಗೆ ಮೊದಲ ಸ್ಥಾನ. ಆದರೆ ವಾಸ್ತವ ಪರಿಸ್ಥಿತಿ ಹೇಗಿದೆ ಎಂಬುದನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳುವಂತಾಗಬೇಕು. ಗ್ರಾಮೀಣ ಪ್ರದೇಶದಲ್ಲಿ ಇಂದಿಗೂ ಸಹ ಸ್ಥಳೀಯ ಹಾಗೂ ನಾಡಿನ ಭಾಷೆಗಳು ಬಲಯುತವಾಗಿದೆ. ಆದರೆ ನಗರ, ಮಹಾನಗರ ಪ್ರದೇಶಗಳಲ್ಲಿನ ಪರಿಸ್ಥಿತಿ ಬಗ್ಗೆ ಗಂಭೀರವಾಗಿ ಚಿಂತಿಸಬೇಕಿದೆ. ಇತ್ತೀಚಿನ ದಿನಗಳಲ್ಲಿ ಸರ್ಕಾರಿ ಕನ್ನಡ ಶಾಲೆಗಳ ಪರಿಸ್ಥಿತಿ ಹೇಗಿದೆ ಎಂಬ ಬಗ್ಗೆ ಗಮನಹರಿಸಬೇಕಿದೆ ಎಂದರು.

ಸಮ್ಮೇಳನದ ಅಧ್ಯಕ್ಷ ಪತ್ರಕರ್ತ ಐತಿಚಂಡ ರಮೇಶ್ ಉತ್ತಪ್ಪ ಮಾತನಾಡಿ, ಪ್ರವಾಸೋದ್ಯಮದಲ್ಲಿ ಕೊಡಗು ಎರಡನೇ ಗೋವಾ ಆಗುತ್ತಿದೆ ಇದು ಒಳ್ಳೆಯ ಬೆಳವಣಿಗೆ ಅಲ್ಲ. ಇಲ್ಲಿನ ಪರಿಸರ ಮತ್ತು ಜಲಮೂಲಗಳನ್ನು ಉಳಿಸಬೇಕು. ಆ ನಿಟ್ಟಿನಲ್ಲಿ ಕೊಡಗು ಕೊಡಗಾಗಿ ಉಳಿಯುವಲ್ಲಿ ಎಲ್ಲರೂ ಗಮನಹರಿಸಬೇಕಿದೆ. ಕನ್ನಡ ಉಪ ಭಾಷೆಯಾಗಿ ಕನ್ನಡದೊಂದಿಗೆ ಬೆಳೆದು ಬಂದ ಗ್ರಾಮಾಂತರ ಪ್ರದೇಶಗಳಲ್ಲಿ ಇರುವ ಬುಡಕಟ್ಟು ಜನರ ಪರಿಸ್ಥಿತಿ ಬದಲಾಗಿಲ್ಲ. ಇಲ್ಲಿನ ಯರವರ ಸಂಖ್ಯೆ ಕಡಿಮೆಯಾಗುತ್ತಿದೆ. ಯರವರು ಸೇರಿದಂತೆ ಆದಿವಾಸಿ ಮಕ್ಕಳು ಶಿಕ್ಷಣ ಪಡೆದು ಮುಖ್ಯವಾಹಿನಿಗೆ ಬರಬೇಕು. ಕೊಡಗಿನಲ್ಲಿ ವಾಸಿಸುವ ಬುಡಕಟ್ಟು ಜನರಿಗೆ ಸ್ವಂತ ಜಾಗವಿಲ್ಲ. ಇಂದಿಗೂ ಸಹ ನಿವೇಶನಕ್ಕಾಗಿ ಸರ್ಕಾರಕ್ಕೆ ಮನವಿ ಸಲ್ಲಿಸುತ್ತಿದ್ದಾರೆ. ಈ ಬಗ್ಗೆ ಗಂಭೀರವಾಗಿ ಯೋಚಿಸಬೇಕಿದೆ ಎಂದು ಉತ್ತಪ್ಪ ಅಭಿಪ್ರಾಯಪಟ್ಟರು.

ಹಿಂದಿನ ಸಮ್ಮೇಳನಾಧ್ಯಕ್ಷ ಡಾ. ವಿಜಯ್ ಪೂಣಚ್ಚ ತಂಬಂಡ, ಸಾಹಿತ್ಯ ಪರಿಷತ್ತಿನ ಜಿಲ್ಲಾ ಅಧ್ಯಕ್ಷ ಎಂ.ಪಿ.ಕೇಶವ ಕಾಮತ್, ಮಾಜಿ ಅಧ್ಯಕ್ಷ ಟಿ.ಪಿ.ರಮೇಶ್, ಗ್ಯಾರಂಟಿ ಯೋಜನಾ ಅನುಷ್ಠಾನ ಸಮಿತಿ ಜಿಲ್ಲಾ ಅಧ್ಯಕ್ಷ ತೀತಿರ ಧರ್ಮಜ ಉತ್ತಪ್ಪ, ತಾ.ಪಂ. ಇಒ ಶೇಖರ್ ಮಾತನಾಡಿದರು. ಶಾಸಕ ಎ.ಎಸ್.ಪೊನ್ನಣ್ಣರ ಸಂದೇಶವನ್ನು ಬಾಳೆಯಡ ದಿವ್ಯ ಮಂದಪ್ಪ ಓದಿದರು. ತಾಲೂಕು ಮಾಜಿ ಅಧ್ಯಕ್ಷ ಅಂಬೆಕಲ್ಲು ನವೀನ್, ಗೌರವ ಕಾರ್ಯದರ್ಶಿ ಮುನೀರ್ ಅಹಮದ್, ರೇವತಿ ರಮೇಶ್, ಕೋಶಾಧಿಕಾರಿ ಸಂಪತ್ ಕುಮಾರ್, ಸಂಘಟನಾ ಕಾರ್ಯದರ್ಶಿ ವಾಸು ರೈ, ತಾಲೂಕು ಅಧ್ಯಕ್ಷ ಎಸ್.ಡಿ. ವಿಜೇತ್, ರಾಜೇಶ್ ಪದ್ಮನಾಭ, ಹೋಬಳಿ ಅಧ್ಯಕ್ಷ ನೆರವಂಡ ಉಮೇಶ್, ಈರಮಂಡ ಹರಿಣಿ ವಿಜಯ್, ಎ.ಲೋಕೇಶ್ ಕುಮಾರ್ ಇತರರು ಇದ್ದರು.

ಕಣ್ಮನ ಸೆಳೆದ ಮೆರವಣಿಗೆ : ಸಮ್ಮೇಳನಾಧ್ಯಕ್ಷರ ಮೆರವಣಿಗೆಯಲ್ಲಿ ಮಂಗಳ ವಾದ್ಯ, ಚೆಂಡೆವಾದ್ಯ, ಕಳಸ ಹೊತ್ತ ಮಹಿಳೆಯರು, ಸ್ತಬ್ಧಚಿತ್ರಗಳು, ಗೊಂಬೆಗಳು, ಪೂಜಾ ಕುಣಿತ, ಡೊಳ್ಳು ಕುಣಿತ, ವೀರಗಾಸೆ, ಕೊಡಗಿನ ವಾಲಗ, ಬ್ಯಾಂಡ್ ಸೆಟ್, ಶಾಲಾ ಕಾಲೇಜು ವಿದ್ಯಾರ್ಥಿಗಳು, ಸಂಜೀವಿನಿ ಮಹಿಳಾ ಒಕ್ಕೂಟ, ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಘ, ಅಂಗನವಾಡಿ ಸಂಘಟನೆ, ಸ್ತ್ರೀಶಕ್ತಿ ಒಕ್ಕೂಟ, ಆಶಾ ಕಾರ್ಯಕರ್ತೆಯರು, ಶಿಕ್ಷಕರು, ಸಂಘ ಸಂಸ್ಥೆಗಳ ಮತ್ತು ಸಮಾಜಗಳ ಪ್ರತಿನಿಧಿಗಳು, ಆಟೋ ಮತ್ತು ವಾಹನ ಚಾಲಕರ ಸಂಘದವರು, ಎನ್‌ಸಿಸಿ ತಂಡ, ಸ್ಕೌಟ್ಸ್ ಮತ್ತು ಗೈಡ್ಸ್ ಮೆರವಣಿಗೆ ಎಲ್ಲರ ಕಣ್ಮನ ಸೆಳೆಯಿತು. ರಸ್ತೆಯುದ್ದಕ್ಕೂ ವಿವಿಧ ಹೆಸರಿನ 11 ದ್ವಾರಗಳು ಗಮನ ಸೆಳೆದವು.

ನಾಳೆ ಕೋಟೆ ಮಹಾಗಣಪತಿಗೆ ಚಿನ್ನದ ಕಿರೀಟ ಸಮರ್ಪಣೆ

ಮಡಿಕೇರಿ: ಶ್ರೀ ಕೋಟೆ ಮಹಾಗಣಪತಿ ದಸರಾ ಮಂಟಪ ಸಮಿತಿ ವತಿಯಿಂದ ನಗರದ ಇತಿಹಾಸ ಪ್ರಸಿದ್ಧ ಶ್ರೀ ಕೋಟೆ ಮಹಾಗಣಪತಿಗೆ ಚಿನ್ನದ ಕಿರೀಟ ಸಮರ್ಪಣೆ ವಾರ್ಷಿಕೋತ್ಸವ ಮೇ 22ರಂದು ನಡೆಯಲಿದೆ. ಬೆಳಗ್ಗೆ ಶ್ರೀ ಕೋಟೆ ಮಹಾಗಣಪತಿ ದೇವರಿಗೆ ಅಭಿಷೇಕ, 12 ತೆಂಗಿನ ಕಾಯಿಯ ಗಣ ಹೋಮ, 10ಸಹಸ್ರ ದುರ್ವಾಂಕುರ ಸಮರ್ಪಣೆ, ಒಂದು ಸಹಸ್ರ ಎಕ್ಕ ಸಮರ್ಪಣೆಯಾಗಲಿದೆ. ನಂತರ ಪೂರ್ಣಾಹುತಿ, ಮಹಾಮಂಗಳಾರತಿ, ಪ್ರಸಾದ ವಿತರಣೆ ಹಾಗೂ ಮಧ್ಯಾಹ್ನ ಭಕ್ತರಿಗೆ ಅನ್ನಸಂತರ್ಪಣೆಯ ವ್ಯವಸ್ಥೆ ಕಲ್ಪಿಸಲಾಗಿದೆ. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಶ್ರೀ ಕೋಟೆ ಮಹಾಗಣಪತಿ ದಸರಾ ಮಂಟಪ ಸಮಿತಿ ಮನವಿ ಮಾಡಿದೆ.

ಮೇ 27, ಎಸ್.ಎಂ.ಕೃಷ್ಣ ಸೇವಾ ರತ್ನ ಪ್ರಶಸ್ತಿ ಪ್ರದಾನ



ಸಭೆಯಲ್ಲಿ ಚುಂಚಶ್ರೀ ಗೆಳೆಯರ ಬಳಗದ ಅಧ್ಯಕ್ಷ ಪ್ರೊ.ಬಿ.ಕೃಷ್ಣ ಮಾತನಾಡಿದರು.

ಮದ್ದೂರು: ಚುಂಚಶ್ರೀ ಗೆಳೆಯರ ಬಳಗ, ಶ್ರೀ ನಾಡಪ್ರಭು ಕೆಂಪೇಗೌಡ ಒಕ್ಕಲಿಗರ ಸಂಘ, ಟೌನ್ ಕ್ಲಬ್ ಹಾಗೂ ನಾಗರಿಕರ ವೇದಿಕೆ ಮದ್ದೂರು ವತಿಯಿಂದ ಪದ್ಮ ಭೂಷಣ ಡಾ.ಎಸ್.ಎಂ.ಕೃಷ್ಣ 94ನೇ ಜನ್ಮ ದಿನೋತ್ಸವ ಮತ್ತು ಸಂಸ್ಕರಣೆ ಅಂಗವಾಗಿ ಡಾ.ಎಸ್.ಎಂ.ಕೃಷ್ಣ ಆಡಳಿತ ಶ್ರೀ ಸೇವಾ ರತ್ನ ಪ್ರಶಸ್ತಿ ಪ್ರದಾನ ಮತ್ತು ತಾಲೂಕಿನ ಜನಪ್ರತಿನಿಧಿಗಳು ಹಾಗೂ ಶಿಕ್ಷಣ ಒಂದು ಮುನ್ನೋಟ ಎಂಬ ಗ್ರಂಥ ಲೋಕಾರ್ಪಣೆ ಸಮಾರಂಭವನ್ನು ಮೇ.27ರಂದು ಹಮ್ಮಿಕೊಂಡಿರುವುದಾಗಿ ಚುಂಚಶ್ರೀ ಗೆಳೆಯರ ಬಳಗದ ಅಧ್ಯಕ್ಷ ಪ್ರೊ.ಬಿ.ಕೃಷ್ಣ ತಿಳಿಸಿದರು.

ನಗರದ ಟೌನ್ ಕ್ಲಬ್‌ನಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು ಮೇ 27ರ ಬುಧವಾರ ಬೆಳಗ್ಗೆ 11 ಗಂಟೆಗೆ ನಗರದ ಮಹಿಳಾ ಸರ್ಕಾರಿ ಕಾಲೇಜು ಆವರಣದಲ್ಲಿ ಮಾಜಿ ಸಿಎಂ ಎಸ್.ಎಂ.ಕೃಷ್ಣ ಜನ್ಮ ದಿನೋತ್ಸವ ಮತ್ತು ಸಂಸ್ಮರಣೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಅಭಿಮಾನಿಗಳು, ಸಾರ್ವಜನಿಕರು, ಸಂಘ ಸಂಸ್ಥೆಯ ಪದಾಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಕೋರಿದರು.

ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನದ ಮಠದ ಪೀಠಾಧ್ಯಕ್ಷ ಶ್ರೀ ಡಾ.ನಿಶ್ಚಲಾನಂದನಾಥ ಶ್ರೀಗಳು ದಿವ್ಯ ಸಾನಿಧ್ಯ ವಹಿಸುವರು. ಗೃಹ ಸಚಿವ ಡಾ.ಜಿ.ಪರಮೇಶ್ವರ್ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದು, ಶಾಸಕ ಕೆ.ಎಂ.ಉದಯ್ ಅವರಿಗೆ ಡಾ.ಎಸ್.ಎಂ.ಕೃಷ್ಣ ಆಡಳಿತ ಶ್ರೀ ಸೇವಾ ರತ್ನ ಪ್ರಶಸ್ತಿ ಪ್ರಶಸ್ತಿ ಪ್ರದಾನ ಮಾಡಲಾಗುವುದು, ಶಾಸಕ ದಿನೇಶ್ ಗೂಳಿಗೌಡ ಪ್ರಶಸ್ತಿ ಪುರಸ್ಕೃತರನ್ನು ಕುರಿತು ಅಭಿನಂದನಾ ಮಾತುಗಳಾನ್ನಾಡಲಿದ್ದು, ಶಾಸಕ ಕೆ.ಎಂ.ಉದಯ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಸಭೆಯಲ್ಲಿ ಜಿಪಂ ಮಾಜಿ ಅಧ್ಯಕ್ಷ ಕಂಠಿ ಸುರೇಶ್, ನಾಡಪ್ರಭು ಕೆಂಪೇಗೌಡ ಒಕ್ಕಲಿಗರ ಸಂಘದ ಅಧ್ಯಕ್ಷ ವಿ.ಟಿ ರವಿಕುಮಾರ್. ಮಾಜಿ ಅಧ್ಯಕ್ಷ ಡಿ.ಪಿ.ಶಿವಪ್ಪ ಪದಾಧಿಕಾರಿಗಳಾದ ಬಿ.ವಿ.ಶಂಕರೇಗೌಡ, ಎಂ.ಎನ್. ಕೃಷ್ಣ, ಶಿವಲಿಂಗಯ್ಯ, ಹರೀಶ್, ಸುರೇಶ್ ಇತರರು ಹಾಜರಿದ್ದರು.

ಜೂಜಾಟ: 13 ಮಂದಿ ಬಂಧನ

ಹಲಗೂರು: ಪ್ರಸಿದ್ಧ ಪ್ರವಾಸಿ ತಾಣವಾದ ಮುತ್ತತ್ತಿಯಲ್ಲಿ ಜೂಜಾಟದಲ್ಲಿ ತೊಡಗಿದ್ದ 13 ಮಂದಿಯನ್ನು ಹಲಗೂರು ಪೊಲೀಸರು ಬಂಧಿಸಿ, ಅವರಿಂದ 61 ಸಾವಿರ ರೂ. ನಗದು ವಶಪಡಿಸಿಕೊಂಡಿದ್ದಾರೆ.

ಮಂಗಳವಾರ ರಾತ್ರಿ ಖಚಿತ ಮಾಹಿತಿಯ ಮೇರೆಗೆ ಹಲಗೂರು ಪೊಲೀಸ್ ವೃತ್ತ ನಿರೀಕ್ಷಕ ಬಿ.ಎಸ್.ಶ್ರೀಧರ್ ಅವರ ಮಾರ್ಗದರ್ಶನದಲ್ಲಿ, ಹಲಗೂರು ಪೊಲೀಸ್ ಠಾಣೆಯ ಪಿಎಸ್‌ಐ ಲೋಕೇಶ್ ನೇತೃತ್ವದಲ್ಲಿ ದಾಳಿ ನಡೆಸಲಾಯಿತು. ಆರೋಪಿಗಳನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಲಾಗಿದೆ.

ಬಾರಿನಲ್ಲಿ ಕುಡಿಯುತ್ತಿದ್ದ ವೇಳೆ ಗಲಾಟೆ: ಜಗಳ ಬಿಡಿಸಿದವನನ್ನೇ ಹತ್ಯೆಗೈದ ಗುಂಪು



ಸುನೀಲ್

ಮದ್ದೂರು: ಬಾರ್‌ನಲ್ಲಿ ಕುಡಿಯುವ ವೇಳೆ ನಡೆಯುತ್ತಿದ್ದ ಜಗಳ ಬಿಡಿಸಿದ ಗುಂಪಿನ ಯುವಕನನ್ನು ಮಾರಕಾಯುಧಗಳಿಂದ ಕೊಚ್ಚಿ ಕೊಲೆ ಮಾಡಿರುವ ಘಟನೆ ತಾಲೂಕಿನ ಕೆ.ಹೊನ್ನಲಗೆರೆಯಲ್ಲಿ ನಡೆದಿದೆ.

ತಾಲೂಕಿನ ಚುಂಚಗಹಳ್ಳಿ ಗ್ರಾಮದ ಸುನೀಲ್ (29) ಎಂಬ ಯುವಕನೇ ಕೊಲೆಯಾದ ವ್ಯಕ್ತಿ. ಆತ ತನ್ನ ಸ್ನೇಹಿತರಾದ ಸತೀಶ್, ಸಿದ್ದರಾಜು ಅವರೊಂದಿಗೆ ಮಂಗಳವಾರ ರಾತ್ರಿ 9.30ರ ವೇಳೆಗೆ ಕೆ.ಹೊನ್ನಲಗೆರೆ ಗ್ರಾಮದ ದೀಪ ಬಾರ್‌ನಲ್ಲಿ ಕುಡಿಯುತ್ತಿದ್ದ ವೇಳೆ ಅಜ್ಜಹಳ್ಳಿ ಗ್ರಾಮದ ನಿಶಾಂತ್ ಮತ್ತು ಆತನ ಸ್ನೇಹಿತರು ಬಾರ್‌ನ ಕ್ಯಾಷಿಯರ್ ಜೊತೆಗೆ ಜಗಳವಾಡಿಕೊಂಡು ಕೈ ಕೈ ಮಿಲಾಯಿಸುತ್ತಿದ್ದ ವೇಳೆ ಇದನ್ನು ಗಮನಿಸಿದ ಸುನೀಲ್ ಮತ್ತು ಆತನ ಸ್ನೇಹಿತರು ಮಧ್ಯೆ ಪ್ರವೇಶಿಸಿ ಜಗಳ ಬಿಡಿಸಿದ್ದಾರೆ.

ಬಳಿಕ ಸುನಿಲ್ ಹಾಗೂ ನಿಶಾಂತ್ ಮಧ್ಯೆಯೇ ಜಗಳ ಶುರುವಾಗಿದೆ. ಬಳಿಕ ಸುನೀಲ್ ಮತ್ತು ಆತನ ಸ್ನೇಹಿತರು ಬೈಕ್‌ನಲ್ಲಿ ರಾತ್ರಿ 10.30ರಲ್ಲಿ ತಮ್ಮ ಚುಂಚಗಳ್ಳಿಗೆ ಗ್ರಾಮಕ್ಕೆ ತೆರಳುತ್ತಿದ್ದಾಗ ಕೆ.ಹೊನ್ನಲಗೆರೆಯ ಬಳಿಯ ಡಾ.ಬಿ.ಆರ್.ಅಂಬೇಡ್ಕರ್ ಭವನದ ಮುಂಭಾಗ ಕಾರಿನಲ್ಲಿ ಬಂದ ನಿಶಾಂತ್ ಬೈಕ್ ಅನ್ನು ಅಡ್ಡಗಟ್ಟಿ ಬೈಕ್‌ನ ಹಿಂಬದಿ ಕುಳಿತಿದ್ದ ಸುನೀಲ್ ಕುತ್ತಿಗೆಗೆ ಮಾರಕಾಸ್ತ್ರದಿಂದ ದಾಳಿ ನಡೆಸಿದ ಪರಿಣಾಮ ಸುನೀಲ್ ಕುತ್ತಿಗೆ ಭಾಗಕ್ಕೆ ಗಂಭೀರವಾಗಿ ಗಾಯಗೊಂಡಿದ್ದಾನೆ.

ತಕ್ಷಣವೇ ಸ್ನೇಹಿತರು ಗ್ರಾಮದ ಯುವಕರಿಗೆ ವಿಷಯ ತಿಳಿಸಿದ್ದಾರೆ. ನಂತರ ಮದ್ದೂರಿನ ಪೊಲೀಸ್ ಠಾಣೆಯ ಸಿಪಿಐ ನವೀನ್ ಕುಮಾರ್ ಹಾಗೂ ಸಿಬ್ಬಂದಿ ಗಾಯಾಳು ಸುನೀಲ್‌ನನ್ನು ಆತನ ಸ್ನೇಹಿತರ ಸಹಕಾರದಿಂದ ಮಂಡ್ಯದ ಮಿಮ್ಸ್ ಆಸ್ಪತ್ರೆಗೆ ದಾಖಲಿಸಿದ್ದಾರೆ. ಆದರೆ ಗಂಭೀರವಾಗಿ ಗಾಯಗೊಂಡಿದ್ದ ಸುನೀಲ್ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾರೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶೋಭಾರಾಣಿ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ತಿಮ್ಮಯ್ಯ, ಡಿವೈಎಸ್‌ಪಿ ಯಶವಂತ್ ಕುಮಾರ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ, ಪ್ರಕರಣ ದಾಖಲಿಸಿಕೊಂಡಿರುವ ಮದ್ದೂರು ಪೊಲೀಸರು ಆರೋಪಿಗಳ ಪತ್ತೆ ಕಾರ್ಯ ಕೈಗೊಂಡಿದ್ದಾರೆ ಹಾಗೂ ಈಗಾಗಲೇ ಕೊಲೆ ಆರೋಪಿಗಳ ಪತ್ತೆಗೆ ವಿಶೇಷ ತಂಡ ರಚನೆ ಮಾಡಲಾಗಿದೆ.


ಹತ್ಯೆಗೆ ನಿಖರ ಕಾರಣ ತನಿಖೆಯಿಂದ ತಿಳಿಯಬೇಕಾಗಿದ್ದು, ಕೊಲೆಯಾದ ಯುವಕ ಸುನೀಲ್ ಬೆಂಗಳೂರಿನ ಬಾರ್‌ವೊಂದರಲ್ಲಿ ಕ್ಯಾಶಿಯರ್ ಆಗಿ ಕೆಲಸ ಮಾಡಿಕೊಂಡಿದ್ದ. ತನ್ನ ಸ್ವಗ್ರಾಮ ಚುಂಚಗಹಳ್ಳಿ ಇತ್ತೀಚೆಗೆ ನಡೆದಿದ್ದ ಹಬ್ಬಕ್ಕೆ ಬಂದು ಸ್ವಲ್ಪ ದಿನ ಇಲ್ಲೆಯೇ ಇದ್ದರು ಎನ್ನಲಾಗಿದ್ದು, ಹತ್ಯೆಯಾದ ಯುವಕನ ಪತ್ನಿ 6 ತಿಂಗಳ ಗರ್ಭಿಣಿಯಾಗಿದ್ದು ಮದುವೆಯಾಗಿ ಒಂದು ವರ್ಷವಷ್ಟೇ ಆಗಿತ್ತು ಎನ್ನಲಾಗಿದೆ.

ಇಂದು ಉಪ ಲೋಕಾಯುಕ್ತರಿಂದ ದೂರುಗಳ ವಿಚಾರಣೆ, ವಿಲೇವಾರಿ ಕಾರ್ಯಕ್ರಮ

ಮಂಡ್ಯ: ಗೌರವಾನ್ವಿತ ಉಪಲೋಕಾಯುಕ್ತರಾದ ನ್ಯಾಯಮೂರ್ತಿಗಳಾದ ಶ್ರೀ ಬಿ.ವೀರಪ್ಪ ಅವರು ಮಂಡ್ಯ ಜಿಲ್ಲೆಗೆ ಮೇ 21 ಮತ್ತು 22 ರಂದು ಭೇಟಿ ನೀಡಲಿದ್ದು ಮಂಡ್ಯ ನಗರದ ಅಂಬೇಡ್ಕರ್ ಭವನದಲ್ಲಿ ಬೆಳಿಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಈಗಾಗಲೇ ದಾಖಲಾಗಿರುವ ದೂರುಗಳ ವಿಚಾರಣೆ ಹಾಗೂ ವಿಲೇವಾರಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿರುತ್ತದೆ.

ಈ ಸಂದರ್ಭದಲ್ಲಿ ಮಂಡ್ಯ ಮತ್ತು ಮಳವಳ್ಳಿ ತಾಲೂಕಿಗೆ ಸಂಬಂಧಿಸಿದ ದೂರುಗಳನ್ನು ಮಾತ್ರ ವಿಚಾರಣೆಗೆ ಇಟ್ಟುಕೊಳ್ಳಲಾಗಿದ್ದು, ಈಗಾಗಲೇ ಲೋಕಾಯುಕ್ತ ಕಚೇರಿಯಿಂದ ನೋಟೀಸ್ ಜಾರಿ ಮಾಡಲಾಗಿರುವ ದೂರುದಾರರು ಮಾತ್ರ ವಿಚಾರಣೆಗೆ ಹಾಜರಾಗಲು ಅವಕಾಶವಿರುತ್ತದೆ. ಸಾರ್ವಜನಿಕರ ಹೊಸ ದೂರುಗಳನ್ನು ಈ ಸಂದರ್ಭದಲ್ಲಿ ಸ್ವೀಕರಿಸುವುದಿಲ್ಲ. ಯಾವುದೇ ದೂರುಗಳಿದ್ದಲ್ಲಿ ಸಾರ್ವಜನಿಕರು ಎಂದಿನಂತೆ ಪೊಲೀಸ್ ಅಧೀಕ್ಷಕರ ಕಛೇರಿ, ಕರ್ನಾಟಕ ಲೋಕಾಯುಕ್ತ, ಮಂಡ್ಯ ಇಲ್ಲಿ ನಿಗಧಿತ ನಮೂನೆಯಲ್ಲಿ ಸಲ್ಲಿಸಬಹುದಾಗಿರುತ್ತದೆ ಎಂದು ಕರ್ನಾಟಕ ಲೋಕಾಯುಕ್ತ ಪೊಲೀಸ್ ಅಧೀಕ್ಷಕರು ಎಸ್.ಸುರೇಶ್ ಬಾಬು ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಸ್ ಡಿಕ್ಕಿ: ತಿಥಿ ಕಾರ್ಯಕ್ಕೆ ಪದಾರ್ಥಗಳನ್ನು ತರಲು ಹೋಗುತ್ತಿದ್ದ ಬೈಕ್ ಸವಾರ ಸಾವು



ಕಿಕ್ಕೇರಿ: ಬೈಕಿಗೆ ಬಸ್ ಡಿಕ್ಕಿ ಹೊಡೆದ ಪರಿಣಾಮ ತಿಥಿ ಕಾರ್ಯಕ್ಕೆ ಬೇಕಾದ ವಸ್ತುಗಳನ್ನು ತರಲು ಹೋಗುತ್ತಿದ್ದ ಬೈಕ್ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಹೋಬಳಿಯ ಚಿಕ್ಕರಳೆ ಗೇಟ್ ಬಳಿಯ ರಾಜ್ಯ ಹೆದ್ದಾರಿಯಲ್ಲಿ ಸಂಭವಿಸಿದೆ.

ಸಂತೆಬಾಚಹಳ್ಳಿ ಹೋಬಳಿಯ ಬೆಡದಹಳ್ಳಿ ಗ್ರಾಮದ ಬಿ.ಕೆ.ರೇವಣ್ಣ(55) ಎಂಬುವರೇ ದುರಂತದಲ್ಲಿ ಸಾವನ್ನಪ್ಪಿದವರು. ರೇವಣ್ಣ ಅವರು ತಮ್ಮ ಮಗಳಾದ ದ್ರಾಕ್ಷಾಯಿಣಿ ಕಿಕ್ಕೇರಿ ಹೋಬಳಿಯ ಚೌಡೇನಹಳ್ಳಿ ಗ್ರಾಮದ ಕೇಶವಮೂರ್ತಿಗೆ ವಿವಾಹ ಮಾಡಿಕೊಟ್ಟಿದ್ದರು. ಅಳಿಯ ಕೇಶವಮೂರ್ತಿ ತಾಯಿ ಮಂಜಮ್ಮ ಇತ್ತೀಚೆಗಷ್ಟೇ ಮೃತರಾಗಿದ್ದರು. ಇವರ ತಿಥಿ ಕಾರ್ಯದ ಪೂರ್ವ ಸಿದ್ಧತೆಗಾಗಿ ಬೆಡದಹಳ್ಳಿ ಗ್ರಾಮದಿಂದ ಚೌಡೇನಹಳ್ಳಿ ಗ್ರಾಮಕ್ಕೆ ಬುಧವಾರ ಬೆಳಗ್ಗೆ ಮೋಟಾರ್ ಬೈಕ್‌ನಲ್ಲಿ ತೆರಳಿದ್ದರು. ಅಲ್ಲಿಂದ ಕಾರ್ಯಕ್ಕೆ ಬೇಕಾದ ಪದಾರ್ಥಗಳನ್ನು ತರಲು ಕಿಕ್ಕೇರಿಗೆ ಬೈಕ್‌ನಲ್ಲಿ ಹೋಗಿದ್ದರು.

ಕಿಕ್ಕೇರಿಗೆ ಹೋಗುತ್ತಿದ್ದಾಗ ಕೆ.ಆರ್.ಪೇಟೆ ಮಾರ್ಗವಾಗಿ ಮೈಸೂರಿಂದ ಹೊಸಪೇಟೆಗೆ ಹೋಗುತ್ತಿದ್ದ ಕರ್ನಾಟಕ ರಾಜ್ಯ ಸಾರಿಗೆ ಬಸ್ ಚಿಕ್ಕರಳೆ ಗೇಟ್ ಬಳಿಯ ರಾಜ್ಯ ಹೆದ್ದಾರಿಯಲ್ಲಿ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಬೈಕ್ ಸವಾರ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಮೃತರ ಪತ್ನಿ ಜಾನಕಮ್ಮ ಕಿಕ್ಕೇರಿ ಪೊಲೀಸರಿಗೆ ದೂರು ನೀಡಿದ್ದಾರೆ.

ಪ್ರಕರಣವನ್ನು ಕಿಕ್ಕೇರಿ ಪೊಲೀಸರು ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಕೊಂತಯ್ಯ ನಿಧನ



ಹಲಗೂರು: ನಿಟ್ಟೂರು ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಮರಿಸ್ವಾಮಿ ಅವರ ತಂದೆಯವರಾದ ಕೊಂತಯ್ಯ ಅಲಿಯಾಸ್ ಕಾಳಯ್ಯ (75) ನಿಧನರಾಗಿದ್ದಾರೆ. ದಿವಂಗತರು ಇಬ್ಬರು ಪುತ್ರರು ಹಾಗೂ ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮವಾದ ನಿಟ್ಟೂರು ಗ್ರಾಮದಲ್ಲಿ ಗುರುವಾರ ಮಧ್ಯಾಹ್ನ 12 ಗಂಟೆಗೆ ನೆರವೇರಲಿದೆ.

ಇಂದಿನಿಂದ ಗ್ರಾಮಾಂತರ ಬಸವ ಜಯಂತೋತ್ಸವ

ಪೂಜ್ಯದ್ವಯರ ಸಂಸ್ಮರಣಾ ಮಹೋತ್ಸವ



ಚನ್ನಬಸವ ಸ್ವಾಮೀಜಿ ಮಾತನಾಡುತ್ತಿರುವುದು.

ಚಾಮರಾಜನಗರ, ಮೇ 20– ನಗರದ ಸಿದ್ದಮಲ್ಲೇಶ್ವರ ವಿರಕ್ತಮಠ ಹಾಗೂ ಭಕ್ತಾದಿಗಳ ಸಹಕಾರದೊಂದಿಗೆ ಜಿಲ್ಲಾ ಕೇಂದ್ರ ಚಾಮರಾಜನಗರದಲ್ಲಿ ಮೇ.21 ಹಾಗೂ ಮೇ.22ರಂದು ಗ್ರಾಮಾಂತರ ಬಸವ ಜಯಂತೋತ್ಸವ, ಪೂಜ್ಯದ್ವಯರ ಸಂಸ್ಮರಣಾ ಮಹೋತ್ಸವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಚಾಮರಾಜನಗರ ಸಿದ್ದಮಲ್ಲೇಶ್ವರ ವಿರಕ್ತ ಮಠದ ಮಠಾಧೀಶರಾದ ಚನ್ನಬಸವ ಸ್ವಾಮೀಜಿ ಹೇಳಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಗ್ರಾಮಾಂತರ ಬಸವ ಜಯಂತೋತ್ಸವ, ಪೂಜ್ಯದ್ವಯರ ಸಂಸ್ಮರಣಾ ಮಹೋತ್ಸವ ಮೇ21(ಗುರುವಾರ)ದಂದು ಆರಂಭವಾಗಲಿವೆ. ರಾತ್ರಿ 8ಕ್ಕೆ ಸಿದ್ದಮಲ್ಲೇಶ್ವರ ಕಲಾಬಳಗದಿಂದ ಪ್ರಭುಲಿಂಗಲೀಲೆ ನಾಟಕ ಪ್ರದರ್ಶನಗೊಳ್ಳಲಿದೆ.

ಮೇ 22 (ಶುಕ್ರವಾರ) ಬೆಳಗ್ಗೆ 5ಕ್ಕೆ ಸಿದ್ದಬಸವರಾಜ ಸ್ವಾಮಿಗಳ ಗದ್ದುಗೆಗೆ ಬಿಲ್ವಾರ್ಚನೆ, 6ಕ್ಕೆ ಷಟ್‌ಸ್ಥಲ ಧ್ವಜಾರೋಹಣ. 7ಕ್ಕೆ ಇಷ್ಟಲಿಂಗಪೂಜೆ, 10ಕ್ಕೆ ಪ್ರವಚನ, ಮಧ್ಯಾಹ್ನ 2ಕ್ಕೆ ವಚನಗಾಯನ ಭಕ್ತಿಗೀತೆಗಳ ಗಾಯನ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದರು.

ಎರಡು ದಿನಗಳ ಗ್ರಾಮಾಂತರ ಬಸವ ಜಯಂತೋತ್ಸವ ಕಾರ್ಯಕ್ರಮದಲ್ಲಿ 20ರಿಂದ 30 ಸಾವಿರ ಮಂದಿ ಭಕ್ತಾದಿಗಳು ಭಾಗವಹಿಸುವ ನಿರೀಕ್ಷೆಯಿದ್ದು, ನಿರಂತರದಾಸೋಹ ವ್ಯವಸ್ಥೆ ಮಾಡಲಾಗಿದೆ ಎಂದರು.

ಬಸವಬಳಗಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಪಿ.ಮರಿಸ್ವಾಮಿ ಮಾತನಾಡಿ, ನಗರದ ಸಿದ್ದಮಲ್ಲೇಶ್ವರವಿರಕ್ತಮಠ ಸಹಕಾರದೊಂದಿಗೆ ಮೇ.22 ರಂದು ಬಸವ ಜಯಂತಿಯ ಅಂಗವಾಗಿ ಬಸವಣ್ಣನವರ ಭಾವಚಿತ್ರದ ಜಾನಪದ ಕಲಾತಂಡಗಳ ಮೆರವಣಿಗೆಗೆ ನಗರದ ಜಿಲ್ಲಾಡಳಿತ ಭವನದ ಬಸವೇಶ್ವರ ಪುತ್ಥಳಿಬಳಿ ಸುತ್ತೂರು ಮಠಾಧೀಶರಾದ ಶಿವರಾತ್ರಿದೇಶಿ ಕೇಂದ್ರ ಸ್ವಾಮೀಜಿ ಚಾಲನೆ ನೀಡುವರು.

ಇದೇ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಬಸವೇಶ್ವರ ಪುತ್ಥಳಿಗೆ ಪುಷ್ಪಾರ್ಚನೆ ನೆರವೇರಿಸುವರು. ಹಾಲಿ ಶಾಸಕರು, ಮಾಜಿ ಶಾಸಕರು ಭಾಗವಹಿಸುವರು ಎಂದರು. ತಮ್ಮ ತಮ್ಮ ಗ್ರಾಮಗಳಿಂದ ಬರುವವರು ಟ್ರಾಕ್ಟರ್‌ಗಳಲ್ಲಿ ಬಸವೇಶ್ವರ ಭಾವಚಿತ್ರ ಗಳನ್ನು ಅಳವಡಿಸಿಕೊಂಡು, ಮೆರವಣಿಗೆ ಯಲ್ಲಿ ಭಾಗವಹಿಸುವಂತೆ ಮನವಿ ಮಾಡಿದರು.

ಕಾರ್ ರ್‍ಯಾಲಿಗೆ ಚಾಲನೆ ನೀಡಿದ ಚನ್ನಬಸವಸ್ವಾಮೀಜಿ



ಚಾಮರಾಜನಗರ, ಮೇ 20– ನಗರದ ಸಿದ್ದಮಲ್ಲೇಶ್ವರವಿರಕ್ತಮಠ ಸಹಕಾರದೊಂದಿಗೆ ಮೇ 22 ರಂದು ಬಸವಜಯಂತಿಯ ಅಂಗವಾಗಿ ನಡೆಯಲಿರುವ ಬಸವಣ್ಣನವರ ಭಾವಚಿತ್ರದ ಜಾನಪದಕಲಾತಂಡಗಳ ಮೆರವಣಿಗೆ ಅಂಗವಾಗಿ ಬಸವಬಳಗಗಳ ಒಕ್ಕೂಟದ ವತಿಯಿಂದ ಕಾರುಗಳ ಮೂಲಕ ಪ್ರಚಾರ ನಡೆಸುವ ಕಾರ್‌ರ್‍ಯಾಲಿಗೆ ಚಾಲನೆ ನೀಡಲಾಯಿತು.


ಮೊದಲಿಗೆ ನಗರದ ಜಿಲ್ಲಾಡಳಿತಭವನದ ಬಸವೇಶ್ವರ ಪುತ್ಥಳಿಗೆ ಸಿದ್ದಮಲ್ಲೇಶ್ವರ ವಿರಕ್ತಮಠದ ಮಠಾಧೀಶರಾದ ಚನ್ನಬಸವಸ್ವಾಮೀಜಿ ಮಾಲಾರ್ಪಣೆ ಮಾಡುವ ಮೂಲಕ ಕಾರ್‌ರ್‍ಯಾಲಿಗೆ ಚಾಲನೆ ನೀಡಿದರು.

ಇದೇವೇಳೆ ಅವರು ಮಾತನಾಡಿ. ಮೇ 21 ಹಾಗೂ ಮೇ 22ರಂದು ಗ್ರಾಮಾಂತರ ಬಸವ ಜಯಂತೋತ್ಸವ, ಪೂಜ್ಯದ್ವಯರ ಸಂಸ್ಮರಣಾಮಹೋತ್ಸವ ಹಾಗೂ ಬಸವಬಳಗಗಳ ಒಕ್ಕೂಟದ ವತಿಯಿಂದ ಹಮ್ಮಿಕೊಂಡಿರುವ ಬಸವೇಶ್ವರರ ಭಾವಚಿತ್ರದ ಮೆರವಣಿಗೆಯಲ್ಲಿ ಜಿಲ್ಲೆಯ ಬಸವಾಭಿಮಾನಿಗಳು, ಸಂಘಸಂಸ್ಥೆಗಳ ಮುಖಂಡರು, ಪದಾಧಿಕಾರಿಗಳು ಭಾಗವಹಿಸುವಂತೆ ಮನವಿ ಮಾಡಿದರು.

ಜಿಲ್ಲಾಡಳಿತಭವನದಿಂದ ಆರಂಭವಾದ ಕಾರ್ ರ್‍ಯಾಲಿ ನಗರದ ಪ್ರಮುಖ ಬೀದಿಗಳಲ್ಲಿ ಸಾಗಿ, ಸಾರ್ವಜನಿಕರಿಗೆ ಕರಪತ್ರ ಹಂಚುವ ಮೂಲಕ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಬಸವಬಳಗಗಳ ಒಕ್ಕೂಟದಿಂದ ಮನವಿ ಮಾಡಲಾಯಿತು.

ಪ್ರಭುದೇವರಾಜೇಅರಸ್ ಜಾನಪದ ಪರಂಜ್ಯೋತಿ ಪ್ರಶಸ್ತಿಗೆ ಡಾ.ಮೈಸೂರು ಗುರುರಾಜು ಆಯ್ಕೆ

ಮೇ 24 ಚಾಮರಾಜನಗರ ಜಿಲ್ಲಾ ಜಾನಪದ ಉತ್ಸವ



ಚಾಮರಾಜನಗರ: ಕರ್ನಾಟಕ ಜಾನಪದ ಪರಿಷತ್ತು ಚಾಮರಾಜ ನಗರ ಜಿಲ್ಲಾ ಘಟಕ ಕೊಡ ಮಾಡುವ 2026ರ ಪ್ರಭುದೇವರಾಜೇಅರಸ್ ಜಾನಪದ ಪರಂಜ್ಯೋತಿ ಪ್ರಶಸ್ತಿಗೆ ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯರು ಹಾಗೂ ಪ್ರಸಿದ್ಧ ನೀಲಗಾರರಾದ ಡಾ.ಮೈಸೂರು ಗುರುರಾಜು ಆಯ್ಕೆ ಆಗಿದ್ದಾರೆ.

ಬೆಂಗಳೂರು ಕರ್ನಾಟಕ ಜಾನಪದ ಪರಿಷತ್ತು ಮತ್ತು ಕರ್ನಾಟಕ ಜಾನಪದ ಪರಿಷತ್ತು ಚಾಮರಾಜನಗರ ಜಿಲ್ಲಾ ಘಟಕ ಹಾಗೂ ಚಾಮರಾಜನಗರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಸಹಯೋಗದಲ್ಲಿ ಮೇ 24ರಂದು ಭಾನುವಾರ ಬೆಳಗ್ಗೆ 10.30 ಗಂಟೆಗೆ ಇಲ್ಲಿನ ಡಾ.ರಾಜಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಏರ್ಪಡಿಸಿರುವ ಚಾಮರಾಜನಗರ ಜಿಲ್ಲಾ ಜಾನಪದ ಉತ್ಸವ–2026 ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಪ್ರಶಸ್ತಿಯು 5000 ರೂ. ನಗದು, ಪ್ರಶಸ್ತಿ ಫಲಕ ಒಳ ಗೊಂಡಿರುತ್ತದೆ. ಕರ್ನಾಟಕ ಜಾನಪದ ಪರಿಷತ್ತಿನ ರಾಜ್ಯಾಧ್ಯಕ್ಷರು ಹಾಗೂ ಹಂಪಿ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಪ್ರೊ.ಹಿ.ಚಿ. ಬೋರಲಿಂಗಯ್ಯ ಮತ್ತು ಮಾನಸ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಡಾ. ದತ್ತೇಶ್ ಕುಮಾರ್ ಪ್ರಶಸ್ತಿ ಪ್ರದಾನ ನಡೆಸಿಕೊಡುವರು ಎಂದು ಕರ್ನಾಟಕ ಜಾನಪದ ಪರಿಷತ್ತಿನ ಜಿಲ್ಲಾಧ್ಯಕ್ಷ ಸಿಎಂ ನರಸಿಂಹ ಮೂರ್ತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ಪುಟ್ಟತಾಯಮ್ಮ ನಿಧನ



ಗುಂಡ್ಲುಪೇಟೆ, ಮೇ 20– ಪಟ್ಟಣದ ಪುರಸಭೆ ಮಾಜಿ ಅಧ್ಯಕ್ಷೆ, ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷೆಯಾಗಿದ್ದ ಪಟ್ಟಣದ ನಿವಾಸಿ ಪುಟ್ಟತಾಯಮ್ಮ(89) ಬುಧವಾರ ನಿಧನರಾದರು.

ತಾಲೂಕು ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಮೃತರಿಗೆ ಓರ್ವ ಪುತ್ರ ಜವಾಹರ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ರಾಜಶೇಖರ ಹಾಗೂ ಓರ್ವ ಪುತ್ರಿ ಇದ್ದಾರೆ. ಅಂತ್ಯಕ್ರಿಯೆ ಪಟ್ಟಣದ ಹಿಂದೂರುದ್ರಭೂಮಿಯಲ್ಲಿ ನೆರವೇರಿತು.

ಸಂತಾಪ: ಪುಟ್ಟತಾಯಮ್ಮ ಅವರ ನಿಧನಕ್ಕೆ ಶಾಸಕ ಎಚ್.ಎಮ್.ಗಣೇಶ್ ಪ್ರಸಾದ್, ಮಾಜಿ ಶಾಸಕ ಸಿ.ಎಸ್.ನಿರಂಜನ್ ಕುಮಾರ್, ಮುಖಂಡರಾದ ನಂಜುಂಡಪ್ರಸಾದ್, ಹೊಸೂರು ಹುಚ್ಚೇಗೌಡ ಸೇರಿದಂತೆ ಹಲವು ಗಣ್ಯರು ಸಂತಾಪ ಸೂಚಿಸಿದ್ದಾರೆ.

ರೋಟರಿ ಸಂಸ್ಥೆಯಿಂದ ಶ್ರೀಅನುಲಕ್ಷ್ಮೀ ಸೇವಾ ಆಶ್ರಮಕ್ಕೆ ವಾಷಿಂಗ್ ಮಿಷನ್, ಬೀರು, ರ್‍ಯಾಕ್ ಕೊಡುಗೆ

ಚಾಮರಾಜನಗರ: ಸೈಕಲ್ ಅಗರಬತ್ತಿ ಮಾಲೀಕ ಗುರು, ಪ್ರಕಾಶ್ ಅವರು ರೋಟರಿ ಸಂಸ್ಥೆಯ ಸಹಕಾರದಲ್ಲಿ ನಗರದ ನಂಜನಗೂಡು ರಸ್ತೆಯ ಸಮೀಪದಲ್ಲಿರುವ ಶ್ರೀಅನುಲಕ್ಷ್ಮೀ ಸೇವಾ ಆಶ್ರಮಕ್ಕೆ ವಾಷಿಂಗ್ ಮಿಷನ್, ಬೀರು, ಸ್ಟೋರೇಜ್ ರ್‍ಯಾಕ್ ಕೊಡುಗೆಯಾಗಿ ನೀಡಿದರು.

ಪಿಡಿಜಿ ಡಾ.ನಾಗಾರ್ಜುನ್ ಮಾತನಾಡಿ, ನಿಮ್ಮ ಸಮಾಜಮುಖಿ ಸೇವೆಗೆ ರೋಟರಿ ಸದಾ ಚಿರಋಣಿಯಾಗಿರುತ್ತದೆ. ಇದು ಗುರು ಅವರು ಕಾರ್ಯಕ್ರಮವಾಗಿದೆ. ನಿಮ್ಮ ಆಶ್ರಮಕ್ಕೆ ವಾಷಿಂಗ್ ಮಿಷನ್, ಬೀರು, ರ್‍ಯಾಕ್ ಕೊಡುಗೆಯಾಗಿ ನೀಡಿದ ಗುರು ಅವರಿಗೆ ಈ ಮೂಲಕ ಅಭಿನಂದನೆ ಸಲ್ಲಿಸುತ್ತೇವೆ. ನಿಮ್ಮ ಆಶ್ರಮದ ಸೇವಾ ಕಾರ್ಯಕ್ಕೆ ನಿಮ್ಮೊಂದಿಗೆ ಸದಾ ಇರುತ್ತೇವೆ. ಮುಂದಿನ ದಿನಗಳಲ್ಲಿ ನಿಮ್ಮ ಸಹಕಾರ ಮಾಡುವುದಾಗಿ ತಿಳಿಸಿದರು. ರೋಟರಿ ಅಧ್ಯಕ್ಷ ಕಾಗಲವಾಡಿ ಚಂದ್ರು ಮಾತನಾಡಿದರು.

ಸಂಸ್ಥೆಯ ಸಂಸ್ಥಾಪಕ ಸದಸ್ಯರಾದ ಸಿ.ವಿ. ಶ್ರೀನಿವಾಸಶೆಟ್ಟಿ, ಜಿ.ಆರ್.ಅಶ್ವಥ್ ನಾರಾಯಣ್, ವಲಯ ಪ್ರತಿನಿಧಿ ಯೋಗರಾಜು, ಅಧ್ಯಕ್ಷರಾದ ನಾಗರಾಜು, ಚಂದ್ರಪ್ರಭುಜೈನ್, ಕಾರ್ಯದರ್ಶಿ ಮಹದೇವು ಹಾಜರಿದ್ದರು.



ಶ್ರೀಅನುಲಕ್ಷ್ಮೀ ಸೇವಾಶ್ರಮಕ್ಕೆ ವಾಷಿಂಗ್ ಮಿಷನ್, ಬೀರು, ಸ್ಟೋರೇಜ್ ರ್‍ಯಾಕ್ ಕೊಡುಗೆಯಾಗಿ ನೀಡಲಾಯಿತು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್ (SSLC Pass) 8 ಘಂಟೆ ಪಾಳಿ –ESI & PF ಸೌಲಭ್ಯ ಕೂರ್ಗಳ್ಳಿ ಹಾಗೂ ಮೇಟಗಳ್ಳಿ ಸುತ್ತ ಮುತ್ತ ಪ್ರದೇಶ
9035367083
6361548626

WANTED
Wanted teaching staff for reputed institution (Experience Preferred) for English and Maths, sujects. Transport facilities available. Drop your resume through WhatsApp
8971577685
9980631121

SITE FOR SALE
15x40
Near at Nagawala Trimurti Nagar
West facing
9945419648
9972837203

GODOWN FOR RENT
30x20
12 Feet - Hight
APMC, B-Block, Bandipalya
9480169436

HOUSE FOR SALE ಮನೆ ಮಾರಾಟಕ್ಕಿದೆ
20x30ರಲ್ಲಿ ಕಟ್ಟಿರುವ ನೆಲ ಅಂತಸ್ತಿನ ಮನೆ, ಹೆಬ್ಬಾಳು 2ನೇ ಹಂತ, ಸಂಕ್ರಾಂತಿ ಸರ್ಕಲ್ ಹತ್ತಿರ.(Good Location).
9845199932
6366362918

FOR SALE
Profitable running computer training Institute for sale.
Prime location: Lakshmipuram
Interested in doing Business only call:
7204638482

Premium Ice Cream Parlour, Mysore.
REQUIRED STAFF
Guest Service Staff - 4 No's
Age limit: Up to 35 years, 30 days Bangalore training with salary.
Food & accommodation provided
Good Salary | Immediate Joining
Call: 8792464700

MUDA ALLOTED SITE FOR SALE
30x40 WEST Face
Vijayanagara 4th Stage, 2nd Phase.
(Brokers Excuse)
Call : 9886048471

ಸುವರ್ಣ ಯಾತ್ರಾ
- 9 ದಿನಗಳ ನೇಪಾಳ ಅಯೋಧ್ಯ ಪ್ರವಾಸ 12/6/26
- 9 ದಿನಗಳ ಅಸ್ಸಾಂ ಮೇಘಾಲಯ ಅರುಣಾಚಲ್ ಪ್ರದೇಶ 18/6/26
- 4 ದಿನಗಳ ಕಾಶಿ ಅಯೋಧ್ಯಾ ಪ್ರವಾಸ 14/6/26
- 7 ದಿನಗಳ ಭೂತನ್ 15/6/26.

9019462508
9480843945

ಬೇಕಾಗಿದ್ದಾರೆ
1. ಶಾಲಾ ವಾಹನ ಚಾಲಕರು. 2. ಅಡುಗೆ ಸಹಾಯಕರು
2. ಕ್ಯಾಂಟೀನ್/ ಆಫೀಸ್ ಬಾಯ್ ಕೆಲಸಕ್ಕೆ ಹುಡುಗರು.
4. ಆಯಾ/ಬಸ್ ಮದರ್ ಕೆಲಸಕ್ಕೆ ಮಹಿಳೆಯರು.
ಸ್ಥಳ: ಭುಗತಹಳ್ಳಿ, ಮೈಸೂರು.
ಉಚಿತ ಊಟ ಹಾಗೂ ವಸತಿ ಸೌಲಭ್ಯವಿರುತ್ತದೆ.
9964586817

ಬೇಕಾಗಿದ್ದಾರೆ
B M Habitet Mall ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಪಾರ್ಕಿಂಗ್ ಸೆಕ್ಯೂರಿಟಿ ಗಾರ್ಡ್, ಹೌಸ್‌ಕೀಪಿಂಗ್
74116-46663
96323-06663

ಮನೆ ಮಾರಾಟಕ್ಕಿದೆ
ವಿಳಾಸ: ವಿಜಯನಗರ 4ನೇ ಹಂತ, 2ನೇ ಫೇಸ್, 4ನೇ ಮುಖ್ಯರಸ್ತೆ, 5ನೇ ಕ್ರಾಸ್, ಮನೆ ನಂ. 7486, ಮೈಸೂರು–32. ಸೈಟ್ ಅಳತೆ: 20x30 ಅಡಿ. ಕಟ್ಟಡ: ಗ್ರೌಂಡ್ ಫ್ಲೋರ್ ಮತ್ತು ಮೊದಲನೇ ಹಂತ (Ground floor and first floor). Face: ಉತ್ತರ ದಿಕ್ಕು, 2 ಬಿಹೆಚ್‌ಕೆ. ಸಂಪರ್ಕಿಸಿ:
9964567483, 8861959560
Near Hotel Mylari, behind Mahalakshmi Sweet Stall, near Marimallappa School.

SITES FOR SALE
DIRECT OWNER SALE
100 x 80 & 50 x 80 Sites On Mysore–Bannur Highway
CLOSE TO
Jnanasarovara International Residential School & Delhi Public School, Mysore
CLEAR TITLE | READY FOR REGISTRATION
NO BROKERS PLEASE
CONTACT: 7760033678

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಶ್ರೀ ಗೌರೀಶಂಕರ ಟ್ರಾವೆಲ್ಸ್
29–5–2026 (13 ದಿನ): ಹರಿದ್ವಾರ್, ಋಷಿಕೇಷ್, ಗಂಗೋತ್ರಿ, ಉತ್ತರ ಕಾಶಿ, ಯಮುನೋತ್ರಿ, ಗುಪ್ತಕಾಶಿ, ಬದರಿನಾಥ್, ಕೇದಾರ್‌ನಾಥ್, ದೇವಪ್ರಯಾಗ್, ದೆಹಲಿ. (ವಿಮಾನ, ಬಸ್, ಊಟ, ರೂಂ)
Mob: 9620002114

TV ಕೆಟ್ಟಿದೆಯೇ ?
LED, LCD TV ಗಳನ್ನು ರಿಪೇರಿ ಮಾಡಿಕೊಡಲಾಗುತ್ತದೆ. ನಮ್ಮಲ್ಲಿ Seconds LED TV ಗಳು ದೊರೆಯುತ್ತದೆ.
Teju Electronics, ಅಗ್ರಹಾರ
Mob: 9342114069

JOB OPPORTUNITY
Part time 50+Age, Retired/Housewife/ Additional Income,
Date : 25-05-2026 - 11 AM.
Venue : Shre Guru Residency,
Salary upto 75000/-, Document : SSLC/Aadhar/Pan card
9901628595
8762556332

ಶ್ರೀ ಓಂಕಾರೇಶ್ವರ ಟೂರಿಸ್ಟ್, ಮೈಸೂರು.
24–5–2026 1 ದಿನ ಹುಲಿಗನ ಮರಡಿ ವೆಂಕಟರಮಣಸ್ವಾಮಿ, ಸ್ಕಂದಗಿರಿ, ಪಾರ್ವತಿಬೆಟ್ಟ, ಬಿಳಿಗಿರಿರಂಗನಬೆಟ್ಟ, ಹಿಮಗೋಪಾಲಸ್ವಾಮಿ ಬೆಟ್ಟ, 31–5–2026 1 ದಿನ ಮೇಲುಕೋಟೆ, ನಿಮಿಷಾಂಭ, ಕರಿಗಟ್ಟ, ಕೆರೆತೊಣ್ಣೂರು, ಇತ್ಯಾದಿ, 6–6–2026 2 ದಿನ ಕೇರಳ ಕೊಟ್ಟಿಯೂರು ಮಹದೇವ, ಕಾಸರಗೂಡು, ಕುಣ್ಣೂರು ಇತ್ಯಾದಿ, 13–6–2026 6 ದಿನ ಕೇರಳ, ವೈನಾಡು, ಮುನ್ನಾರು, ಗುರುವಾಯೂರು, ಅನಂತ ಪದ್ಮನಾಭ, ಜಟಾಯು ಇತ್ಯಾದಿ. 24–6–2026 7 ದಿನ ಉತ್ತರ ಕರ್ನಾಟಕ, ಚಿತ್ರದುರ್ಗಾ, ಹಂಪಿ, ಬದಾಮಿ, ಬನಶಂಕರಿ, ಕೂಡಲಸಂಗಮ, ಇತ್ಯಾದಿ.
8618884805

ಉಚಿತ ತರಬೇತಿ
ಮನೆಯಿಂದಲೇ ಬತ್ತಿಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9591311161 MANGALORE 9901910161

ಕೆಲಸಕ್ಕೆ ಬೇಕಾಗಿದ್ದಾರೆ
ನೇಮ್‌ಪ್ಲೇಟ್ ಕೆಲಸಕ್ಕಾಗಿ. ಹುಡುಗರು
ವಯೋಮಿತಿ : 18 ರಿಂದ 30
ಸಂಬಳ : 10K + 2K
ಸ್ಥಳ : ಅಗ್ರಹಾರ & ಶ್ರೀರಾಂಪುರ
ಸಮಯ ಬೆಳಗ್ಗೆ 10:00 ರಿಂದ ಸಂಜೆ 7:30 ರವರೆಗೆ
95132 20070

ಹೆಲ್ತ್ ಕೇರ್ ತರಬೇತಿ
SSLC/PUC ಆದವರಿಗೆ ಡಿಪ್ಲಮೋ ಇನ್ ಹೆಲ್ತ್ ಕೇರ್ ತರಬೇತಿ (DMLT) ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಸೆಂಟ್ ಮೇರಿಸ್ ಆಸ್ಪತ್ರೆ, ಸಿಲ್ಕ್ ಫ್ಯಾಕ್ಟರಿ ಸರ್ಕಲ್, NIE ಕಾಲೇಜ್ ಪಕ್ಕ, ಮೈಸೂರು
9916908454

ಜೆಮಿನಿ
ರೋಲಿಂಗ್ ಷಟರ್ ಮೆಟೀರಿಯಲ್ಸ್
ರೋಲಿಂಗ್ ಷಟರ್ ಬಿಡಿ ಭಾಗಗಳ ತಯಾರಕರು.
ಡೈರೆಕ್ಟ್ ಫ್ಯಾಕ್ಟರಿ ಸೇಲ್
ಸಂಪರ್ಕಿಸಿ :9740788263
#874/A ಮಾನಂದವಾಡಿ ರಸ್ತೆ ಮೈಸೂರು =570008

ಬೇಕಾಗಿದೆ
ಕೊರಿಯರ್ ಸಂಸ್ಥೆಯಲ್ಲಿ ಪಾರ್ಸೆಲ್‌ಗಳನ್ನು ಡೆಲಿವರಿ ಮಾಡಲು ಕ್ಲೋಸಿಂಗ್ ಬಾಡಿ ಹೊಂದಿರುವ Appe Auto, Zeto Auto ಬೇಕಾಗಿದೆ. ಸ್ಥಳ : ಮೈಸೂರು. ಸಂಪರ್ಕಿಸಿ :
9449871790

WANTED
Courier delivery Boys/Girls for e-commerce business at Mysore 23, interested person contact
9036719781
9514420854

ಬೇಕಾಗಿದ್ದಾರೆ
5 ವರ್ಷ ಅನುಭವವುಳ್ಳ Security Field Officer ಮತ್ತು ಅನುಭವವುಳ್ಳ ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ. ಮೈಸೂರಿನ ಸುತ್ತಮುತ್ತ
7795104543
9538886328

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training. www: imkta.in
ALPHA INTERNATIONAL SCHOOL @ Srirampura
Call: 7829937469
ONLINE TRAINING AVAILABLE

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535361279

ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಅಕೌಂಟೆಂಟ್ ಆಗಿ ಕೆಲಸ ಮಾಡಲು ಬೇಕಾಗಿದ್ದಾರೆ
ನಂದಿ ಸರ್ವೀಸ್ ಸ್ಟೇಷನ್
ಮಾನಂದವಾಡಿ ರಸ್ತೆ, ಶ್ರೀರಾಂಪುರ, ಮೈಸೂರು
9620777488

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕ್‌ನಲ್ಲಿ ನೈಟ್‌ಶಿಫ್ಟ್ ಕೆಲಸಕ್ಕಾಗಿ ಹುಡುಗರು/ಪುರುಷರು ಬೇಕಾಗಿದ್ದಾರೆ.
ಸಂಬಳ : 15000/–
7899754149

ಮನೆಯಲ್ಲಿಯೇ ಕೆಲಸ
ಗೃಹಿಣಿಯರು, ವಿದ್ಯಾರ್ಥಿಗಳು ನಿವೃತ್ತಿ ಹೊಂದಿರುವವರು, ವಯಸ್ಸಿನ ಮಿತಿ ಇಲ್ಲ ನಿಮ್ಮ ಬಿಡುವಿನ ವೇಳೆಯಲ್ಲಿ ಮನೆಯಿಂದಲೇ ಕುಳಿತು ಬುಕ್, ರೈಟಿಂಗ್, ಫಾರಂ ಫಿಲ್ಲಿಂಗ್, ಡಾಟಾ ಎಂಟ್ರಿ, ಮೊಬೈಲ್ ವಾಟ್ಸಾಪ್ ಟೈಪಿಂಗ್, ಪೆನ್ಸಿಲ್ ಪ್ಯಾಕಿಂಗ್, ಫ್ಲವರ್ ಪ್ಯಾಕಿಂಗ್, ಪಿಶ್ ಫುಡ್ ಪ್ಯಾಕಿಂಗ್, ಹುದ್ದೆಗಳನ್ನು ಮಾಡಲು ಎಲ್ಲರಿಗೆ ಮುಕ್ತ ಅವಕಾಶ ಗಳಿಸಿ ಸಂಬಳ ತಿಂಗಳಿಗೆ 30,000/– ದಿಂದ 40,000/– ದವರೆಗೆ
9606983268

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
ರೂ. 900. ಸಂಪರ್ಕಿಸಿ:
Mob: 9108048064

1 acre farm land for sale (Near Karighatta)
12 km from Mysore (Manipal), 600 metres from (New) Bangalore-Mysore Expressway. Suitable for Nature Resorts, Farm Villas. 3.25 Lakhs per guntas.
Mob: 9632456183

FOR RENT
1st Floor 1600 sq.ft., lift available.
Contact:
9845113361
9686769039

WANTED
Receptionist post.
Qualification: 2nd PUC.
Mob: 9845113361

ಬೇಕಾಗಿದ್ದಾರೆ
ಮೈಸೂರಿನ ರಿಯಲ್ ಎಸ್ಟೇಟ್ ಕಛೇರಿಯಲ್ಲಿ ಕೆಲಸ ಮಾಡಲು ಮಹಿಳಾ ಸಹಾಯಕಿ ಬೇಕಾಗಿದ್ದಾರೆ. ಸಂಪರ್ಕಿಸಿ:
Mob: 88610 42449

ಶ್ರೀ ಶಾರದ ವಿದ್ಯಾಲಯ, ಹನುಮನಾಳು ಶಿಕ್ಷಕ/ ಶಿಕ್ಷಕಿಯರು ಬೇಕಾಗಿದ್ದಾರೆ
1. Pre Nursury Teachers - 03 (N.S.T / Degree)
2. Primary Teachers - 01 (Degree And D.ed)
3. Science Teachers - 01 (B.Sc, B.Ed)
4. Physical Education Teacher - 01 (B.Ped)

Contact: Siddegowda Founder And Managing Trustee
9341393879
9036815655

HOUSE FOR SALE
30x40, Ground, First & Second floor Duplex house & 40x60 Ground & First floor House for Sale at Ramakrishna Ngr, 1 BHK House for Rent at T.K. Layout.
7353430309

Teakwood Doors
10 YEARS WARRANTY
@ DEPOT RATES
9901291267
9845426862

3 BHK HOUSE FOR LEASE
in Vijayanagara 1st Stage, Specious sit-out & Balcony with car parking and garden facilities available
7899831216
Brokers Excuse

QUALITY Plywood
15 YEARS CERTIFIED WARRANTY
ISO
Neem BOND PLATINUM
Neem AKSHAYAGOLD
Aishwarya 9148991267

REQUIRED ACCOUNT ASSISTANT
Timings: 9-00am to 6-30pm
9141835175
9902035175
connect@udupikitchen.net
Lingadevarakoppal Road, Near D'Mart, Mysore

V-GUARD

10 ವರ್ಷಗಳ ವ್ಯಾರಂಟಿ
Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ನೇರ ಸಂದರ್ಶನ
1) ಭದ್ರತಾ ಸಿಬ್ಬಂದಿ – 10 ಜನ. 25 ರಿಂದ 35 ವರ್ಷ. ವಾರದ ಸಂಬಳವಿರುತದೆ.
2. MARKETING EXECUTIVE (25 TO 35) TWO WHEELER MUST (KANNADA, ENGLISH, HINDI) ಸಂಪರ್ಕಿಸಿ
99007 49104
90367 45292

ಮನೆ ಸಾಲ
J.M.F. Private Ltd, 54/A#1, ground floor, 9th Main, 5th Cross, Near Javaregowda Park, Saraswathipuram, Mysore.
ನಾವು ನ್ಯಾಷನಲೈಸ್ ಮತ್ತು ಎನ್.ಬಿ.ಎಫ್.ಸಿ. ಬ್ಯಾಂಕ್‌ಗಳೊಂದಿಗೆ ಸಹಭಾಗಿತ್ವದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಯಾರಿಗಾದರು ಮನೆ ಸಾಲ ಸೌಲಭ್ಯ ಕೊಡಿಸಲಾಗುತ್ತದೆ. ಸಿಬಿಲ್ ತೊಂದರೆ ಇದ್ದು, 11B, 9 & 11A, ಮುಡಾ ಮತ್ತು ಕಾರ್ಪೋರೇಷನ್ ಮತ್ತು ರೆವಿನ್ಯೂ ಖಾತೆಗಳಿಗೆ ಲೋನ್ ಮಾಡಿಸಿಕೊಡಲಾಗುವುದು ಹಾಗೂ 18 ವರ್ಷ ಮೇಲ್ಪಟ್ಟ ಹುಡುಗ ಹಾಗೂ ಹುಡುಗಿಯರು ಟೆಲಿಕಾಲಿಂಗ್ ಹಾಗೂ ಫೀಲ್ಡ್ ವರ್ಕ್ ಕೆಲಸಕ್ಕೆ ಬೇಕಾಗಿದ್ದಾರೆ.
8088647887

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535175624

COMMERCIAL Site For Sale
86x75, East Facing, Commercial Site with 80 Feet Road for Sale at Srirampura 2nd Stage, Manandavadi Road, Mysore
(Near Srirampura Pattana Panchayat Office)
8660105902

FOR SALE
30x40 Site Before SBM Layout, Bogadi
20x30,20x35, 30x40 Sites @ Bogadi,Rainbow School
30x50, 40x60, 50x80 Sites Near RT Nagar, Defence Apartments
2&3 BHK Apartments, With All Amenities @ Ramkrishna Nagar.
Duplex House & Sites @ Dattagalli & Vidyaranya Puram
95386 90359, 90359 90359

3 BHK Triplex House for SALE
3 Bedroom House, 30x40,Gated Community MUDA Approved, N/F, 2.5 years Old,Near Vijayanagar 4th Stage, Mysore, PRICE - 2 Cr,
Behind NPS School
8660105902

SITES FOR SALE
30x40 & 20x40 NORTH FACING SITES
MUDA APPROVED LAYOUT
READY FOR REGISTRATION & CONSTRUCTION
GOOD LOCATION AT ASS LAYOUT, NEAR SAHA ELEGANCE, JATTIHUNDI, BOGADI ROAD, MYSORE
FOR MORE DETAILS CONTACT: 9845311775

Ouraloom Garments
ಹೆಬ್ಬಾಳ್ ಕೈಗಾರಿಕಾ ಪ್ರದೇಶ, ಜೆ.ಕೆ ಟೈರ್ಸ್ ಹತ್ತಿರ
ಟೈಲರ್ಸ್ ಬೇಕಾಗಿದ್ದಾರೆ
ಟೈಲರ್ಸ್, ಟ್ರಿಮರ್ಸ್, ಚಕ್ಕರ್ಸ್, ಐರನ್ ಆಪರೇಟರ್ಸ್, ಹೆಲ್ಪರ್ಸ್ ಬೇಕಾಗಿದ್ದಾರೆ. ಇ.ಸ್.ಐ. ಮತ್ತು ಪಿ.ಎಫ್. ಆಕರ್ಷಕ ವೇತನ ಲಭ್ಯವಿರುತ್ತದೆ
9008205460
8971436823
9731879033

ಬಿರ್ಲಾ ಓಪಸ್ ಪೇಂಟ್‌ನ (C/O) ಹೆರಿಟೇಜ್ ಅಂಡ್ ಕೋ, ಹೆಬ್ಬಾಳ್, ಮೈಸೂರು
ಗೋಡೌನ್‌ನಲ್ಲಿ ಕೆಲಸಕ್ಕೆ ಆಸಕ್ತಿ ಇರುವ, 1 ವರ್ಷ ಅನುಭವ ಇರುವ ಕಂಪ್ಯೂಟರ್ ಆಪರೇಟರ್, ಸೂಪರ್‌ವೈಸರ್, ಪಿಕ್ಕರ್ ಹಾಗೂ ಡ್ರೈವರ್‌ಗಳು ಬೇಕಾಗಿದ್ದಾರೆ. ಮಾಸಿಕ ವೇತನ 16000/– ರಿಂದ 23000/– ವರೆಗೆ ಕೊಡಲಾಗುವುದು
ESI, PF ಸೌಲಭ್ಯ ಕೂಡ ಕೊಡಲಾಗುವುದು.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
9538520013 / 9148108838
9113956899

ಬೇಕಾಗಿದ್ದಾರೆ
ಮೈಸೂರಿನ ಹೆಬ್ಬಾಳ್ ಕೈಗಾರಿಕ ಪ್ರದೇಶದ ಕೊರಿಯರ್ ಕಂಪನಿಯಲ್ಲಿ ಲೋಡ್ ಅನ್ ಲೋಡ್ ಕೆಲಸ ನಿರ್ವಹಿಸಲು ಹುಡುಗರು ಬೇಕಾಗಿದ್ದಾರೆ. ESI-PF ಸೌಲಭ್ಯವಿರುತ್ತದೆ. ಸಂಪರ್ಕಿಸಿ
9986411191
Mahesh

ಬೇಕಾಗಿದ್ದಾರೆ
ಕೃಷಿ ಯಂತ್ರೋಪಕರಣ ತಯಾರಕರ ಕಂಪನಿಯಲ್ಲಿ ITI / ಡಿಪ್ಲೊಮಾ ಎಲೆಕ್ಟ್ರಿಕಲ್ ಟೆಕ್ನಿಷಿಯನ್ ಬೇಕಾಗಿದ್ದಾರೆ
9538994312
7899818241

AVAILABLE FOR RENT
"Shed of 3000 sqft available for rent in Yelwala, Mysore. Contact
9535891716

ಬೇಕಾಗಿದ್ದಾರೆ
ಮೈಸೂರು ಜಿಲ್ಲೆಯಲ್ಲಿ ಇರುವ ಕಾರ್ ಷೋರೂಮ್ ಹಾಗೂ ಬೈಕ್ ಷೋರೂಮ್‌ಗಳಿಗೆ, ತಕ್ಷಣ ಯುವಕ ಮತ್ತು ಯುವತಿಯರು ಬೇಕಾಗಿದ್ದಾರೆ. EDUCATION SSLC, PUC, ITI, DIPLOMA, DEGREE ಖಾಲಿ ಇರುವ ಹುದ್ದೆಗಳು, CASHIER, BILLING, RECEPTIONIST, HR, ADMIN, ACCOUNTANT ETC, SALARY (18k -38k), ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ
8317415401
9632659609

ಪ್ರಮಾಣ ಪತ್ರ
ಶ್ರೀ ಮಲ್ಲಯ್ಯ ಎಂ, ಮಂಡ್ಯ ಜಿಲ್ಲೆ–571434 ಪಾಂಡವಪುರ ತಾಲ್ಲೂಕು, ಅಗಟಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದು, ನನ್ನ ಹೆಸರು ಆಧಾರ್ ಕಾರ್ಡ್ ಮತ್ತು ಎಸ್‌ಎಸ್‌ಎಲ್‌ಸಿ ಅಂಕಪಟ್ಟಿಯಲ್ಲಿ ಮಲ್ಲಯ್ಯ ಎಂ ಎಂದು ನಮೂದಾಗಿದೆ, ಆದರೆ ನನ್ನ ಹೆಸರಿನಲ್ಲಿರುವ ವರ್ಗಾವಣೆ ಪತ್ರ ಮತ್ತು ವಾಹನ್ ಆರ್.ಸಿ. ಕಾರ್ಡ್‌ನಲ್ಲಿ ನನ್ನ ಹೆಸರು ಮಲ್ಲಯ್ಯ ಎಂ ಬದಲು ಎಂ ಮಲ್ಲಯ್ಯ ಎಂದು ನಮೂದಾಗಿರುತ್ತದೆ. ಆದ್ದರಿಂದ ಈ ಎರಡೂ ಹೆಸರುಳ್ಳ ವ್ಯಕ್ತಿ ನಾನೊಬ್ಬನೇ ಆಗಿರುತ್ತೇನೆಂದು ನಾನು ನೋಟರಿ ಸಿ.ಮಂಗಳ ಅವರ ಮುಂದೆ ಪ್ರಮಾಣೀಕರಿಸಿರುತ್ತೇನೆ.
ಸಹಿ/– ಮಲ್ಲಯ್ಯ ಎಂ.

JOB OPPORTUNITY PROGRAMME SEMINAR
Senior Citizens, 50+ age. Place: Shree Guru Residency, Near Metropole Hotel, Devaraj Mohalla, Mysore. Seminar date: 25-5-2026. Time: 11 am with tea and lunch. Education: SSLC & above. Call for free registration.
9449068132

ನಿವೇಶನ ಮಾರಾಟಕ್ಕಿದೆ
ಶ್ರೀರಾಂಪುರ ಚೌಡಹಳ್ಳಿ K.P.T.C.L ವಿದ್ಯುತ್ ನಗರ ಬಡಾವಣೆ S/F ನಿವೇಶನ 9X12 ಮೀ. ನಿವೇಶನ ಮಾರಾಟಕ್ಕಿದೆ
9739151987

ಯುನಿಫಾರಂ ಧಮಾಕಾ
ಕ್ಲಿಯರೆನ್ಸ್ ಸೇಲ್, ಕೆಲವು ಆಯ್ದ ಬಣ್ಣಗಳು ರೆಡಿಪ್ಯಾಂಟ್ ಕೇವಲ 250 ರೂ.
ಕೆಲವು ಆಯ್ದ ಬಣ್ಣಗಳು ರೆಡಿನಿಕ್ಕರ್ ಕೇವಲ 150ರೂ
ಭಾವಸಾರ ಶ್ರೀ ಗಣೇಶ ಟೆಕ್ಸ್‌ಟೈಲ್ಸ್
101 ಗಣಪತಿ ದೇವಸ್ಥಾನ ಹಿಂಭಾಗ, ಬಸವೇಶ್ವರ ರಸ್ತೆ, 5ನೇ ಕ್ರಾಸ್, ಮೈಸೂರು.

ಪಾರ್ಟ್‌ಟೈಂ ಕೆಲಸ
ಯುನಿಫಾರಂ ಶಾಪ್‌ಗೆ ಹೆಲ್ಪರ್ 30 ವರ್ಷ ಒಳಪಟ್ಟು ಮಹಿಳೆಯರಿಗೆ ಮಾತ್ರ, ಬೆಳಿಗ್ಗೆ 10 ರಿಂದ 3.30 ರವರೆಗೆ 1 1 Post ಮತ್ತು ಬೆಳಿಗ್ಗೆ 10 ರಿಂದ 4 ರವರೆಗೆ 1 Post, ಮಧ್ಯಾಹ್ನ 3 ರಿಂದ 8 ರವರೆಗೆ 1 Post, ಸಂಜೆ 4 ರಿಂದ 8.30 ರವರೆಗೆ 2 Post ಅನುಭವ ಬೇಕಿಲ್ಲ.
9591327746

ನಾಟಿಕೋಳಿ ಮೊಟ್ಟೆಗಳನ್ನು ತೆಗೆದುಕೊಳ್ಳಲಾಗುತ್ತದೆ.
ಸಂಪರ್ಕಿಸಿ
8296240149

ತಕ್ಷಣ ಬೇಕಾಗಿದ್ದಾರೆ
ಬೋಗಾದಿ, ಚಿಕ್ಕಳ್ಳಿ, ಹೆಬ್ಬಾಳು, ಕೆಆರ್. ಆಸ್ಪತ್ರೆ ಹತ್ತಿರ, ವರುಣ, ಕಳಸ್ತವಾಡಿ ಹತ್ತಿರ ಕೆಲಸ ಮಾಡಲು ಸೆಕ್ಯೂರಿಟಿ ಸೂಪರ್‌ವೈಸರ್ ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ESI & PF ಹಾಗೂ ಊಟ ವಸತಿ ವ್ಯವಸ್ಥೆ ಇರುತ್ತದೆ. ಸಂಪರ್ಕಿಸಿ
8660309477

ಹೋಟೆಲ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
ಸಪ್ಲೈ ಮತ್ತು ಕೌಂಟರ್‌ಗೆ, ನ್ಯೂ ಸಯ್ಯಾಜಿರಾವ್ ರೋಡ್, ಮಂಡಿಮೊಹಲ್ಲಾ, ಮೈಸೂರು.
9591509575

MM CONSTRUCTION'S MYSURU
Residential & Commercial Construction Planning | Estimation | Interior | Turnkey Projects Quality Work • Trusted Service • Expert Engineers
9986621579 / 7624987329

FOR SALE
1) 30x40 New Duplex House @ Dattagalli & Vidyaranyapuram. (2) 30x40 Site & New House @ JP Nagar. (3) 40x60 Commercial Site @ Srirampura Near to Madhuvana layout. (4) 30x40 Site @ Bogadi SBM layout Attach. (5) 30x45 Commercial House @ Jaynagar.
90359 90359, 95386 90359

RUNNING PG FOR RENT
GF, 1st Floor and 2nd Floor, 20 rooms with attached bathrooms. No. 1555, Vijayanagar 2nd Stage, H.T. Double Road (Near Canara Bank) Mysore-570 017
MOB: 9663604699

ಬೇಕಾಗಿದ್ದಾರೆ
ನಂಜನಗೂಡು ಮತ್ತು ಅಡಕನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಹೆಸರಾಂತ ಕಂಪನಿಗೆ ಕೆಲಸ ಮಾಡಲು ಪುರುಷ ಮತ್ತು ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ. ಇಎಸ್‌ಐ, ಪಿಎಫ್, ಲಿವ್ ವೇಜಸ್ ಮತ್ತು ಬೋನಸ್ ನೀಡಲಾಗುವುದು ಮತ್ತು ಕೆಲಸದ ಸಮಯದಲ್ಲಿ ಊಟದ ಸೌಲಭ್ಯವಿರುತ್ತದೆ. ಸಂಬಳ: 16,000. ಕೆಲಸದ ಸಮಯ: ಬೆಳಿಗ್ಗೆ 9 ರಿಂದ ಸಂಜೆ 5.30.
ರಮೇಶ್: 9845650982
9986859930/ 8971460235

ಬೇಕಾಗಿದ್ದಾರೆ
ಸೆಕ್ಯೂರಿಟಿ ಸೂಪರ್‌ವೈಸರ್ ಮತ್ತು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. (For 8 Hours Male candidates only) ಉತ್ತಮ ವೇತನ, ಪಿಎಫ್ ಮತ್ತು ಇಎಸ್‌ಐ ಸೌಲಭ್ಯವಿರುತ್ತದೆ. ವಯಸ್ಸಿನ ಮಿತಿ–50ರ ಒಳಗೆ. ಸ್ಥಳ: ನಂಜನಗೂಡು.
9986748497
9886200104

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು ಬೇಕಾಗಿದ್ದಾರೆ. SSLC / PUC - Pass / fail - 5 posts. ಸಂಪರ್ಕಿಸಿ: ಶ್ರೀ ವಿನಾಯಕ ಟ್ರೇಡರ್ಸ್, ಹೆಬ್ಬಾಳ್, ಮೈಸೂರು, ಸ್ಥಳೀಯರಿಗೆ ಮೊದಲ ಆದ್ಯತೆ.
9901212321
8880883339

Alienation ಮಾಡಿಕೊಡಲಾಗುವುದು
ಮಂಡ್ಯ ಮತ್ತು ಮೈಸೂರು ಜಿಲ್ಲೆಯಲ್ಲಿ ಯಾವುದೇ ಹಳ್ಳಿ ತಾಲೂಕು ಜಿಲ್ಲೆಗೆ ಸಂಬಂಧಪಟ್ಟ ಜಮೀನನ್ನು ಅಲಿನೇಶನ್ ಮಾಡಿಸಿಕೊಡಲಾಗುವುದು. ಮತ್ತು 11 A ಖಾತಾ ಮಾಡಿಸಿಕೊಡಲಾಗುವುದು
ಸಂಪರ್ಕಿಸುವ ಸಮಯ: 9.00 AM To 6.00 PM
Mob: 9108985119

ಭೋಗ್ಯಕ್ಕೆ ಮನೆ ಬೇಕಾಗಿದೆ
ಮೈಸೂರು – ಹೆಬ್ಬಾಳು, ವಿಜಯನಗರ 1ನೇ ಹಾಗೂ 2ನೇ ಹಂತ, ಗೋಕುಲಂ, ವಿ.ವಿ.ಮೊಹಲ್ಲಾ, ಮೇಟಗಳ್ಳಿ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ, ಶುದ್ಧ ಸಸ್ಯಾಹಾರಿ ಕುಟುಂಬಕ್ಕೆ 30×40 independent ಮನೆ ಭೋಗ್ಯಕ್ಕೆ ಬೇಕಾಗಿದೆ. ಸಂಪರ್ಕಿಸಿ: ಪ್ರಿಯಾ
Mob: 6364795551

ಬೇಕಾಗಿದ್ದಾರೆ
ಸರಸ್ವತಿಪುರಂನಲ್ಲಿರುವ ಆಫೀಸ್‌ನಲ್ಲಿ ಆಫೀಸ್ ಬಾಯ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
7026355153
7348965974

ಸದ್ಗುರು ಮ್ಯಾರೇಜಸ್
ಒಕ್ಕಲಿಗ BE, Mtech ಸುಂದರ ಶ್ರೀಮಂತ ಕೋಟ್ಯಾಧೀಶ್ವರ ಒಬ್ಬಳೇ ವಧುವಿಗೆ ಸೂಕ್ತ ವರಬೇಕು. ನೇರ ಸಂಪರ್ಕಿಸಿ.
9448229184
7899625268

WANTED TEACHERS
For a reputed state board school in Mysuru, Requires teachers for
1. Montessori
2. Social science
3. Mathematics
4. Mother teacher

9663115008
9353548087

ಮೈಸೂರು ಮಿತ್ರ
47
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸ ಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಕಾರು, ಪ್ಯಾಸೆಂಜರ್ ಆಟೋ ಮುಖಾಮುಖಿ ಡಿಕ್ಕಿ

10ಕ್ಕೂ ಹೆಚ್ಚು ಪ್ರಯಾಣಿಕರಿಗೆ ಗಂಭೀರ ಗಾಯ

- ಡಿಕ್ಕಿ ರಭಸಕ್ಕೆ ನಜ್ಜುಗುಜ್ಜಾದ ಆಟೋ
- ಗಾಯಾಳುಗಳಿಗೆ ಕೆ.ಆರ್.ಆಸ್ಪತ್ರೆಯಲ್ಲಿ ಚಿಕಿತ್ಸೆ



ನಜ್ಜು ಗುಜ್ಜಾಗಿರುವ ಆಟೋ

ತಿ.ನರಸೀಪುರ, ಮೇ 20– ಕಾರು, ಪ್ಯಾಸೆಂಜರ್ ಆಟೋ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ 10ಕ್ಕೂ ಹೆಚ್ಚು ಪ್ರಯಾಣಿಕರು ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲೂಕಿನ ಚೌಹಳ್ಳಿ ಗ್ರಾಮದ ಬಳಿ ಬುಧವಾರ ನಡೆದಿದೆ.

ತಿ.ನರಸೀಪುರದಿಂದ ತಲಕಾಡು ಕಡೆಗೆ ತೆರಳುತ್ತಿದ್ದ ವಿವಿಧ ಗ್ರಾಮಗಳ ನಿವಾಸಿಗಳಾದ ನಿಂಗಶೆಟ್ಟಿ, ಮಣಿಯಮ್ಮ, ಪುಟ್ಟತಾಯಮ್ಮ, ರವಿ, ನಾಗರಾಜು, ಸಂಪತ್, ಜೀವಿತ, ಶ್ರೇಯ, ಮಂಗಳ, ಕೃತಿಕ ಸೇರಿದಂತೆ 10ಕ್ಕೂ ಹೆಚ್ಚು ಪ್ರಯಾಣಿಕರು ಗಂಭೀರವಾಗಿ ಗಾಯಗೊಂಡಿದ್ದು ಎಲ್ಲರನ್ನೂ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿದೆ.

ಇಲ್ಲಿನ ಚೌಹಳ್ಳಿ ಗ್ರಾಮದ ಮುಖ್ಯ ರಸ್ತೆಯಲ್ಲಿ ವೇಗವಾಗಿ ಬಂದ ಕಾರು ಹಾಗೂ ಪ್ಯಾಸೆಂಜರ್ ಆಟೋ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದೆ. ಪರಿಣಾಮ ಆಟೋ ರಸ್ತೆ ಬದಿಗೆ ಉರುಳಿ ನಜ್ಜುಗುಜ್ಜಾಗಿದ್ದು, ಅದರಲ್ಲಿದ್ದ 10ಕ್ಕೂ ಹೆಚ್ಚು ಪ್ರಯಾಣಿಕರು ಗಂಭೀರವಾಗಿ ಗಾಯಗೊಂಡಿದ್ದರು. ಈ ವೇಳೆ ಸ್ಥಳದಲ್ಲಿದ್ದ ಚೌಹಳ್ಳಿ ಗ್ರಾಮಸ್ಥರು ಹಾಗೂ ಸಾರ್ವಜನಿಕರು ತಕ್ಷಣ ಗಾಯಾಳುಗಳ ನೆರವಿಗೆ ಧಾವಿಸಿ, ಎಲ್ಲರನ್ನೂ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ರವಾನಿಸಿದ್ದು, ಗಾಯಾಳುಗಳ ಪೈಕಿ ಕೆಲವರ ಪರಿಸ್ಥಿತಿ ಚಿಂತಾಜನಕವಾಗಿದ್ದು, ಅವರಿಗೆ ತುರ್ತು ಚಿಕಿತ್ಸೆ ನೀಡಲಾಗುತ್ತಿದೆ ಎಂದು ತಿಳಿದು ಬಂದಿದೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ತಿ.ನರಸೀಪುರ ಠಾಣೆ ಪೊಲೀಸರು ಪರಿಶೀಲನೆ ನಡೆಸಿ ಎರಡೂ ವಾಹನಗಳನ್ನು ವಶಕ್ಕೆ ಪಡೆದು ಮುಂದಿನ ತನಿಖೆ ಕೈಗೊಂಡಿದ್ದಾರೆ. ಘಟನೆ ಬಳಿಕ ಕಾರು ಚಾಲಕ ಪರಾರಿಯಾಗಿದ್ದು, ಈ ಸಂಬಂಧ ತಿ.ನರಸೀಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಉದ್ಬೂರು ಕೆರೆ ಹಾಡಿಯಲ್ಲಿ 15 ಮನೆಗಳ ಹಸ್ತಾಂತರ

126 ಹಾಡಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ: ಶಾಸಕ ಅನಿಲ್ ಚಿಕ್ಕಮಾದು



ಉದ್ಬೂರು ಕೆರೆ ಹಾಡಿಯಲ್ಲಿ ನೂತನ ಮನೆಗಳನ್ನು ಶಾಸಕ ಅನಿಲ್ ಚಿಕ್ಕಮಾದು ವಿತರಿಸಿದರು.

"ರಾಜ್ಯದ ಇತಿಹಾಸದಲ್ಲಿ ಹಾಡಿಗಳಿಗೆ ಮೊದಲ ಬಾರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕರೆಸಿ ಆದಿವಾಸಿಗಳ ಸಮಸ್ಯೆಗಳನ್ನು ಚರ್ಚಿಸಿದಾಗ ಮುಂದಿನ ದಿನಗಳಲ್ಲಿ ಬೇಡಿಕೆ ಈಡೇರಿಸುವ ಭರವಸೆ ನೀಡಿದ್ದರು. ಅದರಂತೆ ವಿದ್ಯುತ್, ಕುಡಿಯುವ ನೀರು, ಮನೆ ಹಕ್ಕುಪತ್ರ ಸೇರಿದಂತೆ ಹಲವು ಮೂಲ ಸೌಲಭ್ಯ ಕಲ್ಪಿಸಲಾಗಿದೆ. ಡಿ.ಬಿ.ಕುಪ್ಪೆ ಗ್ರಾಪಂ ವ್ಯಾಪ್ತಿ 40 ಕೋಟಿ ವೆಚ್ಚದ ಕಾಮಗಾರಿಗಳನ್ನು ನಡೆಸಲಾಗಿದೆ.
– ಅನಿಲ್ ಚಿಕ್ಕಮಾದು, ಶಾಸಕ.

ಹೆಚ್.ಡಿ.ಕೋಟೆ, ಮೇ 20– ಉದ್ಬೂರು ಕೆರೆ ಹಾಡಿಯ 46 ಆದಿವಾಸಿ ಕುಟುಂಬಗಳ ಪೈಕಿ 21 ಮಂದಿಗೆ ಹಕ್ಕುಪತ್ರ ವಿತರಿಸಿ, 15 ಮಂದಿಗೆ ಮನೆ ನಿರ್ಮಿಸಿ ಕೊಟ್ಟು, ತಾಲೂಕಿನ 126 ಹಾಡಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ತಾಲೂಕಿನ ಉದ್ಬೂರು ಕೆರೆ ಹಾಡಿಯಲ್ಲಿ ಪ.ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಆದಿವಾಸಿಗಳಿಗೆ ನಿರ್ಮಿಸಲಾದ 75 ಲಕ್ಷ ವೆಚ್ಚದ 15 ಮನೆ ಹಸ್ತಾಂತರ ಹಾಗೂ ಸೆಸ್ಕ್ ವತಿಯಿಂದ ಡಿ.ಬಿ. ಕುಪ್ಪೆ ಗ್ರಾಪಂ ವ್ಯಾಪ್ತಿಯಲ್ಲಿ 4.5 ಕೋಟಿ ವೆಚ್ಚದ ಯುಜಿ ಕೇಬಲ್ ಅಳವಡಿಕೆ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಆದಿವಾಸಿಗಳಿಗೆ ಕೇವಲ 6 ತಿಂಗಳು ಪೌಷ್ಟಿಕ ಆಹಾರದ ಧಾನ್ಯಗಳನ್ನು ನೀಡಲಾಗುತ್ತಿತ್ತು. ನಮ್ಮ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ವರ್ಷ ಪೂರ್ತಿ ಪೌಷ್ಟಿಕ ಆಹಾರದ ಧಾನ್ಯಗಳನ್ನು ನೀಡಲಾಗುತ್ತಿದೆ. ಪೌಷ್ಟಿಕತೆಯಿಂದ ಬಳಲುತ್ತಿದ್ದ ಆದಿವಾಸಿಗಳಿಗೆ ಈ ಯೋಜನೆಯಿಂದ ಅನುಕೂಲವಾಗಿದೆ. ಡಿ.ಬಿ.ಕುಪ್ಪೆ ಭಾಗದಲ್ಲಿ 50 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿ ಮಾಡಲಾಗಿದೆ. ಕಾಡೊಳಗಿನ ರಸ್ತೆ ಅಭಿವೃದ್ಧಿ, ಕುಡಿಯುವ ನೀರಿನ ಯೋಜನೆ, ಶಾಲೆಗಳ ಅಭಿವೃದ್ಧಿ, ವಿದ್ಯುತ್ ಸಂಪರ್ಕ ಸೇರಿದಂತೆ ಮೂಲ ಸೌಲಭ್ಯಗಳನ್ನು ಕಲ್ಪಿಸಿ ಕೊಡಲಾಗಿದೆ ಎಂದರು.

"ಶಾಸಕ ಅನಿಲ್ ಚಿಕ್ಕಮಾದು ಅವರು ನುಡಿದಂತೆ ನಡೆದಿದ್ದು, ಕಳೆದ 8 ವರ್ಷಗಳಿಂದ ಗಿರಿಜನರ ಬಗ್ಗೆ ವಿಶೇಷ ಕಾಳಜಿ ವಹಿಸಿ ಅವರು ಹಲವು ಅಭಿವೃದ್ಧಿ ಕೆಲಸಗಳನ್ನು ಮಾಡುವ ಮೂಲಕ ನಮಗೆ ನೂತನ ಮನೆಗಳನ್ನು ನಿರ್ಮಿಸಿ ಕೊಟ್ಟಿದ್ದಾರೆ.
– ಮಹದೇವ, ಕೆರೆ ಹಾಡಿ ನಿವಾಸಿ.

ಆದಿವಾಸಿಗಳ ಬೇಡಿಕೆಯಂತೆ ಹಕ್ಕುಪತ್ರದ ಆಧಾರದ ಮೇಲೆ ಕೃಷಿ ಇಲಾಖೆಯಿಂದ ಬಿತ್ತನೆ ಬೀಜ ನೀಡುವಂತೆ ಸೂಚಿಸಲಾಗಿದೆ. ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ನೂತನ ನೀರಿನ ತೊಂಬೆ ನಿರ್ಮಾಣಕ್ಕೂ ಸೂಚಿಸಲಾಗಿದೆ. ಮುಂದಿನ ದಿನಗಳಲ್ಲಿ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಣೆಗೆ ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಲಾಗುವುದು ಎಂದು ಆದಿವಾಸಿಗಳಿಗೆ ಭರವಸೆ ನೀಡಿದರು.

ಪ.ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ಮಹೇಶ್ ಮಾತನಾಡಿ, ಆದಿವಾಸಿಗಳಿಗೆ ಕಳೆದ 7 ವರ್ಷಗಳಲ್ಲಿ 1800 ಮನೆಗಳನ್ನು ನೀಡಲಾಗಿದೆ. ಇದು ಅನಿಲ್ ಚಿಕ್ಕಮಾದು ಅವರು ತಾಲೂಕಿಗೆ ಶಾಸಕರಾದ ಬಳಿಕ ಆಗಿರುವ ಸಾಧನೆ ಎಂದರು.

ಇದೇ ವೇಳೆ ನೂತನವಾಗಿ ನಿರ್ಮಿಸಿರುವ ಮನೆ ಬೀಗದ ಕೀಗಳನ್ನು ವಿತರಿಸಿ ಶಾಸಕ ಅನಿಲ್ ನುಡಿದಂತೆ ನಡೆದಿದ್ದಾರೆ ಎಂದು ಉದ್ಬೂರು ಕೆರೆ ಹಾಡಿ ಜನತೆ ಸಂತಸ ವ್ಯಕ್ತಪಡಿಸಿದರು.

ಈ ವೇಳೆ ತಹಸೀಲ್ದಾರ್ ಶ್ರೀನಿವಾಸ್, ತಾಪಂ ಇಓ ಧರಣೇಶ್, ರಾಜ್ಯ ವನ್ಯಜೀವಿ ಮಂಡಳಿ ನಿರ್ದೇಶಕ ಚಿಕ್ಕಣ್ಣ, ಎಸಿಎಫ್ ಮಧು, ಆರ್‌ಎಫ್ಒ ಸಿದ್ದರಾಜು, ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್, ಪರಿಶಿಷ್ಟ ಕಲ್ಯಾಣ ವರ್ಗಗಳ ಕಚೇರಿ ಮೇಲ್ವಿಚಾರಕ ನಾಗರಾಜ್, ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಪ್ರಸಾದ್, ಸಿಡಿಪಿಓ ದೀಪಾ, ಉಪ ತಹಸೀಲ್ದಾರ್ ಸಂಜೀವ ಕುಮಾರ್, ಅಂತರಸಂತೆ ಠಾಣೆ ಎಸ್‌ಐ ಚಂದ್ರಹಾಸ, ಪಿಡಬ್ಲ್ಯೂಡಿ ಎಇಇ ರಮೇಶ್, ಕೆಆರ್‌ಐಡಿಎಲ್ ಎಇಇ ಕೀರ್ತನ್, ವೈಮುಲ್ ನಿರ್ದೇಶಕ ಈರೇಗೌಡ, ಮಾಜಿ ಜಿಪಂ ಸದಸ್ಯ ಹೆಚ್.ಸಿ.ಮಂಜುನಾಥ್, ಮುಖಂಡರಾದ ಪರಶಿವಮೂರ್ತಿ, ಸೋಮೇಶ್, ಬಾಲಯ್ಯ, ಅಶೋಕ್, ಸೌಮ್ಯ, ಲೋಹಿತ್, ಕಲೀಂಪಾಷ, ಮಹದೇವೇಗೌಡ, ರವಿ, ಶಶಿಕಲಾ, ಕಾರ್ಮಿಕ ಇಲಾಖೆಯ ಪರಮೇಶ್, ನಾಗರಾಜು, ಚಲುವೇಗೌಡ, ಮಹೇಶ್, ಮಲ್ಲೇಶ್, ಆದಿವಾಸಿಗಳು ಇದ್ದರು.

ಪ್ರತಿಯೊಬ್ಬರೂ ಬಸವಣ್ಣನ 'ಕಾಯಕವೇ ಕೈಲಾಸ' ತತ್ವ ಅಳವಡಿಸಿಕೊಳ್ಳಿ

ವಾಟಾಳು ಪೀಠಾಧ್ಯಕ್ಷ ಶ್ರೀಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಸಲಹೆ



ಬಸವ ಜಯಂತಿಯಲ್ಲಿ ಗ್ರಾಮಸ್ಥರು ಬಸವೇಶ್ವರ ಪ್ರತಿಮೆಗೆ ಪೂಜೆ ಸಲ್ಲಿಸಿದರು.

"ವಿಶ್ವಗುರು ಬಸವಣ್ಣನವರ ವಚನಗಳು ಕೇವಲ ಸಾಹಿತ್ಯವಲ್ಲ. ಅವು ಮಾನವ ಜೀವನಕ್ಕೆ ದಾರಿದೀಪವಾಗಿರುವ ಅಮೂಲ್ಯ ಸಂದೇಶ. ಸತ್ಯ, ಧರ್ಮ, ಕಾಯಕ, ದಾಸೋಹ ಮತ್ತು ಸಮಾನತೆಯ ತತ್ವಗಳನ್ನು ಬಸವಣ್ಣನವರು ತಮ್ಮ ವಚನಗಳ ಮೂಲಕ ಸಮಾಜಕ್ಕೆ ಬೋಧಿಸಿದ್ದಾರೆ. ಕಾಯಕವೇ ಕೈಲಾಸ ಎಂಬ ಅವರ ಸಂದೇಶ ದುಡಿಮೆಯ ಮಹತ್ವ ಸಾರುತ್ತದೆ. ಪ್ರಾಮಾಣಿಕವಾಗಿ ದುಡಿದು ಬದುಕುವ ಜೀವನವೇ ಶ್ರೇಷ್ಠ ಎಂಬ ತತ್ವವನ್ನು ಬಸವಣ್ಣನವರು ಜನರಿಗೆ ತಿಳಿಸಿದರು. ಜಾತಿ, ಮತ, ವರ್ಣ ಭೇದವಿಲ್ಲದೆ ಎಲ್ಲರೂ ಸಮಾನರು ಎಂಬ ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸಿದ ಅವರು, ಯುವ ಪೀಳಿಗೆ ಬಸವ ತತ್ವಗಳನ್ನು ಅರಿತು ನಡೆದಾಗ ಉತ್ತಮ ಸಮಾಜ ನಿರ್ಮಾಣ ಸಾಧ್ಯ. – ಶ್ರೀಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ.

ತಿ.ನರಸೀಪುರ, ಮೇ 20– ಸಮಾಜದಲ್ಲಿ ಮಾನವೀಯತೆ, ಸಹನೆ ಮತ್ತು ನೈತಿಕತೆ ಉಳಿಯಬೇಕಾದರೆ ಬಸವಣ್ಣನವರ ವಚನಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ಅಗತ್ಯ ಎಂದು ವಾಟಾಳು ಸೂರ್ಯ ಸಿಂಹಾಸನ ಮಠದ ಪೀಠಾಧ್ಯಕ್ಷ ಶ್ರೀಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ತಾಲೂಕಿನ ಧರ್ಮಯ್ಯನಹುಂಡಿ ಗ್ರಾಮದಲ್ಲಿ ನಡೆದ ಜಗಜ್ಯೋತಿ ಬಸವೇಶ್ವರ ಜಯಂತಿಯಲ್ಲಿ ಬಸವೇಶ್ವರರ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ವಿಶ್ವಗುರು ಬಸವಣ್ಣ ಅವರ ಜಯಂತಿ ಕೇವಲ ಆಚರಣೆಯಲ್ಲ ಅದು ಮಾನವೀಯ ಮೌಲ್ಯಗಳನ್ನು ನೆನಪಿಸುವ ಮಹೋತ್ಸವವಾಗಿದೆ. ಬಸವಣ್ಣನವರು ಸಮಾಜದಲ್ಲಿ ಸಮಾನತೆ, ಶ್ರಮದ ಗೌರವ, ದಾಸೋಹ ಹಾಗೂ ಸತ್ಯದ ಬದುಕಿನ ಸಂದೇಶವನ್ನು ಸಾರಿದರು. ಅವರ ವಚನಗಳು ಇಂದಿಗೂ ಸಮಾಜಕ್ಕೆ ದಾರಿದೀಪವಾಗಿವೆ. ಗ್ರಾಮದ ಜನರು ಒಗ್ಗಟ್ಟಿನಿಂದ ಬಸವ ಜಯಂತಿ ಆಚರಿಸುತ್ತಿರುವುದು ಸಂತಸದ ಸಂಗತಿ. ಇಂತಹ ಕಾರ್ಯಕ್ರಮಗಳು ಯುವ ಪೀಳಿಗೆಗೆ ಸಂಸ್ಕಾರ ಮತ್ತು ಆದರ್ಶಗಳನ್ನು ಪರಿಚಯಿಸುತ್ತವೆ. ಬಸವಣ್ಣನವರ 'ಕಾಯಕವೇ ಕೈಲಾಸ' ಎಂಬ ತತ್ವ ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ದುಡಿಮೆ, ಪ್ರಾಮಾಣಿಕತೆ ಮತ್ತು ಪರೋಪಕಾರದಿಂದ ಜೀವನ ಸಾಗಿಸಿದಾಗ ಸಮಾಜದಲ್ಲಿ ಶಾಂತಿ ಮತ್ತು ಅಭಿವೃದ್ಧಿ ಸಾಧ್ಯವಾಗುತ್ತದೆ ಎಂದರು.

ಬಸವಣ್ಣನವರು ಜಾತಿ–ಮತ ಭೇದವಿಲ್ಲದ ಸಮ ಸಮಾಜದ ಕನಸನ್ನು ಕಂಡವರು. ಪ್ರತಿಯೊಬ್ಬರೂ ಪರಸ್ಪರ ಪ್ರೀತಿ, ಸಹಕಾರ ಮತ್ತು ಸಹಿಷ್ಣುತೆಯಿಂದ ಬದುಕಬೇಕು ಎಂಬ ಸಂದೇಶ ನೀಡಿದ್ದಾರೆ. ಇಂದು ಸಮಾಜದಲ್ಲಿ ಮಾನವೀಯ ಮೌಲ್ಯಗಳು ಉಳಿಯಬೇಕಾದರೆ ಬಸವ ತತ್ವಗಳನ್ನು ನಾವು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಬಸವಣ್ಣನವರ ವಚನಗಳು ಪ್ರತಿಯೊಬ್ಬರ ಬದುಕಿಗೆ ಬೆಳಕಾಗಿ, ಸನ್ಮಾರ್ಗದಲ್ಲಿ ನಡೆಯುವ ಶಕ್ತಿ ನೀಡುತ್ತವೆ. ಅವರ ಆದರ್ಶಗಳು ಶಾಶ್ವತವಾಗಿದ್ದು, ಸಮಾಜಕ್ಕೆ ಸದಾ ಪ್ರೇರಣೆಯಾಗಿವೆ. ಗ್ರಾಮದಲ್ಲಿ ಇಂತಹ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಹೆಚ್ಚಾಗಿ ನಡೆಯಲಿ. ಗ್ರಾಮದ ಜನತೆಗೆ ಸುಖ, ಶಾಂತಿ, ಸಮೃದ್ಧಿ ಲಭಿಸಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ. ಬಸವಣ್ಣನವರ ಆಶೀರ್ವಾದ ಎಲ್ಲರ ಮೇಲೂ ಸದಾ ಇರಲಿ ಎಂದರು.

ಇದೇ ವೇಳೆ ಜಗಜ್ಯೋತಿ ಬಸವೇಶ್ವರ ಪುತ್ಥಳಿ ನಿರ್ಮಾಣಕ್ಕೆ ಶ್ರೀಗಳು ಭೂಮಿ ಪೂಜೆ ನೆರವೇರಿಸಿದರು. ಗ್ರಾಮದ ಶಾಲೆಯಲ್ಲಿ ಕಳೆದ 20 ವರ್ಷಗಳಿಂದ ಶಿಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ನಾಗಲಿಂಗು ದಂಪತಿಯನ್ನು ಗ್ರಾಮಸ್ಥರು ಸನ್ಮಾನಿಸಿದರು.

ಹೊಸೂರುಹುಂಡಿ ಮಠದ ಶ್ರೀರಾಜಶೇಖರ ಸ್ವಾಮೀಜಿ, ವಾಟಾಳು ಕಿರಿಯಶ್ರೀ ಶಿವಕುಮಾರಸ್ವಾಮೀಜಿ, ಹೆಳವರಹುಂಡಿ ಶ್ರೀಗಳು, ಧರ್ಮಯ್ಯನಹುಂಡಿ ಗೌಡರು, ಗ್ರಾಮಸ್ಥರು, ಬಸವೇಶ್ವರ ಯುವ ಬಳಗದ ಸದಸ್ಯರು ಹಾಜರಿದ್ದರು.

ಶ್ರೀಕಂಠೇಶ್ವರನ ಹುಂಡಿಯಲ್ಲಿ 1.48 ಕೋಟಿ ಸಂಗ್ರಹ



ನಂಜನಗೂಡು, ಮೇ 20– ನಗರದ ಶ್ರೀಕಂಠೇಶ್ವರಸ್ವಾಮಿ ದೇವಾಲಯದ ಹುಂಡಿಯಲ್ಲಿ 1 ಕೋಟಿ 48 ಲಕ್ಷ 33 ಸಾವಿರ ರೂ. ಹಾಗೂ 51 ಗ್ರಾಂ ಚಿನ್ನ, 1.700 ಕೆಜಿ ಬೆಳ್ಳಿ ಹಾಗೂ 31 ವಿದೇಶಿ ಕರೆನ್ಸಿ ಲಭ್ಯವಾಗಿದೆ.

ಬುಧವಾರ ದೇಗುಲದ ದಾಸೋಹ ಭವನದ ಆವರಣದಲ್ಲಿ ನಡೆದ ಮಾಸಿಕ ಹುಂಡಿ ಎಣಿಕೆ ಕಾರ್ಯ ನಡೆಯಿತು. ಈ ವೇಳೆ 1 ಕೋಟಿ 48 ಲಕ್ಷ 33 ಸಾವಿರದ 874 ರೂ. ಲಭ್ಯವಾಗಿದ್ದು, 51 ಗ್ರಾಂ ಚಿನ್ನ, 1 ಕೆಜಿ 700 ಗ್ರಾಂ ಬೆಳ್ಳಿ ಹಾಗೂ ವಿವಿಧ ದೇಶಗಳ 31 ಕರೆನ್ಸಿ ಸಂಗ್ರಹವಾಗಿದೆ.

ಶ್ರೀಕಂಠೇಶ್ವರಸ್ವಾಮಿ ದೇವಾಲಯದ ಕಾರ್ಯ ನಿರ್ವಾಹಕ ಅಧಿಕಾರಿ ಸಿ.ಜೆ.ಕೃಷ್ಣ ನೇತೃತ್ವದಲ್ಲಿ ನಡೆದ ಹುಂಡಿ ಎಣಿಕೆ ಕಾರ್ಯದಲ್ಲಿ ಸ್ತ್ರೀ ಶಕ್ತಿ ಸ್ವಸಹಾಯ ಸಂಘಗಳ ಮಹಿಳಾ ಸದಸ್ಯರು ಹಾಗೂ ದೇವಾಲಯದ ಸಿಬ್ಬಂದಿ ಹಾಜರಿದ್ದರು.

ಬಾಲಸುಬ್ರಹ್ಮಣ್ಯ ನಿಧನ



ನಂಜನಗೂಡು, ಮೇ 20– ನಗರದ ಎಕ್ಸ್‌ಟೆನ್ಷನ್ 15ನೇ ಕ್ರಾಸ್ ನಿವಾಸಿ, ಗುತ್ತಿಗೆದಾರ ಬಾಲಸುಬ್ರಹ್ಮಣ್ಯ (58) ಬುಧವಾರ ನಿಧನರಾದರು. ಮೃತರು ಪತ್ನಿ ಅನಿತಾ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಬೆಳಗ್ಗೆ 11 ಗಂಟೆಗೆ ತಾಲೂಕಿನ ಉಪ್ಪಿನಹಳ್ಳಿಯಲ್ಲಿರುವ ಮೃತರ ತೋಟದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೂರನೇ ಪುಟದಿಂದ

ಖಾಲಿ ಇರುವ 15 ಸಾವಿರ ಶಿಕ್ಷಕರ ನೇಮಕ

ಶೇ.94.10ರಷ್ಟು ಫಲಿತಾಂಶ ದಾಖಲಾಗಿದೆ. ಇದು ಕಳೆದ ವರ್ಷಕ್ಕಿಂತ ಶೇ.14.06ರಷ್ಟು ಹೆಚ್ಚಾಗಿದೆ. ಪಿಯುಸಿ ಯಲ್ಲಿ ಈ ಬಾರಿ ಶೇ.86.48ರಷ್ಟು ಫಲಿತಾಂಶ ಹೆಚ್ಚಳವಾಗಿದ್ದು, ಕಳೆದ ವರ್ಷಕ್ಕಿಂತ ಶೇ.13ರಷ್ಟು ಹೆಚ್ಚಾಗಿದೆ.

ಎಸ್‌ಎಸ್‌ಎಲ್‌ಸಿಯಲ್ಲಿ ಶೇ.100ರಷ್ಟು ಫಲಿತಾಂಶ ಪಡೆದ ಶಾಲೆಗಳ ಸಂಖ್ಯೆ 2,393 ಇದ್ದು, ಕಳೆದ ವರ್ಷ 766 ಶಾಲೆಗಳು ಶೇ.100ರಷ್ಟು ಫಲಿತಾಂಶ ದಾಖಲಿಸಿದ್ದವು. ಈ ಬಾರಿ ಎಸ್‌ಎಸ್‌ಎಲ್‌ಸಿಯಲ್ಲಿ ಎಸ್‌ಸಿ ಮತ್ತು ಎಸ್‌ಟಿ ವಿದ್ಯಾರ್ಥಿಗಳ ಫಲಿತಾಂಶ ಶೇ.18ರಷ್ಟು ಹೆಚ್ಚಳವಾಗಿದೆ. ಇದೇ ರೀತಿ ಎಲ್ಲಾ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಫಲಿತಾಂಶ ಗಣನೀಯವಾಗಿ ಸುಧಾರಣೆಯಾಗಿದೆ.

ಕೆಟಗರಿ–1 ಶೇ.16.6, 2ಎ–ಶೇ. 11.5, 2ಬಿ– ಶೇ.18, 2ಬಿ–ಶೇ.18, 3ಎ– ಶೇ 8.12, 3ಬಿ– ಶೇ.10ರಷ್ಟು ಫಲಿತಾಂಶ ಸುಧಾರಣೆಯಾಗಿದೆ ಎಂದರು. ಕಲ್ಯಾಣ ಕರ್ನಾಟಕದಲ್ಲಿ ಎಸ್‌ಎಸ್‌ಎಲ್‌ಸಿ ಫಲಿತಾಂಶವನ್ನು ಖಾಸಗಿ ಶಾಲೆಗಳಿಗೆ ಹೋಲಿಸಿದರೆ ಶೇ.2ರಷ್ಟು ಹೆಚ್ಚಾಗಿದೆ, ಈ ಬಾರಿ ಯಾವುದೇ ವಿದ್ಯಾರ್ಥಿಗಳಿಗೆ ಗ್ರೇಸ್ ಅಂಕ ನೀಡಿಲ್ಲ.

2026ರಲ್ಲಿ ದ್ವಿತೀಯ ಪಿಯುಸಿ ಉತ್ತೀರ್ಣ ಪ್ರಮಾಣ ಶೇಕಡ 86.48, 2025ರಲ್ಲಿ ಶೇಕಡ 73.45 ಉತ್ತೀರ್ಣ ಪ್ರಮಾಣ ಇದ್ದು ಶೇಕಡ 13.03ರಷ್ಟು ಹೆಚ್ಚಳವಾಗಿದೆ.

ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆ ಮಾಡಿದ್ದು ಪ್ರಸಕ್ತ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಉತ್ತೀರ್ಣ ಪ್ರಮಾಣ ಗ್ರಾಮೀಣ ಪ್ರದೇಶದಲ್ಲಿ ಶೇಕಡ 94.80 ದಾಖಲಾಗಿದೆ, ನಗರ ಪ್ರದೇಶದಲ್ಲಿ ಶೇಕಡ 93.20ರಷ್ಟಿದೆ. ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳ ಸಾಧನೆ ಪ್ರಸಕ್ತ ಸಾಲಿನಲ್ಲಿ ಶೇಕಡ 87.62ರಷ್ಟಿದ್ದರೆ, ನಗರ ಪ್ರದೇಶದ ವಿದ್ಯಾರ್ಥಿಗಳ ಉತ್ತೀರ್ಣ ಪ್ರಮಾಣ ಶೇಕಡ 85.95 ದಾಖಲಾಗಿದೆ ಎಂದರು.

ಅಂತಾ ಇವತ್ತೇ ನಂಗೆ ಗೊತ್ತಾಗಿದ್ದು...!

ಪ್ರಧಾನಿ ಆದರೆ, ದೇಶ ಬಿಟ್ಟು ಹೋಗುತ್ತೇನೆ ಎಂದು ದೇವೇಗೌಡರು ಹೇಳಿದ್ದರು. ಮೋದಿಯವರು, ದೇಶ ಬಿಡಬೇಡಿ, ನಮ್ಮ ಮನೆಯಲ್ಲೇ ಇರಿ ಎಂದು ಹೇಳಿಲ್ಲವೇ ಎಂದು ಡಿಕೆ ಶಿವಕುಮಾರ್ ಲೇವಡಿ ಮಾಡಿದ್ದಾರೆ. ನಾನಾಗಲಿ ಅಥವಾ ಮುಖ್ಯಮಂತ್ರಿಗಳಾಗಲಿ ನಾಯಕತ್ವ ಬದಲಾವಣೆಯ ಬಗ್ಗೆ ಎಲ್ಲೂ ಬಹಿರಂಗವಾಗಿ ಮಾತನಾಡಲಿಲ್ಲ. ಕೆಎನ್ ರಾಜಣ್ಣನವರು ನಮ್ಮ ಹೈಕಮಾಂಡ್ ಎಂದು ಇವತ್ತೇ ಗೊತ್ತಾಗಿದ್ದು. ಎಲ್ಲಾ 136 ಶಾಸಕರ ಬೆಂಬಲ ನಮಗಿದೆ, ಇಲ್ಲಿ ಯಾವುದೇ ಬಣ ರಾಜಕೀಯ ಎನ್ನುವುದಿಲ್ಲ. ಸಿದ್ದರಾಮಯ್ಯ ನಮ್ಮ ಮುಖ್ಯಮಂತ್ರಿಗಳು. ಬದಲಾವಣೆ ಎಂದರೆ, ಯಾರು ಪದತ್ಯಾಗ ಮಾಡುತ್ತಾರೆ ಎನ್ನುವುದು ಗೊತ್ತಾಗಬೇಕಲ್ಲವೇ. ಬಹುಶಃ ರಾಜಣ್ಣನವರಿಗೆ ಗೊತ್ತಿರಬೇಕು ಎಂದು ಡಿ.ಕೆ.ಶಿವಕುಮಾರ್ ವ್ಯಂಗ್ಯವಾಡಿದ್ದಾರೆ.

ರಾಜಕೀಯದಲ್ಲಿ ಬಿರುಸಿನ ಚಟುವಟಿಕೆ

ಮುಖಾಮುಖಿ ಚರ್ಚೆ ನಡೆಸಿದ್ದಾರೆ. ಈ ವೇಳೆ ತಾವು ಅಧಿಕಾರ ಬಿಟ್ಟುಕೊಡಲು ಸಿದ್ಧ. ಆದರೆ, ರಾಹುಲ್ ಗಾಂಧಿ ಅವರಿಂದ ನನಗೆ ಸಂದೇಶ ಬರಬೇಕೆಂದು ಸಿದ್ದರಾಮಯ್ಯ ಮತ್ತೊಮ್ಮೆ ತಮ್ಮ ಹಳೆಯ ಪಟ್ಟನ್ನೇ ಮುಂದಿಟ್ಟಿದ್ದಾರೆ.

ಸಿದ್ದರಾಮಯ್ಯ ಅವರ ಕಠಿಣ ನಿಲುವಿನ ನಂತರ ಖರ್ಗೆ, ಎಐಸಿಸಿ ರಾಜಕೀಯ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರಿಗೆ ದೂರವಾಣಿ ಕರೆ ಮಾಡಿ, ಕೇರಳಂ ಸಮಸ್ಯೆ ಬಗೆಹರಿಯಿತು, ಅದೇ ರೀತಿ ಕರ್ನಾಟಕ ಕಾಂಗ್ರೆಸ್‌ನಲ್ಲಿನ ಗೊಂದಲ ನಿವಾರಣೆಗೆ ರಾಹುಲ್ ಗಾಂಧಿ ಅವರೊಂದಿಗೆ ಸಮಯ ನಿಗದಿ ಮಾಡಿ ಎಂದು ತಿಳಿಸಿದ್ದಾರೆ. ಕರ್ನಾಟಕದ ಸಮಸ್ಯೆಯನ್ನು ದೀರ್ಘಕಾಲ ಎಳೆಯದೆ ಆದಷ್ಟು ಶೀಘ್ರ ಇತ್ಯರ್ಥಗೊಳಿಸಬೇಕಿದೆ, ತಪ್ಪಿದರೆ ನಾವೇ ಗೊಂದಲಕ್ಕೆ ಎಡೆ ಮಾಡಿಕೊಟ್ಟಂತಾಗುತ್ತದೆ. ಹಾಗಾಗಿ ಕರ್ನಾಟಕದ ಬಗ್ಗೆ ಒಂದು ತೀರ್ಮಾನಕ್ಕೆ ಬರೋಣ ಎಂದು ಖರ್ಗೆ ಹೇಳುತ್ತಿದ್ದಂತೆ ಆದಷ್ಟು ಶೀಘ್ರವೇ ಸಮಯ ನಿಗದಿ ಮಾಡುವುದಾಗಿ ವೇಣುಗೋಪಾಲ್ ಅತ್ತ ಕಡೆಯಿಂದ ಭರವಸೆ ನೀಡಿದ್ದಾರೆ. ಈ ಬೆಳವಣಿಗೆ ನಂತರವೇ ಮಂಗಳವಾರ ಬೆಳಗ್ಗೆ ಮತ್ತು ರಾತ್ರಿ ಮುಖ್ಯಮಂತ್ರಿ ಆಪ್ತರು ಪ್ರತ್ಯೇಕ ಸಭೆ ನಡೆಸಿದ್ದಲ್ಲದೆ, ಇಂದು ಬೆಳಗ್ಗೆ ಮತ್ತೆ ಜಾರ್ಜ್ ನಿವಾಸದಲ್ಲಿ ಅಧಿಕಾರ ಹಸ್ತಾಂತರಕ್ಕೆ ಸಂಬಂಧಿಸಿದಂತೆ ಸಮಾಲೋಚನೆ ಮಾಡಿದರು.

ಸಭೆ ಮುಗಿಯುತ್ತಿದ್ದಂತೆ ಮುಖ್ಯಮಂತ್ರಿ ಅವರನ್ನು ಸಂಪರ್ಕಿಸಿದ ಸಚಿವರು, ಸಿದ್ದರಾಮಯ್ಯ ಅವರನ್ನು ನಿಗೂಢ ಸ್ಥಳವೊಂದಕ್ಕೆ ಕರೆಸಿಕೊಂಡು ಚರ್ಚಿಸಿದರು.

ಈ ಎಲ್ಲಾ ಬೆಳವಣಿಗೆ ಬೆನ್ನಲ್ಲೇ ಶಿವಕುಮಾರ್ ರಾಷ್ಟ್ರಮಟ್ಟದ ಆಂಗ್ಲ ವಾಹಿನಿಯೊಂದಕ್ಕೆ ಮಾಹಿತಿ ನೀಡಿ, ನನ್ನನ್ನು ಮತ್ತು ಮುಖ್ಯಮಂತ್ರಿ ಅವರನ್ನು ಎಐಸಿಸಿ ನಾಯಕರು ಶೀಘ್ರದಲ್ಲೇ ಮಾತುಕತೆಗೆ ಕರೆಯಲಿದ್ದಾರೆ ಎಂದಷ್ಟೇ ತಿಳಿಸಿದರು.

ಪಾಲಿಕೆಗಳಿಗೆ ಚುನಾವಣೆ ನಡೆಸಿ

ಚುನಾವಣೆಗಳನ್ನು ಪೂರ್ಣಗೊಳಿಸಬೇಕು ಎಂಬುದಾಗಿ ಜನವರಿ 12ರಂದು ನಿರ್ದೇಶಿಸಿದ್ದ ಸುಪ್ರೀಂಕೋರ್ಟ್ ತನ್ನ ಆದೇಶ ಮಾರ್ಪಡಿಸುವಂತೆ ಕೋರಲಾಗಿತ್ತು. ನ್ಯಾಯಾಲಯದ ನಿರ್ದೇಶನದಂತೆ ಚುನಾವಣೆ ಪೂರ್ಣಗೊಳಿಸಲು ಪೂರ್ವಭಾವಿ ಕ್ರಮ ತೆಗೆದುಕೊಳ್ಳಲಾಗಿದೆ ಎಂಬುದಾಗಿ ಆಯೋಗ ತನ್ನ ಅರ್ಜಿಯಲ್ಲಿ ತಿಳಿಸಿತ್ತು. ಕೇಂದ್ರ ಸರ್ಕಾರ ಜನಗಣತಿಗೆ ಆದೇಶಿಸಿರುವುದರಿಂದ ರಾಜ್ಯ ಸರ್ಕಾರಿ ಅಧಿಕಾರಿಗಳು ವ್ಯಕ್ತಪಡಿಸಿದ ಕಳವಳಗಳು ಮೇಲ್ನೋಟಕ್ಕೆ ನಿಜವೆಂದು ತೋರುತ್ತದೆ, ಚುನಾವಣೆಗಳನ್ನು ನಡೆಸಲು ರಾಜ್ಯ ಚುನಾವಣಾ ಆಯೋಗಕ್ಕೆ ಸಹಾಯ ಮಾಡುವ ಜವಾಬ್ದಾರಿ ಹೊಂದಿರುವ ಅಧಿಕಾರಿಗಳ ಸಂಪೂರ್ಣ ಸಮಯ ಮತ್ತು ಲಾಜಿಸ್ಟಿಕ್ಸ್ ಅನ್ನು ಎಸ್‌ಐಆರ್ ಆಕ್ರಮಿಸಿಕೊಂಡಿದೆ.

ನರಕ ದರ್ಶನ ಮಾಡಿಸಿದ ಆರ್‌ಟಿಐ ಕಾರ್ಯಕರ್ತ!



"ಹಾಡು ಹಗಲೇ ಜನನಿಬಿಡ ಪ್ರದೇಶದಲ್ಲಿ ನಡೆದಿರುವ ಈ ಘಟನೆ ಕಂಡ ಜನರಿಗೆ ಮೈಸೂರಿನಲ್ಲಿ ದುಢೋರರು, ಮಾಫಿಯಾಗಳಿಗೆ ಕಾನೂನಿನ ಭಯ ಇಲ್ಲವೆ ಎಂಬ ಪ್ರಶ್ನೆ ಕಾಡಿದೆ. ಸಿನಿಮಾಗಳಲ್ಲಿ ನೋಡುತ್ತಿದ್ದ ದೃಶ್ಯಗಳನ್ನು ಕಣ್ಣಾರೆ ನೋಡುತ್ತಿರುವುದರಿಂದ ನಾಗರಿಕರು ಆತಂಕಗೊಂಡಿದ್ದಾರೆ. ಪೊಲೀಸ್ ಠಾಣೆ ಸನಿಹದಲ್ಲೆ ಬಾನೆಟ್ ಮೇಲಿದ್ದ ವ್ಯಕ್ತಿಯ ಜೊತೆ ಕಾರು ಚಾಲನೆ ಮಾಡಿದ್ದಾನೆ. ಇಂತಹವರಿಗೆ ಕಾನೂನು ಸುವ್ಯವಸ್ಥೆ ಬಗ್ಗೆ ಕಿಂಚಿತ್ತೂ ಗೌರವ, ಭಯ ಇಲ್ಲ. ಪೊಲೀಸರ ಅಂಜಿಕೆಯಂತೂ ಇಲ್ಲವೆ ಎಂಬ ಅನುಮಾನ ಜನರನ್ನು ಕಾಡಿದೆ.

ಬಿಸಾಡಿ ಹೋಗಿದ್ದಾನೆ. ಇಂತಹ ಭಯಂಕರ ಹಾಗೂ ಅಮಾನವೀಯ ಘಟನೆ ಮೈಸೂರಿನ ಕುವೆಂಪುನಗರದಲ್ಲಿ ಇಂದು ನಡೆದಿದೆ.

ಮೈಸೂರಿನ ಆರ್‌ಟಿಐ ಕಾರ್ಯಕರ್ತ ಗಂಗರಾಜು, ಸಾಲ ಕೊಟ್ಟ ಹಣ ಕೇಳಿದ ವ್ಯಕ್ತಿಯ ಪ್ರಾಣದ ಜೊತೆ ಚೆಲ್ಲಾಟವಾಡಿದ್ದಾನೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಭೂಮಾಲೀಕರಿಗೆ ನೀಡುವ ಶೇಕಡ 50:50 ಅನುಪಾತದಡಿ ಕಲ್ಪಿಸಲಾದ ನಿವೇಶನ ಖರೀದಿಗೆ ಧನಂಜಯ ಎಂಬಾತ, ಗಂಗರಾಜು ಮೂಲಕ ಹಣ ನೀಡಿದ್ದರಂತೆ. ಆದರೆ, ನಿವೇಶನ ರಿಜಿಸ್ಟರ್ ಮಾಡಿಸುವ ವೇಳೆಗೆ ಮುಡಾದಲ್ಲಿ ಭಾರೀ ನಿವೇಶನ ಹಗರಣ ಬಯಲಾಗಿ, ಶೇಕಡ 50:50 ಅನುಪಾತದ ನಿವೇಶನ ಮಂಜೂರು ಸ್ಥಗಿತಗೊಳಿಸಲಾಯಿತು. ನಿವೇಶನಕ್ಕೆ ನೀಡಿದ್ದ ಹಣ ವಾಪಾಸು ನೀಡುವಂತೆ ಗಂಗರಾಜುವಿಗೆ ಧನಂಜಯ ಅನೇಕ ದಿನಗಳಿಂದ ದುಂಬಾಲು ಬಿದ್ದಿದ್ದನಂತೆ. ಇಂದು ಸಂಜೆ 4 ಗಂಟೆ ವೇಳೆಗೆ ಮೈಸೂರಿನ ರಾಮಕೃಷ್ಣನಗರದ ಸಬ್ ರಿಜಿಸ್ಟಾರ್ ಕಚೇರಿ ಬಳಿ ಗಂಗರಾಜು ಎದುರುಗೊಂಡಿದ್ದಾನೆ.

ಈ ಸಂದರ್ಭದಲ್ಲಿ ಹಣ ನೀಡುವಂತೆ ಧನಂಜಯ ಪಟ್ಟು ಹಿಡಿದಿದ್ದಾನೆ. ಯಾರಿಗೆ ಹಣ ಕೊಟ್ಟಿದ್ದೀಯೋ ಅವರಿಂದಲೇ ವಸೂಲಿ ಮಾಡಿಕೊ ಎಂದು ಹೇಳಿ ಗಂಗರಾಜು ಕಾರು ಹತ್ತಿದ್ದಾರೆ. ಹಣ ಕೊಡದೆ ಮುಂದೆ ಹೋಗಲು ನಿನ್ನನ್ನ ಬಿಡುವುದಿಲ್ಲ ಎಂದು ಧನಂಜಯ ಕಾರಿಗೆ ಅಡ್ಡಲಾಗಿ ನಿಂತಿದ್ದಾನೆ.

ಈ ವೇಳೆ ಗಂಗರಾಜು ಧನಂಜಯನಿಗೆ ಕಾರು ಡಿಕ್ಕಿ ಹೊಡೆಸಿದ್ದಾನೆ. ಧನಂಜಯ, ಡಿಕ್ಕಿ ಹೊಡೆದ ರಭಸಕ್ಕೆ ಅನಾಮತ್ತಾಗಿ ಕಾರಿನ ಬಾನೆಟ್ ಮೇಲೆ ಬಿದ್ದಿದ್ದಾನೆ. ಈ ಸಂದರ್ಭದಲ್ಲಿ ಬಾನೆಟ್‌ನಿಂದ ಧನಂಜಯ ಕೆಳಗೆ ಇಳಿಯಲು ಅವಕಾಶ ನೀಡದ ಗಂಗರಾಜು ಸಬ್ ರಿಜಿಸ್ಟಾರ್ ಕಚೇರಿ ಬಳಿಯಿಂದ ಕುವೆಂಪುನಗರ ಪೊಲೀಸ್ ಠಾಣೆವರೆಗೆ ಸುಮಾರು ಮುಕ್ಕಾಲು ಕಿಲೋ ಮೀಟರ್ ದೂರ ವೇಗವಾಗಿಯೇ ಇತರೆ ವಾಹನಗಳ ನಡುವೆಯೇ ರಸ್ತೆಯಲ್ಲಿ ಕಾರು ಚಾಲನೆ ಮಾಡಿದ್ದಾನೆ.

ಕಾರು ಏಕಾಏಕಿ ಚಲಿಸಿದ್ದರಿಂದ ಕೆಳಗೆ ಬಿದ್ದರೆ ಪ್ರಾಣ ಹೋಗುತ್ತದೆ ಎಂಬ ಭಯದಿಂದ ಧನಂಜಯ ಬಾನೆಟ್ ಅಕ್ಕ ಪಕ್ಕದ ವೈಪರ್ ಗಟ್ಟಿಯಾಗಿ ಹಿಡಿದುಕೊಂಡಿದ್ದಾನೆ. ಯಾವುದಕ್ಕೂ ಕೇರ್ ಮಾಡದೇ ಅತೀ ವೇಗವಾಗಿ ಗಂಗರಾಜು, ಸಿನಿಮಾ ಸ್ಟೈಲ್‌ನಲ್ಲಿ ಸಾಗಿದ್ದಾನೆ. ಕಾರಿನ ಬಾನೆಟ್ ಮೇಲೆ ಪ್ರಾಣ ಉಳಿಸಿಕೊಳ್ಳಲು ಹೋರಾಡುತ್ತಿದ್ದ ಧನಂಜಯ, ಅಸಹಾಯಕನಾಗಿದ್ದ ದೃಶ್ಯ ನೋಡಿದ ದಾರಿ ಹೋಕರು ಭಯಭೀತರಾಗಿದ್ದಾರೆ. ಇಂತಹ ದೃಶ್ಯಗಳನ್ನು ಸಿನಿಮಾಗಳಲ್ಲಿ ನೋಡುತ್ತಿದ್ದ ಜನರು ಇಂದು ರಿಯಲ್ಲಾಗೇ ನೋಡಿ ಬೆಚ್ಚಿ ಬಿದ್ದರು.

ಹೀಗೆ ವೇಗವಾಗಿ ಕಾರು ಚಾಲನೆ ಮಾಡಿದ ಗಂಗರಾಜು, ಕೊನೆಗೆ ಕುವೆಂಪು ನಗರ ಪೊಲೀಸ್ ಠಾಣೆ ಮುಂದೆ ನಿಲ್ಲಿಸಿದ್ದಾನೆ. ಅಲ್ಲಿ ಬಾನೆಟ್ ಮೇಲಿಂದ ಕೆಳಗೆ ಬಿದ್ದ ಧನಂಜಯ, ನಿಟ್ಟುಸಿರು ಬಿಟ್ಟು, ನೇರವಾಗಿ ಪೊಲೀಸ್ ಠಾಣೆ ಒಳಗೆ ಹೋಗಿದ್ದಾರೆ. ಆದರೆ, ಗಂಗರಾಜು ಬಂದ ವೇಗದಲ್ಲೇ ಕಾರು ಓಡಿಸಿಕೊಂಡು ಅಲ್ಲಿಂದ ಜಾಗ ಖಾಲಿ ಮಾಡಿದ್ದಾನೆ.

ಕೊಟ್ಟ ಹಣ ಕೇಳಿದ್ದಕ್ಕೆ ಗಂಗರಾಜು ನನ್ನನ್ನು ಕೊಲೆ ಮಾಡಲು ಯತ್ನಿಸಿದ್ದಾನೆ ಎಂದು ಧನಂಜಯ ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ. ದೂರು ದಾಖಲಿಸಿಕೊಳ್ಳುವ ಪ್ರಕ್ರಿಯೆ ನಡೆಯುತ್ತಿದೆ ಎಂದು ಪೊಲೀಸರು 'ಮೈಸೂರು ಮಿತ್ರ'ನಿಗೆ ರಾತ್ರಿ ಬಹುಹೊತ್ತಿನವರೆಗೂ ಹೇಳುತ್ತಲೇ ಬಂದರು. ಈ ಮಧ್ಯೆ ಗಂಗರಾಜುವನ್ನು ಸಹ ಪೊಲೀಸ್ ಠಾಣೆಗೆ ಕರೆತಂದು ವಿಚಾರಣೆ ನಡೆಸುತ್ತಿದ್ದಾರೆ.

ಪ್ಲೇ–ಆಫ್ ರೇಸ್‌ನಲ್ಲಿ ಉಳಿದ ಕೆಕೆಆರ್

ಕೋಲ್ಕತ್ತಾ, ಮೇ 20(ವಿವಿಹೆಚ್)– ಬ್ಯಾಟಿಂಗ್ ಮತ್ತು ಬೌಲಿಂಗ್‌ನ ಸಂಘಟಿತ ಪ್ರದರ್ಶನದ ನೆರವಿನಿಂದ ಅತಿಥೇಯ ಮುಂಬೈ ಇಂಡಿಯನ್ಸ್ ತಂಡವನ್ನು 4 ವಿಕೆಟ್‌ಗಳಿಂದ ಮಣಿಸಿದ ಕೊಲ್ಕತ್ತಾ ನೈಟ್‌ರೈಡರ್ಸ್ ತಂಡ ಪ್ಲೇ–ಆಫ್ ರೇಸ್‌ನಲ್ಲಿ ಉಳಿದುಕೊಂಡಿದೆ. ಇಲ್ಲಿನ ಈಡೆನ್ ಗಾರ್ಡನ್ಸ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ನಿರ್ಣಾಯಕ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ ಕಾರ್ಬಿನ್ ಬಾಷ್ 32(18), ಹಾರ್ದಿಕ್ ಪಾಂಡ್ಯ 26(27) ನೆರವಿನಿಂದ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 147ರನ್ ಗಳಿಸಿತು.

ಈ ಮೊತ್ತವನ್ನು ಸರಾಗವಾಗಿ ಬೆನ್ನತ್ತಿದ ಕೋಲ್ಕತ್ತಾ ನೈಟ್ ರೈಡರ್ಸ್ ಮನೀಶ್ ಪಾಂಡೆ 45(33), ರೋವ್ಮನ್ ಪೋವೆಲ್ 40(30) ಸಮಯೋಚಿತ ಬ್ಯಾಟಿಂಗ್ ನೆರವಿನಿಂದ 18.5 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 148 ರನ್ ಗಳಿಸಿ ಗೆಲುವಿನ ನಗೆ ಬೀರಿತು.

ಸರ್ಕಾರಿ ಪದವಿ ಕಾಲೇಜುಗಳ ಶೈಕ್ಷಣಿಕ ಪ್ರವಾಸಕ್ಕೆ ಕಟ್ಟುನಿಟ್ಟಿನ ನಿಯಮ ಜಾರಿ

ಬೆಂಗಳೂರು: ರಾಜ್ಯದ ಸರ್ಕಾರಿ ಪದವಿ ಕಾಲೇಜುಗಳ ಶೈಕ್ಷಣಿಕ ಪ್ರವಾಸಗಳಿಗೆ ಇದೀಗ ಕಟ್ಟುನಿಟ್ಟಿನ ನಿಯಮಗಳು ಜಾರಿಯಾಗಿವೆ. ಇತ್ತೀಚೆಗೆ ವಿದ್ಯಾರ್ಥಿಗಳ ಪ್ರವಾಸ ಬಸ್ ಅಪಘಾತವಾದ ಹಿನ್ನೆಲೆ, ಕಾಲೇಜು ಶಿಕ್ಷಣ ಇಲಾಖೆ ಸುರಕ್ಷತೆಗೆ ಆದ್ಯತೆ ನೀಡಿ ಹೊಸ ಮಾರ್ಗಸೂಚಿ ಹೊರಡಿಸಿದೆ.

ಶೈಕ್ಷಣಿಕ ಪ್ರವಾಸ ವಿದ್ಯಾರ್ಥಿಗಳ ಬದುಕಿನಲ್ಲಿ ಹೊಸ ಅನುಭವ, ಸ್ನೇಹ ಮತ್ತು ಜ್ಞಾನ ನೀಡುವ ವಿಶೇಷ ಕ್ಷಣ. ಆದರೆ ಇತ್ತೀಚಿನ ಕೆಲವು ಅವಘಡಗಳು ಕಾಲೇಜು ಪ್ರವಾಸಗಳ ಸುರಕ್ಷತೆ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಎಬ್ಬಿಸಿದ್ದವು. ಇದೇ ಕಾರಣದಿಂದಾಗಿ ರಾಜ್ಯದ ಸರ್ಕಾರಿ ಪದವಿ ಕಾಲೇಜುಗಳ ಪ್ರವಾಸಗಳಿಗೆ ಕಾಲೇಜು ಶಿಕ್ಷಣ ಇಲಾಖೆ ಕಟ್ಟುನಿಟ್ಟಿನ ಮಾರ್ಗಸೂಚಿ ಜಾರಿಗೊಳಿಸಿದೆ. ಇನ್ನು ಮುಂದೆ ಯಾವುದೇ ಶೈಕ್ಷಣಿಕ ಪ್ರವಾಸಕ್ಕೂ ಇಲಾಖೆಯ ಪೂರ್ವಾನುಮತಿ ಕಡ್ಡಾಯ. ಒಂದು ದಿನದ ಸ್ಥಳೀಯ ಪ್ರವಾಸವಾಗಲಿ, ನಾಲ್ಕೈದು ದಿನಗಳ ದೂರದ ಪ್ರವಾಸವಾಗಲಿ, ಅನುಮತಿ ಪಡೆಯದೇ ಪ್ರವಾಸಕ್ಕೆ ತೆರಳಲು ಅವಕಾಶ ಇರುವುದಿಲ್ಲ. ಪ್ರವಾಸ ಆರಂಭಿಸುವ ಮೊದಲು ಸಮೀಪದ ಪೊಲೀಸ್ ಠಾಣೆಗೆ ಸಂಪೂರ್ಣ ಮಾಹಿತಿ ನೀಡಬೇಕು ಎಂಬ ಸೂಚನೆಯೂ ನೀಡಲಾಗಿದೆ.

ವಿದ್ಯಾರ್ಥಿಗಳ ಸುರಕ್ಷತೆಗೆ ಹೆಚ್ಚಿನ ಒತ್ತು ನೀಡಿರುವ ಇಲಾಖೆ, ನದಿ, ಸಮುದ್ರ, ಜಲಪಾತ, ದಟ್ಟ ಅರಣ್ಯ ಹಾಗೂ ಕಡಿದಾದ ಬೆಟ್ಟ ಪ್ರದೇಶಗಳಂತಹ ಅಪಾಯಕಾರಿ ತಾಣಗಳಿಗೆ ವಿದ್ಯಾರ್ಥಿಗಳನ್ನು ಕರೆದೊಯ್ಯುವುದನ್ನೇ ನಿಷೇಧಿಸಿದೆ. ಅಪಾಯಕಾರಿ ಸೆಲ್ಫಿ, ಸಾಹಸ ಚಟುವಟಿಕೆಗಳು, ಸಾಮಾಜಿಕ ಜಾಲತಾಣಗಳಿಗಾಗಿ ರೀಲ್ಸ್ ಮಾಡುವುದಕ್ಕೂ ಕಟ್ಟುನಿಟ್ಟಿನ ಎಚ್ಚರಿಕೆ ನೀಡಲಾಗಿದೆ. ಪೊಲೀಸ್ ಠಾಣೆಗೆ ಮಾಹಿತಿ ಕಡ್ಡಾಯ, ಅಪಾಯಕಾರಿ ಸ್ಥಳಗಳಿಗೆ ನಿಷೇಧ, ಪೋಷಕರ ಮುಚ್ಚಳಿಕೆ ಪತ್ರ ಕಡ್ಡಾಯ, ಕನಿಷ್ಠ ಒಬ್ಬ ಖಾಯಂ ಉಪನ್ಯಾಸಕ ಕಡ್ಡಾಯ, ಪ್ರವಾಸದ ವೇಳೆ ವಿದ್ಯಾರ್ಥಿಗಳು ಗುಂಪಿನಿಂದ ದೂರ ಹೋಗಬಾರದು. ಸ್ಥಳೀಯ ಸೂಚನಾ ಫಲಕಗಳು ಹಾಗೂ ಸುರಕ್ಷತಾ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ಇಲಾಖೆ ತಿಳಿಸಿದೆ.

ವಿದ್ಯಾರ್ಥಿಗಳ ಸುರಕ್ಷತೆ ದೃಷ್ಟಿಯಿಂದ ಸರ್ಕಾರದ ಈ ಕ್ರಮಕ್ಕೆ ಮಿಶ್ರ ಪ್ರತಿಕ್ರಿಯೆಗಳು ವ್ಯಕ್ತವಾಗುತ್ತಿವೆ. ಒಂದು ಕಡೆ ಸುರಕ್ಷತಾ ಕ್ರಮಗಳಿಗೆ ಮೆಚ್ಚುಗೆ ವ್ಯಕ್ತವಾಗುತ್ತಿದ್ದರೆ, ಇನ್ನೊಂದು ಕಡೆ ಅತಿಯಾದ ನಿಯಂತ್ರಣ ವಿದ್ಯಾರ್ಥಿಗಳ ಪ್ರವಾಸ ಅನುಭವಕ್ಕೆ ಅಡ್ಡಿಯಾಗಬಹುದು ಎಂಬ ಅಭಿಪ್ರಾಯವೂ ಕೇಳಿಬರುತ್ತಿದೆ

ಒಂದನೇ ತರಗತಿಗೆ ದಾಖಲಾಗಲು ವಯೋಮಿತಿ ಸಡಿಲಿಕೆ ಒಂದು ವಾರದಲ್ಲಿ ಸೂಕ್ತ ನಿರ್ಧಾರಕ್ಕೆ ಹೈಕೋರ್ಟ್ ಸೂಚನೆ



ಬೆಂಗಳೂರು: ಮುಂಬರುವ 2026–27ನೇ ಶೈಕ್ಷಣಿಕ ಸಾಲಿಗೆ ಒಂದನೇ ತರಗತಿಗೆ ದಾಖಲಾಗಲು ವಯೋಮಿತಿ ಸಡಿಲಿಕೆ ವಿಚಾರವನ್ನು ಮರುಪರಿಶೀಲಿಸಿ ಒಂದು ವಾರದೊಳಗೆ ಸೂಕ್ತ ಆದೇಶ ಹೊರಡಿಸುವಂತೆ ಶಾಲಾ ಶಿಕ್ಷಣ ಇಲಾಖೆಗೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಬೆಂಗಳೂರಿನ ಮಾಸ್ಟರ್ ಕೃಷ್ಣ ಗಣೇಶ್ ಸೇರಿ 6 ಮಂದಿ ವಿದ್ಯಾರ್ಥಿಗಳು ಹಾಗೂ ಅವರ ಪರವಾಗಿ ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಆರ್.ಕೃಷ್ಣಕುಮಾರ್ ಅವರಿದ್ದ ರಜಾಕಾಲದ ನ್ಯಾಯಪೀಠ ಈ ಆದೇಶ ನೀಡಿದೆ. ಅಲ್ಲದೇ, ವಯೋಮಿತಿ ವಿಚಾರದಲ್ಲಿ ವಿದ್ಯಾರ್ಥಿಗಳು ಹಾಗೂ ಪೋಷಕರು ತೊಂದರೆ ಎದುರಿಸುತ್ತಿದ್ದು, ಈ ಸಂಬಂಧ ಒಂದು ವಾರದೊಳಗೆ ಎಲ್ಲಾ ಆಯಾಮ ಗಳಲ್ಲೂ ಪರಿಶೀಲಿಸಿ ಆದೇಶ ಹೊರಡಿಸುವಂತೆ ಸೂಚನೆ ನೀಡಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ವಯೋಮಿತಿ ನಿಗದಿಪಡಿಸಿ ಶಾಲಾ ಶಿಕ್ಷಣ ಇಲಾಖೆ ಮಾ. 28ರಂದು ಆದೇಶ ಹೊರಡಿಸಲಾಗಿದೆ. ಅರ್ಜಿದಾರರು ಇನ್ನೂ 6 ವರ್ಷ ಪೂರ್ಣಗೊಳಿಸಿಲ್ಲ. ಆದರೆ, 2025–26 ನೇ ಸಾಲಿನ ಪೂರ್ವ ಪ್ರಾಥಮಿಕ ಶಿಕ್ಷಣ ಪೂರೈಸಿದ್ದಾರೆ. ಸರ್ಕಾರದ ಆದೇಶದಿಂದ ಸುಮಾರು ಐದು ಲಕ್ಷ ವಿದ್ಯಾರ್ಥಿಗಳಿಗೆ ತೊಂದರೆಯಾಗಲಿದೆ. ಆ ವಿದ್ಯಾರ್ಥಿಗಳು ಮತ್ತೆ ಯುಕೆಜಿ ಅಧ್ಯಯನ ಮಾಡುವ ಪರಿಸ್ಥಿತಿ ನಿರ್ಮಾಣವಾಗಲಿದೆ. ಹಾಗಾಗಿ ಮುಂದಿನ ಶೈಕ್ಷಣಿಕ ವರ್ಷಕ್ಕೆ ವಯೋಮಿತಿ ಸಡಿಲಿಸಿ ಶಾಲಾ ದಾಖಲಾತಿಗೆ ಅವಕಾಶ ಕಲ್ಪಿಸಬೇಕು ಎಂದು ವಿವರಿಸಿದರು. ಅದಕ್ಕೆ ಉತ್ತರಿಸಿದ ಸರ್ಕಾರಿ ವಕೀಲರು, ನ್ಯಾಯಸಮ್ಮತ ಸಮಯ ನೀಡಿದಲ್ಲಿ ಅರ್ಜಿದಾರರು ಸಲ್ಲಿಸಿರುವ ವಯೋಮಿತಿ ಸಡಿಲಿಕೆ ಮನವಿಯನ್ನು ಪರಿಗಣಿಸಿ ಅಗತ್ಯ ಆದೇಶವನ್ನು ಹೊರಡಿಸಲಾಗುವುದು ಎಂದು ನ್ಯಾಯಾಲಯಕ್ಕೆ ತಿಳಿಸಿದರು.

ಏನಿದು ಪ್ರಕರಣ?: ಕಳೆದ ಶೈಕ್ಷಣಿಕ ವರ್ಷದಲ್ಲಿ ನೀಡಿದ ಮಾದರಿಯಲ್ಲಿಯೇ 2026–27ನೇ ಶೈಕ್ಷಣಿಕ ವರ್ಷದ ಪ್ರಥಮ ತರಗತಿ ಪ್ರವೇಶಕ್ಕಾಗಿ ಕನಿಷ್ಠ ವಯೋಮಿತಿಯಲ್ಲಿ ಒಮ್ಮೆ ಸಡಿಲಿಕೆ ನೀಡಿ 5 ವರ್ಷ 5 ತಿಂಗಳು ವಯಸ್ಸಿನ ಮಕ್ಕಳಿಗೂ ಪ್ರವೇಶ ಅವಕಾಶ ಕಲ್ಪಿಸಬೇಕು ಎಂದು ನ್ಯಾಯಪೀಠವನ್ನು ಕೋರಲಾಗಿತ್ತು.

ಕಳೆದ ಹಲವಾರು ವರ್ಷಗಳಿಂದ ಶಾಲೆಗಳು ಅನುಸರಿಸುತ್ತಿದ್ದ ಪ್ರವೇಶ ಪದ್ಧತಿ ಮತ್ತು ಅರ್ಹತಾ ಮಾನದಂಡಗಳ ಆಧಾರದ ಮೇಲೆ ಶಾಲಾ ಶಿಕ್ಷಣ ವ್ಯವಸ್ಥೆಗೆ ಸೇರ್ಪಡೆಯಾಗಿದ್ದಾರೆ. ಪೋಷಕರು ತಮ್ಮ ಮಕ್ಕಳು 2026–27ನೇ ಶೈಕ್ಷಣಿಕ ವರ್ಷದಲ್ಲಿ ಪ್ರಥಮ ತರಗತಿಗೆ ಮುಂದುವರಿಯುತ್ತಾರೆ ಎಂಬ ನಿರೀಕ್ಷೆಯೊಂದಿಗೆ ಪೂರ್ವ ಪ್ರಾಥಮಿಕ ಶಾಲೆಗೆ ದಾಖಲಿಸಿದ್ದರು.

ಪ್ರೀ–ಸ್ಕೂಲ್ ಶಿಕ್ಷಣವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಮತ್ತು ಮಾನಸಿಕವಾಗಿ ಪ್ರಥಮ ತರಗತಿಗೆ ಸಿದ್ಧರಾಗಿರುವ ಅನೇಕ ಮಕ್ಕಳು ಈಗ ಒಂದು ಸಂಪೂರ್ಣ ಶೈಕ್ಷಣಿಕ ವರ್ಷ ಕಳೆದುಕೊಳ್ಳುವ ಆತಂಕ ಎದುರಿಸುತ್ತಿದ್ದಾರೆ ಎಂದು ಅರ್ಜಿಯಲ್ಲಿ ವಿವರಿಸಲಾಗಿತ್ತು.

ಎ.ಜೆ.ಬಾಲಣ್ಣ ನಿಧನ



ಮೈಸೂರು, ಮೇ 20– ಮೈಸೂರಿನ ನಿವಾಸಿ, ಮಾಜಿ ಉಪ ಮಹಾಪೌರ ಎ.ಜೆ. ಅರ್ಜುನ್ ಕುಮಾರ್ ಅವರ ಸಹೋದರ ಎ.ಜೆ.ಬಾಲಣ್ಣ (58) ಬುಧವಾರ ನಿಧನರಾದರು. ಮೃತರು, ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ನಾಳೆ 11 ಗಂಟೆಗೆ ನಂಜನಗೂಡಿನ ಅವರ ತೋಟದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಜಿಲ್ಲಾಡಳಿತದಿಂದ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತ್ಯೋತ್ಸವ

ಯುವ ಪೀಳಿಗೆ ಸಾಧಕರ ಜೀವನದ ಅನುಭವಗಳ ಆದರಿಸಿ ಬದುಕು ರೂಪಿಸಿಕೊಳ್ಳಿ: ಎಂಎಲ್‌ಸಿ ಸಿ.ಎನ್.ಮಂಜೇಗೌಡರ ಕಿವಿಮಾತು

ಮೈಸೂರು, ಮೇ20(ಎಂಕೆ)– ಮೈಸೂರಿನ ಕರ್ನಾಟಕ ಕಲಾಮಂದಿರದ ಕಿರುರಂಗಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ–ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಹಾಗೂ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತ್ಯೋತ್ಸವ ಸಮಿತಿ ವತಿಯಿಂದ ಬುಧವಾರ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಆಚರಿಸಲಾಯಿತು.

ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ, ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮಾತನಾಡಿ, ಯುವ ಪೀಳಿಗೆಯು ಹಿರಿಯರು, ಮಹನೀಯರು ಮತ್ತು ಸಾಧಕರ ಜೀವನದ ಅನುಭವಗಳನ್ನು ಅರಿತು, ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು ಎಂದರು.

ಸರ್ಕಾರವು ಮಹಾನ್ ವ್ಯಕ್ತಿಗಳ ಜಯಂತಿ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಸಮಾಜದ ಬುದ್ಧಿವಂತರು ಹಾಗೂ ಸಾಧಕರನ್ನು ಒಂದೇ ವೇದಿಕೆಗೆ ತರುತ್ತಿದೆ. ಸಾಧಕರು ತಮ್ಮ ಜೀವನದಲ್ಲಿ ಅನುಭವಿಸಿದ ಕಷ್ಟಗಳು ಹಾಗೂ ಅದರಿಂದ ಪಡೆದ ಯಶಸ್ಸಿನ ಫಲವನ್ನು ಇಂತಹ ವೇದಿಕೆಗಳ ಮೂಲಕ ಹಂಚಿಕೊಂಡಾಗ, ಅದು ಕೇಳುಗರ ಮನಸ್ಸಿನ ಮೇಲೆ ಪ್ರಭಾವ ಬೀರುತ್ತದೆ ಎಂದು ಹೇಳಿದರು.

ಸಮಾಜಕ್ಕೆ ಕೊಡುಗೆ ನೀಡಿದ ಮಹನೀಯರ ಸಾಧನೆಗಳನ್ನು ಸದಾ ಅನುಸರಿಸಬೇಕು. ಸಮಾಜವನ್ನು ಉತ್ತಮ ಹಾದಿಗೆ ತರಬೇಕಾದರೆ ಇಂತಹ ವೈಚಾರಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು, ಉತ್ತಮ ಚಲನಚಿತ್ರಗಳನ್ನು ವೀಕ್ಷಿಸುವುದು, ಒಳ್ಳೆಯ ಪುಸ್ತಕಗಳನ್ನು ಓದುವುದು, ದಿನಪತ್ರಿಕೆ ಹಾಗೂ ದೂರದರ್ಶನದಲ್ಲಿನ ಸುದ್ದಿಗಳನ್ನು ಗಮನಿಸುವುದು ಅವಶ್ಯವಾಗಿದ್ದು, ಇವುಗಳಿಂದ ಮನುಷ್ಯನಲ್ಲಿ ದೊಡ್ಡ ವೈಚಾರಿಕ ಬದಲಾವಣೆ ಸಾಧ್ಯವಾಗಲಿದೆ ಎಂದರು.

ಹೇಮರೆಡ್ಡಿ ಮಲ್ಲಮ್ಮ ಬಳಗದ ಅಧ್ಯಕ್ಷ ಡಾ.ವಾಮದೇವರು ಮಾತನಾಡಿ, ಸಮಾಜ, ನಾಡು ಮತ್ತು ದೇಶಕ್ಕಾಗಿ ಶ್ರಮಿಸಿದ ಮಹನೀಯರ ಸಾಧನೆ, ಅವರು ನೀಡಿದ ಕೊಡುಗೆಗಳು ಹಾಗೂ ಸಂದೇಶಗಳನ್ನು ಸಾರ್ವಜನಿಕರು ಮತ್ತು ಯುವ ಪೀಳಿಗೆಗೆ ತಲುಪಿಸುವುದು ಈ ಜಯಂತಿಗಳ ಮುಖ್ಯ ಉದ್ದೇಶವಾಗಿದೆ. ಈ ಸಂದೇಶಗಳನ್ನು ಜನರು ತಮ್ಮ ನಿಜ ಜೀವನದಲ್ಲಿ ಅಳವಡಿಸಿಕೊಂಡು ಉತ್ತಮ ಜೀವನವನ್ನು ರೂಪಿಸಿಕೊಳ್ಳಲು ಸಹಕಾರಿಯಾಗಲಿವೆ ಎಂದು ಮಂಜೇಗೌಡರು ಹೇಳಿದರು.

ಜೆಎಸ್‌ಎಸ್ ಮಹಿಳಾ ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ಜೆ.ಪುಷ್ಪಲತಾ ಮಾತನಾಡಿ, ಮಲ್ಲಮ್ಮನ ಚರಿತ್ರೆಯು ದ್ಯಾಂಪುರ ಚೆನ್ನಕವಿಗಳು ಬರೆದಿರುವ ಕೃತಿಯಾಗಿದ್ದು, ಇದನ್ನು ಗೋರು ಚನ್ನಬಸಪ್ಪನವರು ಹೊಸ ಗನ್ನಡ ಗದ್ಯಾನುವಾದದಲ್ಲಿ ನೀಡಿದ್ದಾರೆ. ಇದು ಸಾಧ್ವಿ ಶಿರೋಮಣಿಯಾದ ಗೃಹಿಣಿಯ ಜೀವನದ ಪಾವಿತ್ರ್ಯತೆಯನ್ನು ಪರಿಚಯಿಸುವ ಕೃತಿಯಾಗಿದೆ ಎಂದು ತಿಳಿಸಿದರು.

ಚಾರಿತ್ರಿಕ ವ್ಯಕ್ತಿ: ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಅವರು ಪುರಾಣದ ವ್ಯಕ್ತಿಯಲ್ಲ. ಬದಲಿಗೆ ಚಾರಿತ್ರಿಕ ವ್ಯಕ್ತಿಯಾಗಿದ್ದಾರೆ. ಮದರಾಸಿನ ಓರಿಯೆಂಟಲ್ ಲೈಬ್ರರಿಯಲ್ಲಿ ಸಿಗುವ ದಾಖಲೆಗಳ ಪ್ರಕಾರ, ಹೇಮರೆಡ್ಡಿ ಮತ್ತು ಮಲ್ಲಮ್ಮನವರು ಶ್ರೀಶೈಲ ಮಲ್ಲಿಕಾರ್ಜುನ ದೇವಸ್ಥಾನದ ಕಾರ್ಯಗಳನ್ನು ನೆರವೇರಿಸಿದ್ದಾರೆ ಎಂಬ ಉಲ್ಲೇಖವಿದೆ. ಮಲ್ಲಮ್ಮನ ಸಾತ್ವಿಕ ಗುಣವನ್ನು ಸಹಿಸದ ಅವಳ ಓರಗಿತ್ತಿಯರು ಕುತಂತ್ರ ನಡೆಸಿ, ಅವಳನ್ನು ದನ ಕಾಯಲು ಕೊಟ್ಟಿಗೆಗೆ ಹಾಕಿಬಿಡುತ್ತಾರೆ. ಕೊಟ್ಟಿಗೆಯಲ್ಲೇ ಜೀವನ ನಡೆಸುತ್ತಾ, ಹಸು–ಕರುಗಳನ್ನು ನೋಡಿಕೊಳ್ಳುವ ಅವಳಿಗೆ ಕೇವಲ ಒಣಗಿದ ಮತ್ತು ಹಳಸಿದ ಅನ್ನ ಆಹಾರವಾಗಿ ಸಿಗುತ್ತಿತ್ತು. ಅವಳಿಗೆ ಯಾವುದೇ ಒಳ್ಳೆಯ ಬಟ್ಟೆ, ಒಡವೆ ಅಥವಾ ಕೈಗೆ ಬಳೆಗಳಿರಲಿಲ್ಲ ಎಂದು ಮಾಹಿತಿ ನೀಡಿದರು.

ಶಾಂತ ಹಾಗೂ ತಾಳ್ಮೆಯಿಂದಲೇ ಎಲ್ಲಾ ಕಷ್ಟಗಳನ್ನು ಎದುರಿಸಿದ ಮಲ್ಲಮ್ಮ, ನಿಂದಿಸುವವರ ಮತ್ತು ಕುತಂತ್ರ ಮಾಡುವವರ ನಡುವೆಯು ಶಿವಧ್ಯಾನ ಮತ್ತು ಪ್ರಶಾಂತತೆಯಿಂದ ದುಸ್ಥಿತಿಯನ್ನೇ ಸುಸ್ಥಿತಿಯನ್ನಾಗಿ ಬದಲಾಯಿಸಿಕೊಂಡರು. ಹಾಗೆಯೇ ನಾವುಗಳು ಕೂಡ ಸಣ್ಣ–ಪುಟ್ಟ ಟೀಕೆಗಳಿಗೆ ತಕ್ಷಣವೇ ಪ್ರತಿಕ್ರಿಯಿಸದೆ, ಪರಿಸ್ಥಿತಿಯನ್ನು ಪ್ರಶಾಂತ ಮನಸ್ಸಿನಿಂದ ಸ್ವೀಕರಿಸಬೇಕು. ನಮ್ಮ ಸತ್ಕರ್ಮಗಳ ಮೂಲಕವೇ ಸಮಾಜಕ್ಕೆ ಮಾದರಿಯಾಗಬೇಕು ಎಂದು ಮನವರಿಕೆ ಮಾಡಿಕೊಟ್ಟರು. ಕನ್ನಡ–ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಹಿರಿಯ ವಿಜ್ಞಾನಿ ಡಾ.ತಿಪ್ಪೇಸ್ವಾಮಿ, ಹೇಮರೆಡ್ಡಿ ಮಲ್ಲಮ್ಮ ಬಳಗದ ಉಪಾಧ್ಯಕ್ಷೆ ಶಾರದಾ ಶಿವಲಿಂಗಸ್ವಾಮಿ, ಕಾರ್ಯದರ್ಶಿಗಳಾದ ಡಾ.ವಿಠಲ್ ಚುಳಿಕಿ, ಟಿ.ಮಹಾಂತೇಶ್ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ಕಲಾಮಂದಿರದ ಕಿರುರಂಗಮಂದಿರದಲ್ಲಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಆಚರಿಸಲಾಯಿತು.

> ಜಗತ್ತನ್ನು ಬದಲಾಯಿಸುವ ಮುನ್ನ ನಮ್ಮ ಸ್ವಂತ ಮನೆ, ಕುಟುಂಬದ ನಾಲ್ಕು ಜನರನ್ನು ಪ್ರೀತಿ ಮತ್ತು ಗೌರವದಿಂದ ಗೆಲ್ಲುವುದು ಮುಖ್ಯ. ನಮ್ಮ ನಡವಳಿಕೆಯಲ್ಲಿ ಪ್ರಾಮಾಣಿಕತೆ ಇದ್ದಾಗ ಮಾತ್ರ ಸಮಾಜದಲ್ಲಿ ಗೌರವ, ರಾಜಮನ್ನಣೆ ಹಾಗೂ ಗುರುಗಳ ಶ್ರೀರಕ್ಷೆ ಸಿಗಲು ಸಾಧ್ಯ.
> –ಜೆ.ಪುಷ್ಪಲತಾ, ಸಹಾಯಕ ಪ್ರಾಧ್ಯಾಪಕಿ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ದೃಶ್ಯಂ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಪೆಟ್ರೋಯೋಟ್ (ಮ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕೆಡಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲೋ ನವೀನ (ಕ)	4 ಪ್ರದರ್ಶನಗಳು
ರಾಜಕಮಲ್	
ಕರುಪ್ಪು (ತ)	4 ಪ್ರದರ್ಶನಗಳು
ಸಂಗಂ	
ದೃಶ್ಯಂ (ಕ)	4 ಪ್ರದರ್ಶನಗಳು
ಲಿಡೋ	
ಶಿಖಂಡಿ(ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಶೇರ್ (ಕ)	4 ಪ್ರದರ್ಶನಗಳು

ದಾಸ ಲಹರಿ–ಗಾಯನ...



ಅಧಿಕ ಜ್ಯೇಷ್ಠ ಮಾಸದ ಅಂಗವಾಗಿ ಉತ್ತರಾದಿ ಮಠವು ಮೈಸೂರಿನ ಅಗ್ರಹಾರದ ವಿಶ್ವೇಶ್ವರ ಸನ್ನಿಧಿ ಆವರಣದ ಬೃಹತ್ ವೇದಿಕೆಯಲ್ಲಿ ಹಮ್ಮಿಕೊಂಡಿರುವ ಅಧಿಕ ಮಾಸೋತ್ಸವ ಸಾಂಸ್ಕೃತಿಕ ಕಾರ್ಯಕ್ರಮ ಸರಣಿಯಲ್ಲಿ ಯುವ ಪ್ರತಿಭೆಗಳಾದ ಕೌಸಲ್ಯಾ ರಘುರಾಂ, ಎ.ಆರ್.ಅಪ್ರಮೇಯ ಅವರು ದಾಸ ಲಹರಿ–ಗಾಯನ ಸೇವೆ ಸಮರ್ಪಿಸಿದರು. ಪಕ್ಕವಾದ್ಯದಲ್ಲಿ ವಿದ್ವಾಂಸರಾದ ಗಣೇಶ ಭಟ್ಟ ಕೀಬೋರ್ಡ್, ಭೀಮಾಶಂಕರ (ತಬಲಾ), ಗುರುದತ್ತ (ರಿದಂ ಪ್ಯಾಡ್) ಸಹಕಾರ ನೀಡಿದರು.

ಕ್ರಿಕೆಟ್: ರಾಕರ್ಸ್ ಲೆವೆನ್ ತಂಡ ಪ್ರಥಮ...



ಇತ್ತೀಚೆಗೆ ಮೈಸೂರಿನ ರೈಲ್ವೆ ಕ್ರೀಡಾಂಗಣದಲ್ಲಿ ನಡೆದ ಮೊದಲನೇ ವರ್ಷದ ಮೈಸೂರು ಮಹಾರಾಜಾಸ್ ಕಪ್–2026 ಕ್ರಿಕೆಟ್ ಪಂದ್ಯಾವಳಿಯಲ್ಲಿ ರಾಕರ್ಸ್ ಲೆವೆನ್ ತಂಡ ಪ್ರಥಮ ಸ್ಥಾನ ಪಡೆದಿದೆ. ಈ ವೇಳೆ ತಂಡದ ನವೀನ, ಶಶಾಂಕ್, ದಯಾನಂದ, ಮಹೇಶ್, ಮನು, ರಾಥೋಡ್, ಮಂಜು, ವಿಷ್ಣು, ಲೋಕೇಶ್, ಅಭಿ, ಮೋಹನ್, ಮೋಹನ್‌ಕುಮಾರ್, ಕೃಷ್ಣ, ವಿದಾಂಯತ್ ಉಪಸ್ಥಿತರಿದ್ದರು.

ಬೆಳೆಗಳಿಗೆ ರಸಾಯನಿಕ ಗೊಬ್ಬರ ಬಳಕೆ ಸಂಬಂಧ ಕೃಷಿ ಇಲಾಖೆ ಶಿಫಾರಸು

ಮೈಸೂರು, ಮೇ 20(ಎಂಕೆ)– ಪೂರ್ವ ಮುಂಗಾರು ಆರಂಭದ ಬೆನ್ನಲ್ಲೆ ಕೃಷಿ ಆಧಾರಿತ ಬೆಳೆಗಳ ಉತ್ತಮ ಇಳುವರಿ ಹಾಗೂ ಮಣ್ಣಿನ ಫಲವತ್ತತೆ ಕಾಪಾಡಲು ಸಂಯುಕ್ತ ರಾಸಾಯನಿಕ ರಸಗೊಬ್ಬರಗಳನ್ನು ಬಳಕೆ ಮಾಡುವಂತೆ ಕೃಷಿ ಇಲಾಖೆ ಶಿಫಾರಸ್ಸು ಮಾಡಿದೆ.

ಮೈಸೂರು ಜಿಲ್ಲೆಯಲ್ಲಿ ಪ್ರಮುಖವಾಗಿ ಬೆಳೆಯುವ ಕೃಷಿ ಬೆಳೆಗಳಿಗೆ ಅಗತ್ಯ ಪ್ರಮಾಣದಲ್ಲೇ ರಸಗೊಬ್ಬರಗಳನ್ನು ರೈತರಿಗೆ ವಿತರಿಸುವುದು ಅತ್ಯವಶ್ಯಕವಾಗಿದ್ದು, ಅತಿಯಾದ ಯೂರಿಯಾ ಬಳಕೆಗೂ ಕಡಿವಾಣ ಹಾಕುವ ನಿಟ್ಟಿನಲ್ಲಿ ಸಲಹೆ ನೀಡಿದೆ.

ಪ್ರಮುಖ ಕೃಷಿ ಬೆಳೆಗಳಾದ ಭತ್ತ, ರಾಗಿ, ಮುಸುಕಿನ ಜೋಳ, ಕಬ್ಬು, ಹತ್ತಿ, ಅವರೆ, ಅಲಸಂದೆ, ಉದ್ದು ಹಾಗೂ ಹೆಸರು ಬೇಳೆಗಳಿಗೆ ನೀಡಬೇಕಾಗಿರುವ ರಸಗೊಬ್ಬರದ ಪ್ರಮಾಣವನ್ನು ಹಾಗೂ ವಿವಿಧ ಸಂಯುಕ್ತ ರಸಗೊಬ್ಬರಗಳ ಕಾಂಬಿನೇಷನ್ ಮೂಲಕ ನೀಡಬಹುದಾದ ರಸಗೊಬ್ಬರ ಪ್ರಮಾಣದ ಮಾಹಿತಿಯನ್ನು ಈಗಾಗಲೇ ಜಿಲ್ಲೆಯ ಎಲ್ಲಾ ರಸಗೊಬ್ಬರ ಮಾರಾಟಗಾರರಿಗೆ ನೀಡಿದ್ದು, ರೈತರು ರಸಗೊಬ್ಬರ ಖರೀದಿ ಮಾಡುವಾಗ ಶಿಫಾರಿತ ಪ್ರಮಾಣವನ್ನು ಮಾತ್ರ ಖರೀದಿಸಬೇಕೆಂದು ಕೋರಿದೆ.

ರೈತರು ಬೆಳೆಗಳಿಗೆ ಸಾರಜನಕವನ್ನು ಕೇವಲ ಯೂರಿಯಾ ಮೂಲಕ ನೀಡದೆ ಸಂಯುಕ್ತ ರಸಗೊಬ್ಬರಗಳಾದ 17:17:17, 19:19:19, 10:26:26 ಅಥವಾ ಅಮೋನಿಯಮ್ ಸಲ್ಫೇಟ್ ಅನ್ನು ಮೂಲಗೊಬ್ಬರವಾಗಿ ಬಳಸಿ ಯೂರಿಯಾವನ್ನು ಮೇಲುಗೊಬ್ಬರಕ್ಕಾಗಿ ಮಾತ್ರ ಬಳಸಲು ತಿಳಿಸಿದೆ.

ಹಾಗೆಯೇ ಮೇಲುಗೊಬ್ಬರವಾಗಿ ನ್ಯಾನೋ ಯೂರಿಯಾ ಮತ್ತು ನ್ಯಾನೋ ಡಿಎಪಿಯನ್ನು ಸಹ ರೈತರು ಯೂರಿಯಾ ಬದಲಾಗಿ ಬಳಸಬಹುದಾಗಿದೆ. ಬೆಳೆಗಳಿಗೆ ಸಮತೋಲನವಾಗಿ ರಸಗೊಬ್ಬರಗಳನ್ನು ಬಳಕೆ ಮಾಡುವುದರಿಂದ ಇಳುವರಿ ಹೆಚ್ಚುವ ಜೊತೆಗೆ ಮಣ್ಣಿನ ಫಲವತ್ತತೆ ಯನ್ನು ಕಾಪಾಡಬಹುದಾಗಿದೆ ಎಂದು ಕೃಷಿ ಇಲಾಖೆ ಜಂಟಿ ನಿರ್ದೇಶಕ ಕೆ.ಹೆಚ್.ರವಿ ಮಾಹಿತಿ ನೀಡಿದ್ದಾರೆ.

> **ಸಂಯುಕ್ತ ರಸಗೊಬ್ಬರ ಬಳಕೆಗೆ ಕೃಷಿ ಇಲಾಖೆ ಶಿಫಾರಸ್ಸು..**
> ಯೂರಿಯಾ–ಸೂಪರ್ ಫಾಸ್ಫೇಟ್–ಮ್ಯೂರೇಟ್ ಆಫ್ ಪೊಟ್ಯಾಷ್, ಡಿಎಪಿ–ಯೂರಿಯಾ–ಮ್ಯೂರೇಟ್ ಆಫ್ ಪೊಟ್ಯಾಷ್, 17:17:17–ಯೂರಿಯಾ, 20:20:20–ಸೂಪರ್ ಫಾಸ್ಫೇಟ್–ಯೂರಿಯಾ, 19:19:19–ಸೂಪರ್ ಫಾಸ್ಫೇಟ್–ಯೂರಿಯಾ, 10:26:26–ಯೂರಿಯಾ, 20:20:0:13–ಮ್ಯೂರೇಟ್ ಆಫ್ ಪೊಟ್ಯಾಷ್–ಯೂರಿಯಾ, 18:18:0–ಮ್ಯೂರೇಟ್ ಆಫ್ ಪೊಟ್ಯಾಷ್–ಯೂರಿಯಾ, ಅಮೋನಿಯಮ್ ಫಾಸ್ಫೇಟ್–ಯೂರಿಯಾ–ಮ್ಯೂರೇಟ್ ಆಫ್ ಪೊಟ್ಯಾಷ್ ಹಾಗೂ ಅಮೋನಿಯಮ್ ಸಲ್ಫೇಟ್–ಯೂರಿಯಾ–ಮ್ಯೂರೇಟ್ ಆಫ್ ಪೊಟ್ಯಾಷ್ ಸಂಯುಕ್ತ ರಸಗೊಬ್ಬರ ಬಳಕೆ ಕೃಷಿ ಇಲಾಖೆ ಶಿಫಾರಸ್ಸು ಮಾಡಿದೆ.

ಮೈಸೂರಿನ ಐಒಸಿಎಲ್‌ನಿಂದ ಅಸಮರ್ಪಕ ಪೆಟ್ರೋಲ್, ಡೀಸೆಲ್ ವಿತರಣೆ ಹಿನ್ನೆಲೆ

ಪರಿಶೀಲನೆಗೆ ಅಧಿಕಾರಿಗಳು, ಡೀಲರ್ಸ್ ಅಸೋಸಿಯೇಷನ್ ಪದಾಧಿಕಾರಿಗಳ ಜಂಟಿ ಸಮನ್ವಯ ಸಮಿತಿ ರಚನೆ

ಮೈಸೂರು, ಮೇ20(ಬಿಎಲ್‌ಯು)– ಮೈಸೂರಿನ ಮೇಟಗಳ್ಳಿಯಲ್ಲಿರುವ ಇಂಡಿಯನ್ ಆಯಿಲ್ ಕಾರ್ಪೊರೇಷನ್ ಡಿಪೋದಿಂದ ಪೆಟ್ರೋಲ್ ಬಂಕ್‌ಗಳಿಗೆ ಡೀಸೆಲ್ ಹಾಗೂ ಪೆಟ್ರೋಲ್ ವಿತರಣೆ ಬಗ್ಗೆ ಪರಿಶೀಲಿಸಲು ಇಂಡಿಯನ್ ಆಯಿಲ್ ಕಾರ್ಪೊರೇಷನ್ ಹಾಗೂ ಇಂಡಿಯನ್ ಆಯಿಲ್ ಡೀಲರ್ಸ್ ಅಸೋಸಿಯೇಷನ್ ಪದಾಧಿಕಾರಿಗಳ ಜಂಟಿ ಸಮನ್ವಯ ಸಮಿತಿ ರಚನೆ ಮಾಡಲಾಗಿದೆ.

ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣ ಬಳಿಯ ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್ (ಐಒಸಿಎಲ್) ಡಿವಿಷನಲ್ ಆಫೀಸ್‌ನಲ್ಲಿ ನಡೆದ ಐಒಸಿಎಲ್ ಅಧಿಕಾರಿಗಳು ಹಾಗೂ ಇಂಡಿಯನ್ ಆಯಿಲ್ ಡೀಲರ್ ಅಸೋಸಿಯೇಷನ್ ಪದಾಧಿಕಾರಿಗಳ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು.

ಐಒಸಿಎಲ್ ಮೈಸೂರು ವಿಭಾಗ ವ್ಯಾಪ್ತಿಯಲ್ಲಿ ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು, ರಾಮನಗರ, ತುಮಕೂರು ಜಿಲ್ಲೆಯಲ್ಲಿ 500 ಪೆಟ್ರೋಲ್ ಬಂಕ್‌ಗಳಿದ್ದು, ಸಮರ್ಪಕವಾಗಿ ಡೀಸೆಲ್ ಹಾಗೂ ಪೆಟ್ರೋಲ್ ವಿತರಿಸುತ್ತಿಲ್ಲ. ಅಲ್ಲದೆ ಐಒಸಿಎಲ್ ಅಧಿಕಾರಿಗಳು ಅನುಚಿತವಾಗಿ ವರ್ತಿಸುತ್ತಿದ್ದು, ಡೀಲರ್‌ಗಳ ಬಗ್ಗೆ ನಿರ್ಲಕ್ಷ್ಯ ಧೋರಣೆ ತಳೆದಿದ್ದಾರೆ ಎಂದು ಇಂಡಿಯನ್ ಆಯಿಲ್ ಡೀಲರ್ ಅಸೋಸಿಯೇಷನ್‌ನವರು ಇಂದು ಐಒಸಿಎಲ್ ಕಚೇರಿ ಮುಂದೆ ಪ್ರತಿಭಟನೆ ಮುಂದಾಗಿದ್ದರು.

ಈ ಸಂದರ್ಭದಲ್ಲಿ ಪ್ರತಿಭಟನೆಗೆ ಆಗಮಿಸಿದ ವಿತರಕರ ಜೊತೆ ಐಒಸಿಎಲ್ ಅಧಿಕಾರಿಗಳು ಸಭೆ ನಡೆಸಿದರು. ಈ ವೇಳೆ ಅಸಮರ್ಪಕ ಪೆಟ್ರೋಲ್, ಡೀಸೆಲ್ ವಿತರಣೆಯಿಂದ ಆಗುತ್ತಿರುವ ಸಮಸ್ಯೆ ಬಗ್ಗೆ ಅಸೋಸಿಯೇಷನ್‌ನವರು ಅಧಿಕಾರಿಗಳಿಗೆ ವಿವರಿಸಿದರು.

ಅಲ್ಲದೆ ವಿತರಕರ ಜೊತೆ ಐಒಸಿಎಲ್ ಅಧಿಕಾರಿಗಳು ಅನುಚಿತವಾಗಿ ವರ್ತಿಸುತ್ತಿದ್ದು, ನಮ್ಮ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸುತ್ತಿಲ್ಲ ಎಂದು ಆರೋಪಿಸಿದರು.

ಮಧ್ಯ ಪ್ರಾಚ್ಯ ಯುದ್ಧದ ಪರಿಣಾಮ ಸಮಸ್ಯೆ ಎದುರಾಗಿದೆ. ಆದರೂ ಇನ್ನು ಮುಂದೆ ಸಮರ್ಪಕವಾಗಿ ಪೆಟ್ರೋಲ್ ಹಾಗೂ ಡೀಸೆಲ್ ವಿತರಿಸಲಾಗುವುದು ಎಂದು ಅಧಿಕಾರಿಗಳು ಭರವಸೆ ನೀಡಿದರು.

ವಿತರಕರ ಸಮಸ್ಯೆ ಪರಿಹಾರ ಮಾಡಲು ಅಧಿಕಾರಿಗಳು ಸಕಾರಾತ್ಮಕವಾಗಿ ಸ್ಪಂದಿಸಿದರು. ಈ ಹಿನ್ನೆಲೆಯಲ್ಲಿ ಅಸೋಸಿಯೇಷನ್‌ನವರು ಪ್ರತಿಭಟನೆ ಕೈ ಬಿಟ್ಟರು. ಈ ಸಂದರ್ಭದಲ್ಲಿ ಡಿಪೋದಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ವಿತರಣೆ ಬಗ್ಗೆ ಪರಿಶೀಲನೆ ನಡೆಸಲು ಐಒಸಿಎಲ್ ಅಧಿಕಾರಿಗಳು ಹಾಗೂ ಡೀಲರ್ಸ್ ಅಸೋಸಿಯೇಷನ್ ಪದಾಧಿಕಾರಿಗಳ ಜಂಟಿ ಸಮನ್ವಯ ಸಮಿತಿ ರಚನೆ ಮಾಡಲಾಯಿತು.

ಐಒಸಿಎಲ್‌ನ ಡಿವಿಷನಲ್ ರೀಟೈಲ್ ಸೇಲ್ಸ್ ಮುಖ್ಯಸ್ಥ ಮದನೇಶ್ವರನ್, ಸೇಲ್ಸ್ ಮ್ಯಾನೇಜರ್‌ಗಳಾದ ಜಗದೀಶ್, ಅಭಿಜಿತ್ ಹಾಗೂ ಡೀಲರ್ಸ್ ಅಸೋಸಿಯೇಷನ್ ವತಿಯಿಂದ ಮೈಸೂರು ಜಿಲ್ಲಾ ಅಸೋಸಿಯೇಷನ್ ಅಧ್ಯಕ್ಷ ರಂಜಿತ್ ಹೆಗಡೆ, ಮಂಡ್ಯ ಜಿಲ್ಲಾ ಅಧ್ಯಕ್ಷ ಬಿ.ಹರ್ಷ, ಕೊಡಗು ಜಿಲ್ಲಾ ಅಧ್ಯಕ್ಷ ಅಶೋಕ್, ಚಾಮರಾಜನಗರ ಜಿಲ್ಲಾ ಅಧ್ಯಕ್ಷ ರವಿಶಂಕರ್, ರಾಮನಗರ ಜಿಲ್ಲಾ ಅಧ್ಯಕ್ಷ ಡಾ.ಗಿರೀಶ್, ತುಮಕೂರು ಜಿಲ್ಲಾ ಅಧ್ಯಕ್ಷ ಬಲಶ್ಯಾಮ್ ಸಿಂಗ್ ಅವರು ಜಂಟಿ ಸಮನ್ವಯ ಸಮಿತಿಯಲ್ಲಿ ಉಪಸ್ಥಿತರಿದ್ದರು.

ಇಂದು, ನಾಳೆ ನೀರು ಸರಬರಾಜು ವ್ಯತ್ಯಯ



ಮೈಸೂರು, ಮೇ 20–ಸೆಸ್ಕ್ ವತಿಯಿಂದ ಮೈಸೂರು ನಗರಕ್ಕೆ ನೀರು ಸರಬರಾಜು ಮಾಡುವ ಮೇಳಾಪುರ ನೀರು ಸರಬರಾಜು ಯೋಜನೆಯ ಯಂತ್ರಾಗಾರಕ್ಕೆ ವಿದ್ಯುತ್ ಸರಬರಾಜು ಮಾಡುವ 11 ಕೆ.ವಿ ಮಾರ್ಗದಲ್ಲಿ ವಿದ್ಯುತ್ ಕಂಬಗಳು ಶಿಥಿಲಗೊಂಡಿದ್ದು, ವಿದ್ಯುತ್ ಕಂಬಗಳನ್ನು ಬದಲಾಯಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದರಿಂದ ಮೇ 21 ಮತ್ತು 22 ರಂದು ಬೆಳಿಗ್ಗೆ 10ರಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ಸರಬರಾಜು ನಿಲುಗಡೆಯಾಗುವುದರಿಂದ ನೀರು ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ವಾರ್ಡ್ ನಂ.9 ರಿಂದ 16, 28 ರಿಂದ 39, 52, 53 ಇದಕ್ಕೆ ಸಂಬಂಧಪಟ್ಟ ಪ್ರದೇಶಗಳಾದ ಕೆಸರೆ, ರಾಜೇಂದ್ರ ನಗರ, ಸುಭಾಷ್‌ನಗರ, ಎನ್.ಆರ್.ಮೊಹಲ್ಲಾ, ಗಾಂಧಿನಗರ, ಉದಯಗಿರಿ, ರಾಜೀವ್‌ನಗರ 1, 2 ಮತ್ತು 3ನೇ ಹಂತ, ಶಾಂತಿನಗರ, ಕಲ್ಯಾಣ ಗಿರಿ, ಡಾ.ರಾಜ್‌ಕುಮಾರ್ ರಸ್ತೆಗೆ ಸೇರಿ ಕೊಂಡ ಪ್ರದೇಶಗಳು, ಯರಗನಹಳ್ಳಿ, ಸಿದ್ದಾರ್ಥ ಬಡಾವಣೆ, ಆಲನಹಳ್ಳಿ, ನಂದಿನಿ ಬಡಾವಣೆ, ಗಿರಿದರ್ಶಿನಿ ಬಡಾವಣೆ, ಗೌಸಿಯಾನಗರ, ಕ್ಯಾತಮಾರನಹಳ್ಳಿ ಹಾಗೂ ಇನ್ನಿತರ ಪ್ರದೇಶಗಳಲ್ಲಿ ನೀರು ಸರಬರಾಜಲ್ಲಿ ವ್ಯತ್ಯಯವಾಗಲಿದೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ಮೇ 20– ದೇವನೂರು ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಹೊಮ್ಮುವ 11 ಕೆ.ವಿ. ಕುಡಿಯುವ ನೀರಿನ ಫೀಡರ್ ವ್ಯಾಪ್ತಿಯಲ್ಲಿ ಶಿಥಿಲಗೊಂಡಿರುವ ವಿದ್ಯುತ್ ಕಂಬಗಳನ್ನು ಬದಲಾಯಿಸುವ ಕಾಮಗಾರಿ ಕೆಲಸದ ನಿಮಿತ್ತ ಮೇ 21 ರಂದು ಬೆಳಿಗ್ಗೆ 10 ರಿಂದ ಸಂಜೆ 5:30 ಘಂಟೆಯವರೆಗೆ ಮತ್ತು ಗೋಕುಲಂ ವಿದ್ಯುತ್ ಮಾರ್ಗದಲ್ಲಿ ಭೂಗತ ಕೇಬಲ್ ಅಳವಡಿಸುವ ಕೆಲಸದ ನಿಮಿತ್ತ ಗೋಕುಲಂ 3 ಮತ್ತು 2ನೇ ಹಂತ, ಕಾಂಟೂರು ರಸ್ತೆ, ಪಿ.ಕೆ ಕಾಲೋನಿ, ವಿ.ವಿ ಮೊಹಲ್ಲಾ 15 ಮತ್ತು 16ನೇ ಕ್ರಾಸ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ದರ್ಶನ್ ಆತ್ಮಹತ್ಯೆ ಯತ್ನ ಶುದ್ಧಸುಳ್ಳು

ಡಿಜಿಪಿ ಅಲೋಕ್‌ಕುಮಾರ್ ಸ್ಪಷ್ಟನೆ



ಅಲೋಕ್‌ಕುಮಾರ್

ಬೆಂಗಳೂರು, ಮೇ 20(ಕೆಎಂಶಿ)–ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಜೈಲು ಪಾಲಾಗಿರುವ ನಟ ದರ್ಶನ್‌ಗೆ ಸುಪ್ರೀಂಕೋರ್ಟ್ ಜಾಮೀನು ನಿರಾಕರಿಸಿದ್ದರಿಂದ ಹತಾಶರಾಗಿ ಆತ್ಮಹತ್ಯೆಗೆ ಯತ್ನಿಸಿದ್ದರು ಎಂಬ ವರದಿ ಶುದ್ಧಸುಳ್ಳು ಎಂದು ಕಾರಾಗೃಹ ಡಿಜಿಪಿ ಅಲೋಕ್‌ಕುಮಾರ್ ಸ್ಪಷ್ಟಪಡಿಸಿದ್ದಾರೆ. ನಟ ದರ್ಶನ್ ಆರೋಗ್ಯವಾಗಿದ್ದಾರೆ, ಯಾರಿಗೂ ಆತಂಕ ಬೇಡ. ಕಳೆದ ಎರಡು ವರ್ಷಗಳಿಂದ ಜೈಲಿನಲ್ಲಿರುವ ದರ್ಶನ್‌ಗೆ ಕೆಲವು ದಿನಗಳ ಹಿಂದೆ ಸುಪ್ರೀಂಕೋರ್ಟ್ ಜಾಮೀನು ನಿರಾಕರಿಸಿದ್ದು, ಮತ್ತೊಂದು ವರ್ಷ ಜೈಲಿನಲ್ಲಿಯೇ ಕಳೆಯುವಂತಾಗಿದೆ.

ದರ್ಶನ್ ಅಭಿಮಾನಿಗಳು ಆತಂಕಗೊಂಡು, ಕೆಲವರು ಜೈಲಿನ ಬಳಿ ಹೋಗಿದ್ದರು. ಪರಿಸ್ಥಿತಿ ಕೈಮೀರಿ ಹೋಗುತ್ತಿರುವ ವಿಷಯ ತಿಳಿದ ಬಳಿಕ ಕಾರಾಗೃಹ ಮತ್ತು ಸುಧಾರಣಾ ಸೇವೆಗಳ ಮಹಾನಿರ್ದೇಶಕ ಡಿಜಿಪಿ ಅಲೋಕ್‌ಕುಮಾರ್ ಸ್ಪಷ್ಟನೆ ನೀಡಿದ್ದಾರೆ. ಮಾಧ್ಯಮಕ್ಕೆ ತಿಳಿಸಿರುವ ಅವರು, ಆತ್ಮಹತ್ಯೆ ಯತ್ನದಂತಹ ಯಾವುದೇ ಘಟನೆ ನಡೆದಿಲ್ಲ, ಈ ಸುದ್ದಿ ಸತ್ಯಕ್ಕೆ ದೂರವಾಗಿದೆ, ದರ್ಶನ್ ಚೆನ್ನಾಗಿದ್ದಾರೆ. ದರ್ಶನ್ ಮತ್ತು ವಿಜಯಲಕ್ಷ್ಮಿ ಅವರ ವಿವಾಹ ವಾರ್ಷಿಕೋತ್ಸವದ ನಿಮಿತ್ತ ಅವರ ಪತ್ನಿ ಮನವಿ ಮೇರೆಗೆ ಪುತ್ರ ವಿನೀಶ್ ಜೊತೆ ಪರಪ್ಪನ ಅಗ್ರಹಾರ ಜೈಲಿಗೆ ಭೇಟಿ ನೀಡಿದ್ದರು ಎಂದರು.

ಶುಶ್ರೂಷಕಿಯರ ಮಾತುಗಳು ರೋಗಿಗಳಲ್ಲಿ ಸ್ಫೂರ್ತಿ ತುಂಬಿ ಗುಣಮುಖರಾಗಲು ಸಹಕಾರಿ

ಜಯದೇವ ಹೃದ್ರೋಗ ಸಂಸ್ಥೆ ವೈದ್ಯಕೀಯ ಅಧೀಕ್ಷಕ ಡಾ.ಕೆ.ಎಸ್.ಸದಾನಂದ ಅಭಿಮತ

ಮೈಸೂರು, ಮೇ 20(ಎಂಕೆ)– ಔಷಧಿಯ ಜೊತೆಗೆ ಆತ್ಮಸ್ಥೈರ್ಯ ತುಂಬುವ ವೈದ್ಯರು ಮತ್ತು ಶುಶ್ರೂಷಕಿಯರ (ನರ್ಸ್‌ಗಳು) ಮಾತುಗಳು ರೋಗಿಗಳಲ್ಲಿ ಸ್ಫೂರ್ತಿ ತುಂಬಿ ರೋಗವಾಸಿಯಾಗಲು ಸಹಕಾರಿ ಆಗಲಿದೆ ಎಂದು ಮೈಸೂರಿನ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ವೈದ್ಯಕೀಯ ಅಧೀಕ್ಷಕ ಡಾ.ಕೆ.ಎಸ್.ಸದಾನಂದ ತಿಳಿಸಿದರು.

ಮೈಸೂರಿನ ಹೆಬ್ಬಾಳದಲ್ಲಿರುವ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಶಾಖಾ ಮಠದ ಬಿಜಿಎಸ್ ಸಾಂಸ್ಕೃತಿಕ ಸಭಾ ಭವನದಲ್ಲಿ ಬಿಜಿಎಸ್ ಇಂಟರ್‌ನ್ಯಾಷನಲ್ ಫೌಂಡೇಷನ್ ಫಾರ್ ಹೆಲ್ತ್ ಸೈನ್ಸಸ್ ಸಹಯೋಗದೊಂದಿಗೆ ಬುಧವಾರ ಆಯೋಜಿಸಿದ್ದ ವಿಶ್ವ ಶುಶ್ರೂಷಕರ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ರೋಗಿಗಳ ಮನಸ್ಸನ್ನು ಅರ್ಥ ಮಾಡಿಕೊಂಡು ಅವರಿಗೆ ಧೈರ್ಯ ತುಂಬಿದಾಗ ರೋಗವಾಸಿ ಮಾಡುವುದು ಸುಲಭವಾಗುತ್ತದೆ ಎಂದರು.

ಶುಶ್ರೂಷಕಿಯರು ಆರೋಗ್ಯ ಸಂಸ್ಥೆಯ ಬೆನ್ನೆಲುಬು. ಸಮಾಜದ ಆರೋಗ್ಯಕ್ಕಾಗಿ ಹಗಲಿರುಳು ಶ್ರಮಿಸುವ ಎಲ್ಲಾ ಶುಶ್ರೂಷಕರ ಕೊಡುಗೆ ಅನನ್ಯವಾದುದು. ರೋಗಿಗಳ ಆರೈಕೆಯಲ್ಲಿ ದೇವರನ್ನು ಕಾಣಬೇಕು ಎಂಬ ಮದರ್ ತೆರೇಸಾ ಅವರ ಮಾತಿನಂತೆ ರೋಗಿಗಳ ಸೇವೆಯಲ್ಲಿ ಆರೋಗ್ಯ ಶಿಕ್ಷಕರಾಗಿ, ಆಪ್ತ ಸಲಹೆಗಾರರಾಗಿ, ಸಮಾಲೋಚಕರಾಗಿ ಸೇವೆಯಲ್ಲಿ ತೊಡಗಿಸಿಕೊಂಡಿರುವ ಶುಶ್ರೂಷಕರ ಜೀವನ ನಿಜಕ್ಕೂ ಸಾರ್ಥಕವಾದದು. ತಾಳ್ಮೆ, ಪ್ರೀತಿ ವಿಶ್ವಾಸದಿಂದ ರೋಗಿಗಳ ಮನಗೆಲ್ಲುವ ಹಾಗೂ ವೃತ್ತಿಯ ಘನತೆ ಎತ್ತಿ ಹಿಡಿಯುವ ನಿಟ್ಟಿನಲ್ಲಿ ಯುವ ಪೀಳಿಗೆ ಮುಂದಾಗಬೇಕು ಎಂದು ಕರೆ ನೀಡಿದರು.

'ಲೇಡಿ ವಿತ್ ದ ಲ್ಯಾಂಪ್(ದೀಪವನ್ನು ಹಿಡಿದ ಮಹಿಳೆ)' ಎಂದೇ ಖ್ಯಾತರಾಗಿರುವ ಫ್ಲಾರೆನ್ಸ್ ನೈಟಿಂಗೇಲ್ ಅವರ ಜನ್ಮದಿನದ ಅಂಗವಾಗಿ ವಿಶ್ವ ಶುಶ್ರೂಷಕರ ದಿನಾಚರಣೆ ಆಚರಿಸಲಾಗುತ್ತಿದ್ದು, ವಿಶ್ವದಾದ್ಯಂತ ಸೇವೆ ಸಲ್ಲಿಸುತ್ತಿರುವ ಶುಶ್ರೂಷಕರನ್ನು ಸ್ಮರಿಸುವ ಉದ್ದೇಶ ಹೊಂದಿದೆ. ಆಧುನಿಕ ನರ್ಸಿಂಗ್ ಶಿಕ್ಷಣಕ್ಕೆ ಬುನಾದಿ ಹಾಕಿದ ಫ್ಲಾರೆನ್ಸ್ ನೈಟಿಂಗೇಲ್, ವೈದ್ಯಕೀಯ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅಪಾರವಾಗಿದೆ ಎಂದು ಸ್ಮರಿಸಿದರು.

ಸನ್ಮಾನ: ಇದೇ ವೇಳೆ ನರ್ಸಿಂಗ್ ಕ್ಷೇತ್ರದ ಸಾಧಕರಾದ ಮನೋನಿಧಿ ಇನ್‌ಸ್ಟಿಟ್ಯೂಟ್ ಆಫ್ ನರ್ಸಿಂಗ್ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಡಾ.ಶೈಲಜಾ ಕೃಪಾನಿಧಿ, ಸೆಂಟ್ ಜೋಸೆಫ್ ನರ್ಸಿಂಗ್ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಡಾ.ವಿ.ಸಿ.ಗ್ರೇಸಿ, ಜೆಎಸ್‌ಎಸ್ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲರಾದ ಡಿ.ಎನ್.ರೇಣುಕಾದೇವಿ, ಶ್ರೀರಂಗಪಟ್ಟಣ ಸಾರ್ವಜನಿಕ ಆಸ್ಪತ್ರೆ ನರ್ಸಿಂಗ್ ಸೂಪರಿಂಟೆಂಡೆಂಟ್ ರುದ್ರಪ್ಪ ಅವರನ್ನು ಗೌರವಿಸಲಾಯಿತು.

ಮೈಸೂರಿನ ಅಪೋಲೊ ಬಿಜಿಎಸ್ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಅಮನ್ ನಾಯಕ್ ಮತ್ತಿತರರಿದ್ದರು.



ಮೈಸೂರಿನ ಹೆಬ್ಬಾಳದಲ್ಲಿರುವ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಶಾಖಾ ಮಠದ ಬಿಜಿಎಸ್ ಸಾಂಸ್ಕೃತಿಕ ಸಭಾ ಭವನದಲ್ಲಿ ಬುಧವಾರ ವಿಶ್ವ ಶುಶ್ರೂಷಕಿಯರ ದಿನ ಆಚರಿಸಲಾಯಿತು.

> ಆರೋಗ್ಯ ಕ್ಷೇತ್ರದಲ್ಲಿ ಶುಶ್ರೂಷಕಿಯರ ಸೇವೆ ಮಹತ್ವದ್ದಾಗಿದೆ. ನಗುಮುಖದೊಂದಿಗೆ ರೋಗಿಗಳ ಸೇವೆ ಮಾಡುತ್ತಾ ಅವರಿಗೆ ಧೈರ್ಯ ತುಂಬಿ ಹೊಸ ಚೈತನ್ಯ ನೀಡಿ, ಹೊಸ ಭರವಸೆ ನೀಡುವ ಶುಶ್ರೂಷಕಿಯರಿಗೆ ವೈದ್ಯಕೀಯ ಕ್ಷೇತ್ರದಲ್ಲಿ ದೊಡ್ಡ ಸ್ಥಾನವಿದೆ.
> – ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಕಾರ್ಯದರ್ಶಿ, ಬಿಜಿಎಸ್ ಮಠ ಮೈಸೂರು

> ಶುಶ್ರೂಷಕಿಯರು(ನರ್ಸ್‌ಗಳು) ಕೇವಲ ರೋಗಿಗಳಿಗೆ ಚಿಕಿತ್ಸೆ ನೀಡುವುದಿಲ್ಲ. ರೋಗಿಗಳೊಂದಿಗೆ ಸಹಾನುಭೂತಿಯಿಂದ ವರ್ತಿಸಿ, ಧೈರ್ಯ ತುಂಬಿ, ಗುಣಮುಖರಾಗಲು ಪ್ರೇರಣೆ ನೀಡುತ್ತಾರೆ. ಇಂತಹ ಅತ್ಯುತ್ತಮ ಆರೋಗ್ಯ ಸೇವೆ ನೀಡುವುದಕ್ಕಾಗಿ ನರ್ಸಿಂಗ್ ಕೋರ್ಸ್ ಆಯ್ಕೆಯು ಉತ್ತಮ ಆಯ್ಕೆಯಾಗಿರಲಿದೆ.
> – ಡಾ.ಕೆ.ಎಸ್.ಸದಾನಂದ, ವೈದ್ಯಕೀಯ ಅಧೀಕ್ಷಕ, ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಮೈಸೂರು


ವಾರ್ಡ್ ನಂ-3 ಮಹದೇಶ್ವರ ಬಡಾವಣೆ ಬಿಜೆಪಿ ಯುವ ಮುಖಂಡರಾದ
ಯೋಗೇಶ್. ಕೆ
ಜನ್ಮ ದಿನದ ಶುಭಾಶಯಗಳು
Happy Birthday
UK FINANCE
VISMAYA ADVERTISERS
8050302424
ಯೋಗೇಶ್ ಕೆ ಅಭಿಮಾನಿ ಬಳಗ